# ಅಪರಂಜಿ

ತಿಳಿನಗೆಯ ಕಾರಂಜಿ

ಜೂನ್ 2018

ಅತಂತ್ರ ವಿಧಾನ ಸಭೆ, ಯಾರಿಗೂ ಬಹುಮತ ಇಲ್ಲ
–ಸುದ್ದಿ

"ಹಂಗ್ ಅಸೆಂಬ್ಲಿ ಎಂದರೆ ಯಾರದೋ ಹಂಗಿನಲ್ಲಿರುವಂತಹದ್ದೇ?"




ಬಿಡಿ ಪ್ರತಿ: ರೂ.10.

**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ



# ಅಪರಂಜಿ

**ತಿಳಿನಗೆಯ ಕಾರಂಜಿ**

**ಸಂಪುಟ 35**

**ಸಂಚಿಕೆ - 9**

**ಜೂನ್ - 2018**

## *ಈ ಸಂಚಿಕೆಯಲ್ಲಿ.....*


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ಓದುಗರ ಪತ್ರ | | 3 |
| ಶರಲೇಖನ ಪುನರಾಗಮನ | ವತ್ಸನ | 5 |
| ಎರಡು ಕಿರುಗತೆಗಳು | ಹಾ.ಮ್ಯೆ ಸೂರಿ | 9 |
| ಮುನ್ನುಡಿ | ಸಿ.ಆರ್. ಸತ್ಯ | 11 |
| ಕಾಮನ್ ರೂಮ್ ಕಹಾನಿ | ಗಣೇಶ ಹೆಗ್ಗಡೆ | 14 |
| ಆಟೋರಾಜನ ಆಟಾಟೋಪ | ಆರತಿ ಘಟಿಕಾರ್ | 19 |
| ನೀವು ಯಾರು? | ಪಾಲಹಳ್ಳಿ ವಿಶ್ವನಾಥ್ | 25 |
| ಡಾ. ಪ್ರಭುಶಂಕರ | ಪ್ರೊ. ಎಂ. ಕೃಷ್ಣೇಗೌಡ | 26 |
| ಕಾಯಿಲೆಗಿಂತ ಕಷಾಯ ಕಹಿ | ನ. ರತ್ನ | 32 |
| ನಾಟಕವೂ..... ಮಳೆಯೂ...... | ಗುಂಡುರಾವ್ ದೇಸಾಯಿ | 37 |


ಮುಖಪುಟ ವ್ಯಂಗ್ಯಚಿತ್ರ - **ಜಿ.ಎಸ್. ನಾಗನಾಥ್**

ಪ್ರಕಾಶಕರು *:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003. email: koravanji42@hotmail.com ದೂರವಾಣಿ: 080-23345259

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ, ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



**ಉತ್ತರ ಕೊರಿಯಾ ಅಧ್ಯಕ್ಷರನ್ನು**

**ಕಿಂ ಕರ್ತವ್ಯಮೂಢ ಎಂದು ಕರೆಯಬಹುದೆ?!!**

★★★

ಗೆಲ್ಲಲೇ ಬೇಕಾದ ಒತ್ತಡದಲ್ಲಿ ಆರ್.ಸಿ.ಬಿ. – *ಕ್ರೀಡಾಸುದ್ದಿ*

**'ಒತ್ತಡ' ಇರುವಂತೆ ಕಾಣುತ್ತಿಲ್ಲವಲ್ಲ!!**

★★★

ದೆಹಲಿ ಹೈಕಮ್ಯಾಂಡ್‌ಗಳಿಗಿಂತ ಪದ್ಮನಾಭನಗರದ

ನನ್ನ ಮನೆ ನಿಮಗೆ ಹತ್ತಿರವಲ್ಲವೆ? – *ಜೆ.ಡಿ.ಎಸ್ ಹಿರಿಯರು*

**ಹೌದು!!**

★★★

ಆರೋಪ ನಿರಾಧಾರ; ಚಿದಂಬರಂ ಕುಟುಂಬ –ಸುದ್ದಿ

**ಹೇಗಾದರೂ ಚಿತ್-ಅಂಬರಂ ತಾನೆ?!**

★★★

**ಚುನಾವಣೆಯ ವಿಪರೀತ ಧಗೆಯನ್ನು**

**ನೋಡಿ ವರುಣನೂ ಕಂಬನಿ ಸುರಿಸಿದನಂತೆ!!**

★★★

**ದಿಗ್ಗಜ ವಿಮರ್ಶಕ ಗಿರಡ್ಡಿ ಗೋವಿಂದರಾಜರ ಆತ್ಮಕ್ಕೆ ಚಿರಶಾಂತಿ ಲಭಿಸಲಿ!!**

★★★

**ಬಳ್ಳಾರಿಯಲ್ಲಿ 'ಉಕ್ಕಿ' ಹರಿದ 'ರಿಪಬ್ಲಿಕ್' ಕಂಡು**
**ಅಪರಂಜಿ ಚಕಿತಳಾದಳಂತೆ !!**

★★★

ಮತಗಟ್ಟೆಗೆ ಬಂದ ನಾಗರಹಾವು – ಸುದ್ದಿ
**ಪಾಪ!, ಭಾತೃ ಪ್ರೇಮವಿರಬಹುದು !!**

# ಓದುಗರ ಪತ್ರ

ಮಹಾಸ್ವಾಮಿ,

ಅಪರಂಜಿ ಏಪ್ರಿಲ್ 2018ರ ‘ ಉಗಾದಿ ವಿಶೇಷಾಂಕ‘ ತುಂಬ ಚೆನ್ನಾಗಿ ಮೂಡಿಬಂದಿದೆ. ಅಲ್ಲಿಯ ಲೇಖನಗಳನ್ನು ನಾನು ಮತ್ತೆ ಮತ್ತೆ ಓದಿ ಸಂತೋಷಪಟ್ಟಿದ್ದೇನೆ. ನಾನೇ ನಕ್ಕಿದ್ದೇನೆ. ಕೆಲವು ಲೇಖನಗಳನ್ನು ನಮ್ಮ ಮನೆಯವರಿಗೆ ಕೇಳಿಸಿ ಅವರು ನಗುವಂತೆ ಮಾಡಿದ್ದೇನೆ. ಇವೆಲ್ಲಾ ಸುಮಾರು 8–10 ಸಿನಿಮಾಗಳನ್ನು ನೋಡಿದರೂ ದೊರೆಯಲಾರದಷ್ಟು ಖುಷಿ, ತೃಪ್ತಿ ಕೊಟ್ಟಿವೆ.

ಅದಕ್ಕಾಗಿ ಆ ಸಿನಿಮಾಗಳ ಟಿಕೆಟ್ ಬೆಲೆಯಷ್ಟಾದರೂ ಆಗುವಂತೆ 2000/– ರೂ ಗಳನ್ನು ಇದರೊಂದಿಗೆ ಕಳಿಸಿದ್ದೇನೆ. ದಯವಿಟ್ಟು ಸ್ವೀಕರಿಸಿ.

‘ ಕನ್ನಡ ವ್ಯಂಗ್ಯ ಸಾಹಿತ್ಯಕ್ಕೆ ಜಯವಾಗಲಿ‘ ಇಂತಿ,

**ಕೆ.ಎನ್. ಅನಂತರಾಮಯ್ಯ (3165 ಎಲ್)**

91, ಕೆ.ಇ.ಬಿ. ಬಡಾವಣೆ, ಬಿಟಿಎಂ 1ನೇ ಹಂತ ಬೆಂಗಳೂರು 560029

***ಮಾನ್ಯ ಕೆ.ಎನ್. ಅನಂತರಾಮಯ್ಯ ಅವರ ಅಭಿಮಾನಕ್ಕೆ ಅಪರಂಜಿ ಆಭಾರಿ. ಅವರ ಪ್ರೋತ್ಸಾಹ ಹೀಗೆಯೇ ಮುಂದುವರಿಯಲಿ– ಸಂಪಾದಕ.***

* * *

ಮಾನ್ಯರೇ

‘ನಮ್ಮ ನಿಮ್ಮಲ್ಲಿ’ ಅಂಕಣದಲ್ಲಿ ‘ಶಿವು‘ ಇಂಗ್ಲೆಂಡಿನಲ್ಲಿ ತಾವು ವಾಸವಾಗಿದ್ದ ದಿನಗಳನ್ನು ನೆನಪಿಸಿಕೊಂಡು ಲೇಖನವೊಂದನ್ನು ಬರೆದಿದ್ದಾರೆ.

ಇಂಗ್ಲೆಂಡಿನವರ ಜೊತೆ ಹೋಲಿಸಿಕೊಂಡು, ಭಾರತೀಯರೆಲ್ಲಾ ಸಂವೇದನಾರಹಿತರು, ಸೌಜನ್ಯರಹಿತರು ನಯ ನಾಜೂಕನ್ನು ತಿಳಿಯದವರೆಂದು ತಮ್ಮ ಮಿತ್ರ ವೈದ್ಯರೊಂದಿಗೆ ಹಂಚಿಕೊಂಡಿದ್ದಾರೆ. ಅಷ್ಟೇ ಆಗಿದ್ದರೆ ಹೇಳಿದವರ ಕೇಳಿದವರ ಪಾಡು ಎಂದು ನಾವು, ಅಪರಂಜಿ ಓದುಗರು, ಅದರ ಬಗ್ಗೆ ತಲೆಕೆಡಿಸಿಕೊಳ್ಳುವ ಅಗತ್ಯವಿರುತ್ತಿರಲಿಲ್ಲ. ಆದರೆ ವೈದ್ಯರೊಂದಿಗೆ ಹಂಚಿಕೊಂಡದ್ದನ್ನು ‘ಅಪರಂಜಿ‘ಯಲ್ಲಿ ಮುದ್ರಿಸಿದ ಉದ್ದೇಶ ಏನೋ ಗೊತ್ತಾಗಲಿಲ್ಲ.

ಸೌಜನ್ಯಕ್ಕೆ, ಸಂವೇದನೆಗೆ, ತಾಳ್ಮೆಗೆ, ಪರೋಪಕಾರಕ್ಕೆ, ನಯ ನಾಜೂಕುಗಳಿಗೆ, ಹಾಸ್ಯಪ್ರಜ್ಞೆಗೆ ಇತ್ಯಾದಿ ಇತ್ಯಾದಿ ಒಳ್ಳೆಯ ಗುಣಗಳಿಗೆ ದೃಷ್ಟಾಂತವಾಗಬಲ್ಲ ಸಾವಿರ ಸಾವಿರ ಘಟನೆಗಳು, ಸಂಗತಿಗಳು ಭಾರತದಲ್ಲಿವೆ. ಆದರೆ ಶಿವು ಅವನೆಲ್ಲಾ ಬಿಟ್ಟು ಋಣಾತ್ಮಕ ವಿಷಯಗಳನ್ನೇ ಕಷ್ಟಪಟ್ಟು ಆಯ್ದು ಅದನ್ನು

ಹಂಚಿಕೊಂಡಿರುವುದರ ಉದ್ದೇಶ, ಬಹುಶಃ ಅವರ ಪರದೇಶ ವ್ಯಾಮೋಹವನ್ನು ಬಿಂಬಿಸುತ್ತದೇನೋ.

ಅದರ ಬದಲು ಭಾರತೀಯರಲ್ಲಿರುವ ಸುಗುಣಗಳನ್ನು ಪಟ್ಟಿಮಾಡಿ ಅಪರಂಜಿಯ ಓದುಗರೊಂದಿಗೆ ಹೆಮ್ಮೆಯಿಂದ ಖುಷಿಯಿಂದ ಹಂಚಿಕೊಂಡಿದ್ದರೆ ಅವರ ಘನತೆ ಗೌರವಗಳು ಹೆಚ್ಚಾಗುತ್ತಿತ್ತೇನೋ.

ಇಂತೀ ತಮ್ಮ ವಿಶ್ವಾಸಿ,

**ಎಸ್. ರಾಮಮೂರ್ತಿ.**

***ಮಾನ್ಯ ರಾಮಮೂರ್ತಿಯವರ ಪ್ರತಿಕ್ರಿಯೆಗೆ ಅಪರಂಜಿ ಆಭಾರಿ.***

***ಯಾವುದೇ ಪತ್ರಿಕೆ ಬೆಳೆಯಬೇಕಾದರೆ ಇಂತಹ ಆರೋಗ್ಯಕರ ಚರ್ಚೆ ಅತ್ಯಗತ್ಯ. ವೇದ ಉಪನಿಷತ್ತುಗಳ ಸಂದೇಶವನ್ನು ಇಡಿ ಜಗತ್ತಿಗೆ ಸಾರಿದ ಪುಣ್ಯಭೂಮಿ ಭಾರತ. ಈ ನಮ್ರ ಸೇವಕನಿಗೆ ದೇಶದ ಹಿರಿಮೆಯ ಬಗ್ಗೆ ಇರುವ ಹೆಮ್ಮೆ ಗೌರವಗಳು ಯಾರಿಗೂ ಕಡಿಮೆಯಿಲ್ಲವೆಂದು ತಿಳಿಸಬಯಸುವೆ. ಸಮಾಜದ ಹುಳುಕುಗಳಿಗೆ ಕನ್ನಡಿ ಹಿಡಿಯುವುದು ಒಂದು ಪತ್ರಿಕೆಯ ಪವಿತ್ರ ಕರ್ತವ್ಯ. ಸಮಾಜ ಬದಲಾಗಲು ಸಾಧ್ಯವಾಗುವುದು ಇಂತಹ ಕನ್ನಡಿಗಳಿಂದಲೇ. ನಮ್ಮ ಕಹಳೆಯನ್ನು ನಾವೇ ಊದಿಕೊಂಡು ಸಂತಸಪಟ್ಟರೆ ಅದು ಕೇವಲ ಕಹಳೆಯ ಕೂಗಾದೀತು.***

***ಸಂಪಾದಕ***

# ರಾಂಗ್ ನಂಬರ್

ಪ್ರೊಫೆಸರ್ ತಮ್ಮ ಗೆಳೆಯರಿಗೆ ಫೋನ್ ಮಾಡಲೆಂದು ಟೆಲಿಫೋನ್ ಬಳಿ ಬಂದರು. ತಕ್ಷಣಕ್ಕೆ ಅವರಿಗೆ ತಾವು ಯಾರಿಗೆ ಫೋನ್ ಮಾಡಬೇಕೆಂಬುದು ಮರೆತೇಹೋಯಿತು. ಎಷ್ಟೋ ಹೊತ್ತಾದ ಮೇಲೆ ತಾವು ಫೋನ್ ಮಾಡಬೇಕಾಗಿದ್ದುದು ತಮ್ಮ ಸ್ನೇಹಿತ ಪುಟ್ಟುಗೆ ಅಂತ ತಿಳಿಯಿತು. ಆದರೆ ಪುಟ್ಟು ನಂಬರು ಎಲ್ಲಾದರೂ ಬರೆದಿದೀನಾ ಅಂತ ಹುಡುಕಿದರು. ಹುಡುಕುವ ಸಮಯದಲ್ಲೇ ಅವರಿಗೆ ನಂಬರು ನೆನಪಾಯಿತು. ಅರೆ ನನ್ನ ನೆನಪು ಅಷ್ಟೇನೂ ಹಾಳಾಗಿಲ್ಲ ಅಂತ ಸಂತಸದಿಂದ ನಂಬರು ತಿರುಗಿಸಿದರು. ಅತ್ತ ಕಡೆಯಿಂದ ಟೆಲಿಫೋನ್ ರಿಸೀವ್ ಮಾಡಿದ ಮಹಿಳೆ ಹಲೋ ಅಂದಾಗ ಪ್ರೊಫೆಸರು ಸಂತಸದಿಂದ ಹಲೋ ಇದು ಪುಟ್ಟು ಅವರ ಮನೆನಾ ಅಂತ ಕೇಳಿದರು. ಮಹಿಳೆ ಸ್ವಲ್ಪ ಗೊಂದಲಕ್ಕೆ ಒಳಗಾದಂತೆ ಕಂಡರೂ ಹೌದು, ಆದರೆ ನೀವು ಯಾರು ಅಂತ ಕೇಳಿದರು. ನಾನು ಪುಟ್ಟು ಸ್ನೇಹಿತ, ಅವನ ಜೊತೆ ಮಾತಾಡಬಹುದಾ ಅಂತ ಕೇಳಿದರು. ಮಹಿಳೆಗೆ ಇನ್ನಷ್ಟು ಗೊಂದಲ ಉಂಟಾಯಿತು. ಮಾತಾಡಬಹುದು ಆದರೆ ಅಂದು ಸ್ವಲ್ಪ ತೊದಲಿ, ಅವನಿಗೆ ಇನ್ನೂ ಒಂದೂವರೆ ವರ್ಷ ಅಂದರು. ಗಾಬರಿಯಿಂದ ಸಾರಿ ರಾಂಗ್ ನಂಬರ್ ಅಂದು ಟೆಲಿಫೋನ್ ಇಡುವ ಬದಲು ಪ್ರೊಫೆಸರು ಪರವಾಗಿಲ್ಲ, ನಾನು ಕಾಯ್ತೀನಿ ಅಂದರು. ಮಹಿಳೆಯೇ ಗಾಬರಿಯಿಂದ ಫೋನ್ ಕಟ್ ಮಾಡಿದಳು.

# ‘ದೇವತಾಪ್ರಭುತ್ವ’ ಪ್ರಸಂಗ

**ವತ್ಸನ**

ಸುಮಾರು ತಿಂಗಳುಗಳ ಹಿಂದೆ ಇಂದ್ರಲೋಕದಿಂದ ಸಾಕ್ಷಾತ್ ಇಂದ್ರದೇವನೇ ದಾನವ ಲೋಕದ ಮಂತ್ರಿ ಸುವರ್ಣಾಕ್ಷನೊಂದಿಗೆ ನಮ್ಮ ಫ್ಲಾಟಿಗೆ ಬಂದು ಶರಲೇಖನ ನೆರವು ಕೇಳಿದ ಬಗ್ಗೆ ನಾನು ಬರೆದ ವರದಿ (ಶಬ್ದಬೀಜಾಸುರ ಪ್ರಕರಣ) ನಿಮಗೆ ನೆನಪಿರಬಹುದೆಂದು ಭಾವಿಸುವೆ. ಆ ಪ್ರಸಂಗ ಯಶಸ್ವಿಯಾಗಿ ಪರಿಸಮಾಪ್ತಿಯಾದ ನಂತರ ನಮಗೆ ದೇವಲೋಕದೊಡನೆ ಯಾವ ಬಗೆಯ ಸಂಪರ್ಕವೂ ಇರಲಿಲ್ಲ. ಸಂಪರ್ಕಾನ ನಾವು ನಿರೀಕ್ಷಿಸಿಯೂ ಇರಲಿಲ್ಲ ಅನ್ನಿ. ಹಾಗಾಗಿ ಮೊನ್ನೆ ಸಂಜೆ ಟಿ.ವಿ. ನೋಡುತ್ತಾ ಕುಳಿತಿದ್ದಾಗ ಇಂದ್ರದೇವ ನೀಡಿದ್ದ ಮಂತ್ರದಂಡ ತಾನೇ ತಾನಾಗಿ ಅಲುಗಾಡಲು ಪ್ರಾರಂಭಿಸಿದಾಗ, ಅದು ಇಂದ್ರದೇವನ ಬರವನ್ನು ಸೂಚಿಸುತ್ತಿರಬಹುದು ಎಂದುಕೊಂಡೆ. ನನ್ನ ಊಹೆ ಸುಳ್ಳಾಗಿರಲಿಲ್ಲ. ಮರುಕ್ಷಣವೇ ಇಂದ್ರದೇವ ನಮ್ಮ ಡ್ರಾಯಿಂಗ್ ರೂಮಿನಲ್ಲಿ ಪ್ರತ್ಯಕ್ಷನಾಗಿ ನಮ್ಮ ಮುಂದಿನ ಸೋಫಾದ ಮೇಲೆ ಕುಳಿತಿದ್ದ.

‘ಕ್ಷಮಿಸಿ ಶರಲೇಖ ಮತ್ತು ವತ್ಸನ ಅವರೇ, ಒಂದು ಅತ್ಯಂತ ತುರ್ತಾದ ಸಮಸ್ಯೆ ಇದಿರಾಗಿದೆ. ಅದರ ಪರಿಹಾರಕ್ಕೆ ನಿಮ್ಮ ನೆರವು ಅತ್ಯಗತ್ಯವಾಗಿರುವುದರಿಂದ ನಾನು ಹೀಗೆ ದಿಢೀರನೆ ಬರಬೇಕಾಯಿತು‘ ಎಂದು ಇಂದ್ರದೇವ ಪ್ರಾರಂಭಿಸಿದ. ಶರಲೇಖ, ‘ಏನೂ ಸಂಕೋಚ ಬೇಡ ಇಂದ್ರದೇವ, ನೆರವನ್ನು ಬೇಡಿ ಬಂದವರಿಗೆ ಸಹಾಯ ನೀಡುವುದು ಒಬ್ಬ ವೃತ್ತಿನಿರತ ಪತ್ತೇದಾರ ತನ್ನ ಸೌಭಾಗ್ಯವೆಂದು ಭಾವಿಸುವನು. ಈಗ ಹೇಳಿ ಏನು ನಿಮ್ಮ ಸಮಸ್ಯೆ?‘ ಎಂದು ಸೌಜನ್ಯದಿಂದ ಕೇಳಿದ.

‘ನಮ್ಮ ಸಮಸ್ಯೆಗೆಲ್ಲಾ ಮೂಲಭೂತ ಕಾರಣ ನಿಮ್ಮ ಭೂಲೋಕದ್ದೆ ಎನ್ನಲು ವಿಷಾದವಾಗುತ್ತದೆ. ನಿಮ್ಮ ಲೋಕದ ಪ್ರಜಾಪ್ರಭುತ್ವವನ್ನು ಗಮನಿಸಿ ನಮ್ಮ ದೇವಲೋಕದಲ್ಲೂ ದೇವತೆಗಳು, ಗಂಧರ್ವರು, ಕಿನ್ನರರೂ ಹಾಗೂ ಕಿಂಪುರುಷರೂ ದೇವತಾಪ್ರಭುತ್ವಕ್ಕೆ ಒತ್ತಾಯಿಸುತ್ತಾ ಬಂದರು. ಕೊನೆಗೆ ಅವರ ಕೇಳಿಕೆಗೆ ನಾನು ಮಣಿಯಲೇ ಬೇಕಾಯಿತು. ಗಂಧರ್ವರು ಕಿನ್ನರರು ಸೇರಿ ನಮ್ಮ ದೇವತಾ ಪಕ್ಷಕ್ಕೆ ಇದಿರಾಗಿ ತಮ್ಮ ಕಿನ್ನರ ಪಕ್ಷವನು ರಚಿಸಿಕೊಂಡರು. ಕಳೆದ ವಾರ ನಮ್ಮ ಇಂದ್ರ ಸಭೆಗೆ ಒಂದು ಚುನಾವಣೆಯೂ ನಡೆಯಿತು. ನಮ್ಮ ದೇವತೆಗಳೇ ಗೆಲ್ಲುತ್ತಾರೆಂದು ನನಗೆ ಬಹಳ ವಿಶ್ವಾಸವಿತ್ತು. ಆದರೆ ಯಾವುದೋ ಮಾಯದಲ್ಲಿ ಗಂಧರ್ವ ಕಿನ್ನರರ ಗುಂಪು ನಮಗಿಂತ ನಾಲ್ಕು ಹೆಚ್ಚು ಮತ ಗಳಿಸಿಬಿಟ್ಟಿದೆ. ನಾಳೆ ಸಂಜೆ ಇಂದ್ರಸಭೆಯಲ್ಲಿ ಫ್ಲೋರ್ ಟೆಸ್ಟ್ ಇದೆ. ನಾವು ಹೇಗಾದರೂ ಬಹುಮತ ಸಾಬೀತುಪಡಿಸಬೇಕಾಗಿದೆ.’ ಎಂದ ಇಂದ್ರದೇವ.

'ಇದರಲ್ಲಿ ಹುಲುಮಾನವರಾದ ನಮ್ಮಿಂದ ಮಾಡುವುದಾದರೂ ಏನಿದೆ?' ಎಂದು ಪ್ರಶ್ನಿಸಿದ ಶರಲೇಖ.

'ಖಂಡಿತಾ ಇದೆ. ಅದನ್ನೇ ವಿವರಿಸಲು ಹೊರಟಿದ್ದೆ. ನಮ್ಮ ಅದೃಷ್ಟಕ್ಕೆ ಮೂವರು ಗಂಧರ್ವರು ಮತ್ತು ಇಬ್ಬರು ಕಿನ್ನರಿಯರು ನಮ್ಮ ಪರವಾಗಿ ಮತ ಚಲಾಯಿಸಲು ನಿರ್ಧರಿಸಿದ್ದಾರೆ. ಆ ಐವರನ್ನು ನಾಳೆ ಸಂಜೆಯವರೆಗೆ ಇತರ ಕಿನ್ನರರನ್ನು ಭೇಟಿ ಮಾಡದಂತೆ ಕಾಪಾಡಬೇಕಾಗಿದೆ. ದೇವಲೋಕದಲ್ಲಿ ಎಲ್ಲಿ ಅವಿತಿಟ್ಟರೂ ಕಿನ್ನರರು ಅವರನ್ನು ಪತ್ತೆ ಹಚ್ಚಿಬಿಡುತ್ತಾರೆ. ಹಾಗಾಗಿ ಅವರನ್ನು ನಾಳೆ ಸಂಜೆಯವರೆಗಿನ ಭದ್ರತೆಗಾಗಿ ನಿಮ್ಮ ಬಳಿ ಬಿಟ್ಟುಹೋಗೋಣವೆಂದು ನಿರ್ಧರಿಸಿ ಇಲ್ಲಿಗೆ ಬಂದೆ. ನಿಮ್ಮ ಒಪ್ಪಿಗೆ ಇದೆಯೆಂದು ಭಾವಿಸುವೆ' ಎಂದ ಇಂದ್ರ ದೇವ.

'ಎಲ್ಲಿ ಆ ಐವರು?' ಶರಲೇಖ ಕೇಳಿದ.



'ಅವರ ಸ್ವಸ್ವರೂಪದಲ್ಲಿ ಮಾನವರ ಕಣ್ಣಿಗೆ ಅವರು ಕಾಣರು. ಹಾಗಾಗಿ ಚಿಕ್ಕ ಮಕ್ಕಳ ರೂಪ ಧರಿಸಿ ಇಲ್ಲಿದ್ದಾರೆ ನೋಡಿ' ಎಂದು ಇಂದ್ರ ಹೇಳುತ್ತಿದ್ದಂತೆ ನಮ್ಮ ಡ್ರಾಯಿಂಗ್ ರೂಮಿನ ಬಲ ಅಂಚಿನಲ್ಲಿ ಮೂವರು ಹುಡುಗರು, ಇಬ್ಬರು ಹುಡುಗಿಯರು ನಿಂತಿದ್ದರು. ಅವರೆಲ್ಲರ ಮಾರುವೇಷ ಬಹು ಚೆನಾಗಿತ್ತು. ಎಲ್ಲರೂ ಯಾವುದೋ ಒಂದು ಕಾನ್ವೆಂಟಿನ ಸಮವಸ್ತ್ರ ಧರಿಸಿದ್ದಂತೆ ಕಾಣುತ್ತಿತ್ತು. ಅವರುಗಳ ಕಣ್ಣಿನ ಅಂಚಿನಲ್ಲಿ ಮಿಂಚುತ್ತಿದ್ದ ತುಂಟತನ, ಅವರುಗಳ ಮುಗುಳುನಗು ಬಹು ಮೋಹಕವಾಗಿತ್ತು.

ಇಂದ್ರದೇವ ನಮಗೆ ಅವರನ್ನು ಪರಿಚಯಿಸಿದ. 'ಇವಳು ವಿದ್ಯುಲ್ಲತೆ, ಪಕ್ಕದಲ್ಲಿರುವವಳು ವಿದ್ಯುನ್ಮಾಲಿನಿ, ನಂತರ ವಿದ್ಯುಜಿಹ್ವ, ವಿದ್ಯುಚಿತ್ತ ಮತ್ತು ವಿದ್ಯುಸೇನ. ಇವರಿಗೆ ಈ ರೂಪದಲ್ಲಿ ತಮ್ಮ ಕಿನ್ನರತ್ವದ ಅರಿವು ಇರದು. ಆದರೆ ಕಿನ್ನರನೊಬ್ಬ ಬಂದು ಅವರನ್ನು ಮುಟ್ಟಿದರೆ ಸಾಕು ಅವರಿಗೆ ತಮ್ಮ ಸ್ವಸ್ವರೂಪ ನೆನಪಾಗಿ

ಅವನೊಂದಿಗೆ ಹೊರಟುಹೋಗುವ ಸಾಧ್ಯತೆ ಇದೆ. ನೀವು ಈ ಮಕ್ಕಳನ್ನು ರಕ್ಷಿಸಲು ಅನುಕೂಲವಾಗುವಂತೆ ನಿಮ್ಮಿಬ್ಬರಿಗೂ ಈ ಉಂಗುರಗಳನ್ನು ಕೊಡುತ್ತೇನೆ. ಇದನು ನೀವುಗಳು ಧರಿಸಿರುವವವರೆಗೂ ಯಾವ ಕಿನ್ನರನೂ ನಿಮ್ಮ ಬಳಿ ಸುಳಿಯಲಾರ. ನಾಳೆ ಸಂಜೆ ಸರಿಯಾಗಿ ಒಂಭತ್ತು ಗಂಟೆಗೆ ನಾನು ಬಂದು ಇವರನ್ನು ಕರೆದೊಯ್ಯುವೆ. ನಿಮ್ಮ ಸಹಾಯಕ್ಕೆ ನಮ್ಮ ದೇವತಾ ಪಕ್ಷ ಆಭಾರಿ' ಎಂದು ಹೇಳಿ ಅಂತರ್ಧಾನವಾದ ಇಂದ್ರದೇವ.

ಒಮ್ಮೆಲೇ ಐದು ಮಕ್ಕಳು ನಿಮ್ಮ ಮನೆಗೆ ಬಂದು, ಅವರಿಗೆ ಆಶ್ರಯ ಕೊಡಬೇಕಾದ ಪರಿಸ್ಥಿತಿ ನಿಮಗೆ ಒದಗಿ ಬಂದರೆ ಹೇಗಿರುತ್ತೆ ಎಂಬುದು ಆಗ ತಿಳಿಯಿತು. ಮೊದಲು ವಿದ್ಯುನ್ಮಾಲಿನಿ 'ಅಂಕಲ್ ಹಸಿವಾಗ್ತಾಯಿದೆ. ಏನಾದ್ರೂ ತಿನ್ನುಕ್ಕೆ ಕೊಡ್ತೀರಾ?' ಅಂತ ಶುರು. ಸರೋಜಮ್ಮ ಬೇರೆ ತಮ್ಮ ಕೆಲಸ ಮುಗಿಸಿ ಮನೆಗೆ ಹೋಗಿಬಿಟ್ಟಿದ್ದರು. ಫ್ರಿಜ್ ಎಲ್ಲಾ ತಲಾಷ್ ಮಾಡಿ ಫ್ರೂಟಿ, ಚಾಕಲೇಟುಗಳನ್ನು ಮಕ್ಕಳಿಗೆ ಹಂಚಿದ್ದಾಯಿತು. ಇನ್ನು ಮಲಗುವ ವ್ಯವಸ್ಥೆ ಆಗಬೇಕಲ್ಲಾ. ಶರಲೇಖನ ರೂಮಿನಲ್ಲಿ ಮೂವರು ಹುಡುಗರನ್ನು ಸೇರಿಸಿ, ನನ್ನ ರೂಮಿನಲ್ಲಿ ಹುಡುಗಿಯರಿಗೆ ವ್ಯವಸ್ಥೆ ಮಾಡಿ ನಾವಿಬ್ಬರೂ ಡ್ರಾಯಿಂಗ್ ರೂಮಿನ ಸೋಫಾಗಳ ಮೇಲೆ ಪವಡಿಸಿದೆವು.

ಪವಡಿಸಿದೆವು ಎಂಬುದು ಸರಿಯಲ್ಲ. ಪವಡಿಸಲು ಪ್ರಯತ್ನಿಸಿದೆವು. ನಮ್ಮಿಬ್ಬರಿಗೂ ನಿದ್ರೆ ಬರಲಿಲ್ಲ. ದೇವಲೋಕವಾದರೇನು, ಚುನಾವಣೆ ಚನಾವಣೆಯೇ. ನ್ಯಾಯವಾಗಿ ಬಹುಮತ ಪಡೆದಿರುವ ಪಕ್ಷಕ್ಕೆ ಅಧಿಕಾರ ತಪ್ಪಿಸಲು ಇಂದ್ರದೇವ ಹಂಚಿಕೆ ಮಾಡಿ ತನ್ನ ಅಧರ್ಮದ ಕೆಲಸದಲ್ಲಿ ನಮ್ಮನ್ನೂ ಸಿಲುಕಿಸಿ ಬಿಟ್ಟನಲ್ಲಾ ಎಂದು ಯೋಚನೆ ನಮ್ಮಿಬ್ಬರನ್ನೂ ಕಾಡಿತು. ಕೊನೆಗೆ ಶರಲೇಖ 'ವತ್ಸನ ಯೋಚನೆ ಬೇಡ. ನಾಳೆ ಇಂದ್ರ ಬರುವ ಹೊತ್ತಿಗೆ ಹೇಗಾದರೂ ಒಂದು ಪರಿಹಾರ ಕಂಡುಹಿಡೀತೇನೆ' ಎಂಬ ಆಶ್ವಾಸನೆ ಕೊಟ್ಟನಂತರ ನಿದ್ದೆ ಬಂತು. ಮಾರನೆಯ ಬೆಳಗ್ಗೆ ಸರೋಜಮ್ಮ ಬಂದರು ಅವರಿಗೆ ನನ್ನ ತಂಗಿಯ ಮಕ್ಕಳು ಅವರ ಸ್ನೇಹಿತರೊಡನೆ ಬೆಂಗಳೂರಿಗೆ ಪ್ರವಾಸ ಬಂದಿದ್ದಾರೆ ಅಂತ ಹೇಳಿ ಪರಿಸ್ಥಿತಿ ನಿಭಾಯಿಸಿದೆ. ಅವರಿಗೋ ಮಕ್ಕಳು ಮನೆಗೆ ಬಂದಿದ್ದಾರೆಂಬ ಸಂಭ್ರಮ. ಬಹು ಅಕ್ಕರೆ ಅಕರಾಸ್ತೆಯಿಂದ ಮಕ್ಕಳಿಗೆ ತಿಂಡಿ ಮಾಡಿ ತಿನಿಸಿದರು. ಅನಂತರ ಸಂಜೆಯವರೆಗೆ ಅವಕ್ಕೆ ಮನರಂಜನೆ ಒದಗಿಸಬೇಕಲ್ಲಾ. ಟಿ.ವಿ. ಹಚ್ಚಿ ಅದರ ಮುಂದೆ ಕೂರಿಸಿದೆ ಬಹು ಆಸಕ್ತಿಯಿಂದ ಮಕ್ಕಳು ಟಿ.ವಿ. ನೋಡಲು ಶುರು ಮಾಡಿದವು. ಸರೋಜಮ್ಮನವರ ಆರೈಕೆ ಮತ್ತು ಛಾನೆಲ್ ಸರ್ಫಿಂಗ್‌ನ ಮೋಜು ಇವುಗಳಲ್ಲೇ ದಿನ ಕಳೆದುಹೋಯಿತು. ಸಂಜೆಯಾಗುತ್ತಿದ್ದಂತೆ ನನಗೆ ಮತ್ತೆ ಚಿಂತೆ ಶುರುವಾಯಿತು. ಶರಲೇಖ ಏನಾದರೂ ಮಾಡುತ್ತೇನೆ ಎಂದವನು ದಿನವೆಲ್ಲಾ ನಾಪತ್ತೆಯಾಗಿದ್ದ. ಅವನು ಮನೆಗೆ ಹಿಂತಿರುಗಿದಾಗ ಎಂಟೂವರೆ ದಾಟಿತ್ತು. ಒಂಭತ್ತಕ್ಕೆ ಸರಿಯಾಗಿ ಇಂದ್ರದೇವ ಪ್ರತ್ಯಕ್ಷನಾದ. ಮಕ್ಕಳೆಲ್ಲಾ ಟಿ.ವಿ. ಸೀರಿಯಲ್ಲಿನಲ್ಲೇ ಮಗ್ನರಾಗಿದ್ದವು. ಇಂದ್ರದೇವನ ಆಗಮನದಿಂದ ಮಕ್ಕಳಿಗೆ ಸ್ವಸ್ವರೂಪ ಜ್ಞಾನ ಮರುಕಳಿಸಿತು. ಇಂದ್ರದೇವ ಅವರನ್ನು ಕುರಿತು, ' ಬನ್ನಿ ಇನ್ನು ಇಲ್ಲಿನ ವಾಸ್ತವ್ಯ ಮುಗಿಯಿತು. ದೇವಲೋಕಕ್ಕೆ ತೆರಳೋಣ.

ಫ್ಲೋರ್ ಟೆಸ್ಟ್ ಸಮಯ ಸನ್ನಿಹಿತವಾಗಿದೆ' ಎಂದ. ಮಕ್ಕಳು ವಿಚಲಿತರಾಗಲಿಲ್ಲ. ಎಲ್ಲ ಮಕ್ಕಳು ವಿದ್ಯುನ್ಮಾಲಿನಿಯತ್ತ ನೋಡಿದರು. ವಿದ್ಯುನ್ಮಾಲಿನಿ ಇಂದ್ರನನ್ನು ಉದ್ದೇಶಿಸಿ, 'ಇಂದ್ರದೇವ ನಿನ್ನ ಆಮಿಷ, ಆಶ್ವಾಸನೆಗಳ ಬಲೆಯಲ್ಲಿ ಬಿದ್ದು ನಾವು ನಮ್ಮ ಪಕ್ಷವನ್ನು ತ್ಯಜಿಸಿ ನಿನ್ನೊಡನೆ ಬಂದೆವು. ನಿನ್ನೆ ರಾತ್ರಿ ನಮ್ಮೆಲ್ಲರ ಕನಸಿನಲ್ಲಿ ಶರಲೇಖ ಅಂಕಲ್ ಬಂದು ನಾವು ಮಾಡುತ್ತಿದ್ದ ಅಗಾಧ ತಪ್ಪಿನ ಬಗ್ಗೆ ನಮಗೆ ಮನವರಿಕೆ ಮಾಡಿಕೊಟ್ಟರು. ಪ್ರಜಾಪ್ರಭುತ್ವ ಈ ಭೂಲೋಕದಲ್ಲಿ ಬೇರೂರಬೇಕಾದರೆ ಅನೇಕ ಸಜ್ಜನರು ಮಾಡಿದ ತ್ಯಾಗಗಳನ್ನು ನಮಗೆ ಬಿಡಿಸಿ ಹೇಳಿದರು. ನಮ್ಮ ದೇವಲೋಕದಲ್ಲಿ ದೇವತಾಪ್ರಭುತ್ವ ಬೇರೂರಬೇಕಾದರೆ ನಮ್ಮ ಇಂತಹ ನಡವಳಿಕೆಗಳು ಖಂಡಿತ ಸಹಾಯಕವಾಗದು. ಹಾಗಾಗಿ ನಾವೆಲ್ಲರೂ ನಮ್ಮ ಕಿನ್ನರ ಪಕ್ಷಕ್ಕೇ ಹಿಂತಿರುಗುತ್ತಿದ್ದೇವೆ.' ಎಂದು ಹೇಳಿದ ತಕ್ಷಣ ಆ ಐದು ಮಕ್ಕಳೂ ಅಂತರ್ಧಾನವಾದರು.

ಇಂದ್ರದೇವ 'ಸರ್ವನಾಶ ಸರ್ವನಾಶ' ಎಂದು ಹಲುಬುತ್ತಾ ಅಂತರ್ಧಾನವಾದ. ಇದೆಲ್ಲಾ ಹೇಗಾಯಿತು ಎಂದು ನಾನು ಶರಲೇಖನನ್ನು ಕೇಳಿದೆ.

ಅವ ಹೀಗೆಂದ.

'ನೋಡು ವತ್ಸನ, ಹಿಂದೊಮ್ಮೆ ನಾನು ಲದ್ದಾಕ್ ಹೋಗಿ, ಅಲ್ಲಿನ ಮುಖ್ಯ ಪಟ್ಟಣ ಲೇಹ್‌ನ ಬಳಿ ಇರುವ ಥಿಕ್ಸೆ ಮೊನಾಸ್ಟರಿಯಲ್ಲಿ ಉಳಿದುಕೊಂಡೆ. ಅದೊಂದು ಬಹು ಪ್ರಾಚೀನ ಬೌದ್ಧ ವಿಹಾರ. ಅಲ್ಲಿ, ವಿಪಾಸನಾ, ಧ್ಯಾನಗಳ ಜೊತೆಗೆ ಒಂದು ವಿಶಿಷ್ಟ ವಿದ್ಯೆಯನ್ನೂ ಕಲಿಯುವ ಅವಕಾಶವಿದೆ. ಅದು ಸ್ವಪ್ನಭೇದನ ವಿದ್ಯೆ. ಈ ವಿದ್ಯೆಯನ್ನು ಕರಗತ ಮಾಡಿಕೊಂಡವರು, ಯಾವುದೇ ವ್ಯಕ್ತಿಯ ಕನಸನ್ನು ಪ್ರವೇಶಿಸಿ ಆ ಕನಸಿನ ಲೋಕದ ಪ್ರಜೆಯಾಗುವುದು ಸಾಧ್ಯ. ಆರು ತಿಂಗಳುಗಳ ಕಾಲ ಭೌದ್ದ ಭಿಕ್ಕು ರಿನ್‌ಪೋಛೆ ಅವರಿಂದ ನಾನು ಈ ವಿದ್ಯೆಯನ್ನು ಕಲಿತೆ. ಈ ಮಕ್ಕಳ ವೇಷದ ಕಿನ್ನರರಿಗೆ ಮನುಷ್ಯ ರೂಪದಲ್ಲಿ ತಮ್ಮ ಸ್ವಸ್ವರೂಪದ ಅರಿವು ಇರುವುದಿಲ್ಲವೆಂದು ಇಂದ್ರದೇವ ಹೇಳಿದ್ದ. ಅವರ ಕನಸನ್ನು ಪ್ರವೇಶಿಸಿ ಅವರೊಂದಿಗೆ ಏಕೆ ಮಾತನಾಡಬಾರದು ಎಂದು ಯೋಚಿಸಿ, ನಿನ್ನೆ ರಾತ್ರಿ ಈ ಕಿನ್ನರರ ಕನಸುಗಳನ್ನು ಪ್ರವೇಶಿಸಿ ಅವರುಗಳು ಇಟ್ಟ ಹೆಜ್ಜೆ ದೇವತಾಪ್ರಭುತ್ವಕ್ಕೆ ಹೇಗೆ ಮಾರಕ ಎಂಬುದನ್ನು ವಿವರಿಸಿದೆ. ಈ ಕಿನ್ನರರು ಬುದ್ಧಿವಂತರು. ಆ ವಿದ್ಯುನ್ಮಾಲಿನಿಯಂತೂ ತೀರ ಜಾಣೆ. ಆ ಕನಸಿನ ಲೋಕದಲ್ಲೇ ಆವಳು ಎಲ್ಲರೊಂದಿಗೂ ಚರ್ಚಿಸಿ ಪುನಃ ತಮ್ಮ ಪಕ್ಷಕ್ಕೆ ಹೋಗುವ ನಿರ್ಧಾರವನ್ನು ಕೈಗೊಂಡರು. ನನ್ನ ಮುಖ್ಯ ಕೆಲಸ ಮುಗಿದದ್ದರಿಂದ ನಾನು ಇವತ್ತು ಬೇರೆ ಕಾರ್ಯಗಳ ಒತ್ತಡದಿಂದ ದಿನವೆಲ್ಲಾ ಹೊರಗಿರಬೇಕಾಯಿತು. ಅಂತೂ ಈಗ ನಿನ್ನ ಮನಸ್ಸಾಕ್ಷಿ ನಿರಾತಂಕವಾಗಿದೆ ತಾನೇ ?' ಎಂದು ಕೇಳಿದ ಶರಲೇಖ.

'ಭಲೆ ಶರಲೇಖ ನಿನ್ನ ಸ್ವಪ್ನ ಭೇದನ ವಿದ್ಯೆಯಿಂದ ಅಂದು ಅಡ್ಡದಾರಿ ಹಿಡಿದ ಅಣು ವಿಜ್ಞಾನಿಯೊಬ್ಬನನ್ನು ಪತ್ತೆ ಹಚ್ಚಿದ್ದೆ. (ರಂಗು ರಂಗಿನ ಛತ್ರಿ ಪ್ರಕರಣ) ಈಗ ದೇವತಾ ಪ್ರಭುತ್ವವನ್ನು ಎತ್ತಿ ಹಿಡಿದೆ. ಇಂದ್ರದೇವನಿಗೇ ಸಡ್ಡು ಹೊಡೆದದ್ದಕ್ಕೆ ನನ್ನ ಅಭಿನಂದನೆಗಳು' ಎಂದೆ.

# ಎರಡು ಕಿರುಗತೆಗಳು

ಹಾ.ಮ್ಯೆ ಸೂರಿ

## ಹೆಲ್ಮೆಟ್

ಮೊನ್ನೆ ನಾನು ಶೀನ ಹಳ್ಳೀಲಿರೋ ಕರೆ ಏರಿ ಮೇಲೆ ಪ್ಯೂರ್ ಹವಾ ಕುಡಿತಾ ಹೊರಟಿದ್ದೆವು.

“ಈಗ ಹೆಲ್ಮೆಟ್ ಹಾಕಿಕೊಳ್ದೇ ದ್ವಿಚಕ್ರ ವಾಹನ ಸವಾರಿ ಮಾಡಬಹುದಂತೆ” ಅಂದ ಶೀನ.

“ಯಾರು ಹೇಳಿದ್ರು, ಐ.ಎಸ್.ಐ. ಮಾರ್ಕ್ ಇರೋ ಹೆಲ್ಮೆಟ್ ಬಳಸಬೇಕು ಇಲ್ಲದಿದ್ರೆ ಜುಲ್ಮಾನೆ ಗ್ಯಾರಂಟಿ” ಅಂದೆ ನಾನು. “ಒಂದು ಸಮೀಕ್ಷೆ ಪ್ರಕಾರ ಇತ್ತೀಚೆಗೆ ಪಾದಚಾರಿಗಳ ಜೀವಕ್ಕೆ ಅಪಾಯ ಆಗ್ತಿದೆಯಂತೆ. ದ್ವಿಚಕ್ರ ವಾಹನಿಗರು ಅಪಘಾತ ಮಾಡಿದಾಗಲೆಲ್ಲ ಅನೇಕ ಪಾದಚಾರಿಗಳು ಅಸು ನೀಗಿದ್ದಾರಂತೆ” ಅಂದ ಶೀನ.

“ಹಾಗಾದ್ರೆ, ಪಾದಚಾರಿಗಳೇ ಹೆಲ್ಮೆಟ್ ಧರಿಸಲಿ” ಎಂದೆ ನಾನು.

“ಮೊನ್ನೆ ಏನಾಯ್ತು ಗೊತ್ತಾ, ಹೇಳ್ತೀನಿ ಕೇಳು. ನಿನ್ನ ಎರಡೂ ಕಿವಿ ಓಪನ್ ಮಾಡ್ಕೊ. ಮೊನ್ನೆ ನಗರದಲ್ಲಿ ದ್ವಿಚಕ್ರ ವಾಹನ ಒಂದು ರಸ್ತೆ ಬಿಟ್ಟು ಪಕ್ಕದ ಆಳವಾದ ಗುಂಡಿಗೆ ಬಿತ್ತು. ಆಗ ಎಲ್ಲಾ ಸೇರಿದರು. ಆ ವಾಹನ ಎತ್ತಿ ರಸ್ತೆ ಮೇಲೆ ನಿಲ್ಲಿಸೋ ಹೊತ್ತಿಗೆ ಸಾಕು ಸಾಕಾಯ್ತು. ಸವಾರ ಕೆಳಗೆ ಬಿದ್ದಿದ್ದ. ಅವನ ತಲೆ ಮೇಲೆ ಹೆಲ್ಮೆಟ್ ಇರಲೇ ಇಲ್ಲ. ಅವನನ್ನು ಹುಷಾರಾಗಿ ಕೆಳಗಿಂದ ಮೇಲೆ ಎತ್ತಿಕೊಂಡು ಬಂದು ಕೂರಿಸಿ ಗಾಳಿ ಹಾಕಿದರು” ಅಂದ ಶೀನಿ.

“ನೋಡಿದೆಯಾ, ಎರಡು ಚಕ್ರದ ವಾಹನ ಸವಾರ ಹೆಲ್ಮೆಟ್ ಹಾಕಿದ್ದಿದ್ರೆ, ಹಳ್ಳಕ್ಕೆ ಬಿದ್ರೂ ಗಾಯಗಳಾಗ್ತಿರಲಿಲ್ಲ” ಅಂದೆ.

“ಆ ಗಾಡಿ ಸವಾರನ್ನ ಜನ ಸುತ್ತುವರಿದರು. ಅವನ ಹತ್ರ ಲೈಸನ್ಸೇ ಇರಲಿಲ್ಲ. ಗಾಡಿಗೆ ನಂಬರೂ ಇರಲಿಲ್ಲ” ಅಂದ ಶೀನ. “ನೊಡಿದ್ಯಾ ಮತ್ತೆ, ಎಲ್ಲಾ ಮೋಸ ಮಾಡೋರೇ. ಅಲ್ಲೇ ಅವನಿಗೆ ಭಾರೀ ದಂಡ ಹಾಕಬೇಕಾಗಿತ್ತು” ಅಂದೆ.

ಶೀನ ನಗುತ್ತಾ “ಏನು ದಂಡ? ಆ ದ್ವಿಚಕ್ರ ವಾಹನಕ್ಕೆ ದಂಡ ಹಾಕಕ್ಕೆ ಆಗ್ತಾ ಇರಲಿಲ್ಲ. ಅದಕ್ಕೆ ಪೆಟ್ರೋಲ್ ಟ್ಯಾಂಕೂ ಇಲ್ಲ, ಗ್ಯಾಸ್ ಟ್ಯಾಂಕೂ ಇಲ್ಲ. ಅದು ಹೋಗಲಿ ಅಂದ್ರೆ ಇಂಜಿನ್ನೇ ಇಲ್ಲ ಅಂತೀನಿ” ಅಂದ.

ನನಗೆ ಇನ್ನಷ್ಟು ಅಚ್ಚರಿ. “ವ್ಹಾರೆವ್ಹಾ, ಅದೆಂಥಾ ವಾಹನನಯ್ಯಾ” ಅಂದೆ.

“ಅದು ದ್ವಿಚಕ್ರದ ಹಳ್ಳಿಯ ಎತ್ತಿನ ಗಾಡಿ” ಎಂದಾಗ ಇನ್ನಷ್ಟು ಬೇಸ್ತು ನನಗೆ.

# ಶರಬತ್

“ಏನು ಸೆಖೆ ರೀ, ಆ ಸಿಟಿ ಬಸ್ಸಿನಲ್ಲಿ ನೂಕು ನುಗ್ಗಲು. ನಮ್ಮನೆಯಿಂದ ನಿಮ್ಮನೇಗೆ ಬರೋ ಹೊತ್ಗೆ ಸಾಕು ಸಾಕಾಯ್ತು ರೀ” ಅಂದು ತಮಗಾದ ಸೆಖೆಯನ್ನು ತಮ್ಮ ಸೀರೆ ಸೆರಗನ್ನು ಮುಖದ ಮೇಲೆ ಬೀಸಿಕೊಂಡರು ಕಮಲಮ್ಮ.

“ಮೊನ್ನೆ ಚಂದ್ರಗ್ರಹಣ ಆಯ್ತು ನೋಡಿ, ಅದಕ್ಕೇ ಈಗ ಬಿಸಿ ಹವಾ ಬಿಟ್ಟಿದೆ. ಎಲ್ಲಾ ಗ್ರಹಗತಿ ಕಣ್ರೀ” ಎಂದು ತನ್ನ ಮಾತು ಜೋಡಿಸಿದಳು ಪ್ರೇಮ

“ಭಾರೀ ಸೆಖೆ ಕಣಯ್ಯ, ಸ್ವಲ್ಪ ಫ್ಯಾನ್ ತಿರುಗಿಸ್ತೀನಿ” ಅಂತ ಕಮಲಮ್ಮನ ಯಜಮಾನರು ನಾಗರಾಜ ಸ್ವಿಚ್ ಹಾಕಿದರು

“ಒಳ್ಳೇ ಬಿಸಿಲಿನಲ್ಲಿ ಬಂದಿದೀರಿ. ತಾಳಿ ಒಳ್ಳೆ ಷರಬತ್ ಮಾಡಿ ತರ್ತೀನಿ” ಅಂತ ಒಳಹೊರಡಲು ಅನುವಾದಳು ಪ್ರೇಮ

“ನನಗೆ ಸಕ್ಕರೆ ಸ್ವಲ್ಪ ಕಮ್ಮಿ ಹಾಕಿ” ಅಂದರು ನಾಗರಾಜ

“ನಿಮಗೂ ಸಕ್ಕರೆ ಖಾಯಿಲೆನಾ, ಸಕ್ಕರೆ ಬದಲು ಬೆಲ್ಲ ಹಾಕ್ತೀನಿ ಬಿಡಿ” ಅಂದಳು ಪ್ರೇಮ

“ಆಯ್ತು, ಆಯ್ತು, ಈ ಸೆಖೆಗೆ ತಣ್ಣನೆ ಶರಬತ್ ಹಿತವಾಗಿರುತ್ತೆ” ಎಂದು ಅಲ್ಲಿದ್ದ ಪತ್ರಿಕೆ ಕೈಗೆತ್ತಿಕೊಂಡ ನಾಗರಾಜ

ಸ್ವಲ್ಪ ಸಮಯದ ನಂತರ ಪ್ರೇಮ ಎಲ್ಲರಿಗೂ ಗಾಜಿನ ಲೋಟದಲ್ಲಿ ಶರಬತ್ ತಂದುಕೊಟ್ಟಳು.

ಸ್ವಲ್ಪ ರುಚಿ ನೋಡಿ “ವ್ಹಾ ವ್ಹಾ ರೀ ಪ್ರೇಮ, ಈ ಶರಬತ್ ಒಂದು ನಮೂನಿ ಬಹಳ ಚನ್ನಾಗಿದೆರೀ” ಅಂದ್ರು ಕಮಲಮ್ಮ.

“ಕೇಸರಿ ವಾಸನೆ ಜೊತೆಗೆ ಜಾಯಿಕಾಯಿ ಕುಟ್ಟಿ, ಪಚ್ಚ ಕರ್ಪೂರದ ಜೊತೆ ಹದವಾಗಿ ಶರಬತ್ ತಯಾರಿಸಿದ್ದೀರಿ. ಇದು ಯಾವ ಶರಬತ್ತು” ಅಂತ ಕಮಲಮ್ಮ ಕೇಳುವುದಕ್ಕೆ ಸರಿಯಾಗಿ ಒಳಗೆ ಬಂದ ಪ್ರೇಮನ ಗಂಡ ರಾಮಣ್ಣ

ರಾಮಣ್ಣನಿಗೂ ಶರಬತ್ ಕೊಟ್ಟರು ಪ್ರೇಮ.

ರಾಮಣ್ಣ ಶರಬತ್ ಕುಡಿತಾ “ತುಂಬಾ ತುಂಬಾ ಚನ್ನಾಗಿದೆ. ಏನೋ ಹೊಸ ರುಚಿ ಕಾಣಿಸ್ತಿದೆ. ಇದಕ್ಕೆ ಯಾವ ನೀರು ಹಾಕಿದೆ” ಅಂತ ಕೇಳಿದರು.

“ಇಲ್ಲೇ ಮೂಲೇಲಿದ್ದ ಡಬರಿ ನೀರು” ಅಂದರು ಪ್ರೇಮ.

ಗಾಬರಿಯಾದ ರಾಮಣ್ಣ “ಅರರೇ, ಎಂಥಾ ಕೆಲಸ ಆಗಿ ಹೋಯ್ತು, ನಾನು ಪೇಟೆಗೆ ಹೋಗೋ ಮುನ್ನ ಔಷಧಿಗೋಸ್ಕರ ಪಕ್ಕದ ಮನೆಯವರಿಗೆ ಬೇಕು ಅಂತ ಗೌರಿ ಹಸು ಗಂಗಾಜಲ ಅಂದ್ರೆ ಗಂಜಲನ ಆ ಡಬರೀಲಿ ತುಂಬಿ ಇಟ್ಟಿದ್ದೆ. ನೀನು ಅದೇ ನೀರು ಹಾಕಿ ಶರಬತ್ ಮಾಡಿ ಎಲ್ಲರಿಗೂ ಕುಡಿಸಿದೆ ಅಂದಾಗ ಎಲ್ಲರ ಮುಖವೂ ಬಾಡುವುದರ ಜೊತೆಗೆ ಹೊಟ್ಟೆ ಕಲಕಿ ವಾಂತಿ ಬರುವ ಹಾಗಾಯಿತು.

# ಮುನ್ನುಡಿ

**–ಸಿ.ಆರ್. ಸತ್ಯ**

ನನ್ನ ಸೋದರ ಮಾವ ಕೋದಂಡು ನನ್ನ ಬಳಿ ಬಂದು "ಭಾವ, ನೀನು ನನಗೊಂದು ಸಹಾಯ ಮಾಡಬೇಕು. ಆಗಲ್ಲ ಅಂತ ಹೇಳ ಬಾರದು." ಅಂತ ಅಂದ. ಅವನನ್ನು ಕಂಡರೆ ನನಗೆ ಬಲು ಪ್ರೀತಿ. "ಆಯ್ತು" ಅಂತ ಆಶ್ವಾಸನೆ ಕೊಟ್ಟೆ. "ಗುಡ್, ಭಾವ. ನಾನು ಈಗ ಒಂದು ಕನ್ನಡ ಕಾದಂಬರಿ ಬರೆದಿದ್ದೀನಿ. ಸಾರಿ, ಬರೀತಾ ಇದೀನಿ, ಅದಕ್ಕೆ ನೀನು ಒಂದು ಮುನ್ನುಡಿ ಬರೀಬೇಕು" ಅಂತ ಅಂದ. ನನಗೆ ಡಬಲ್ ಹಾರ್ಟ್ ಅಟ್ಯಾಕ್ ಆಯ್ತು. ಒಂದು: ಅವನು ಪುಸ್ತಕ ಬರೀತಿದಾನೆ ಅಂತ ಕೇಳಿ. ಇನ್ನೊಂದು ನಾನು ಮುನ್ನುಡಿ ಬರೀಬೇಕು ಅಂತ ಕೇಳಿ. ನಾನು " ಕೋದಂಡು, ನನಗೆ ತಿಳಿದ ಹಾಗೆ ನೀನು ಏನಾದರೂ ಕನ್ನಡದಲ್ಲಿ ಎರಡು ಪುಟ ಬರೆದಿರೋದು ಅಂದರೆ, ಅದು ನೀನು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಕನ್ನಡ ಪೇಪರ್‌ಗೆ ಸಪ್ಲಿಮೆಂಟರಿ ಪರೀಕ್ಷೆಗೆ ಬರೆದಾಗ. ನಾನು ಕನ್ನಡ ಬರೆದದ್ದು ಪೀ.ಯೂ.ಸಿ ಪರೀಕ್ಷೆಯಲ್ಲಿ ಸಪ್ಲಿಮೆಂಟರಿ ಪೇಪರ್ ಬರೆದಾಗ. ಇಂತಹ ನಮ್ಮಿಬ್ಬರ ಕೈಜೋಡಿಸಿದ ಪುಸ್ತಕವನ್ನ ಯಾವ ಹುಚ್ಚ ಪ್ರಕಟಿಸ್ತಾನೆ, ಯಾವ ಹುಚ್ಚ ಕೊಂಡುಕೊಳ್ಳುತ್ತಾನೆ ಹೇಳು?" ಅಂದೆ. "ಡೋಂಟ್ ವರಿ, ಭಾವ. ನನ್ನ ಹೆಂಡತೀನೇ ಪ್ರಕಟಿಸೋದು. ಅವಳ ತಂದೇನೆ ಕೊಂಡುಕೊಳ್ಳೋದು!" ಅಂದ!. "ಏನು, ಕಾದಂಬರಿ ಹೆಸರು, ಏನು ಕತೆ?" ಅಂತ ಕೇಳಿದೆ. " ನಾನಿನ್ನೂ ಒಬ್ಬ ಮಂಗ ಅಂತ ಹೆಸರು ಭಾವ. ಕತೆ ಇಷ್ಟೆ. ವಿಕಸನ ಹಾದಿಯಲ್ಲಿ ನಾವಿನ್ನೂ ಮಂಗಗಳಾಗೇ ಇದೀವಿ. ಪೂರ್ಣ ಮನುಷ್ಯರಾಗಿಲ್ಲ ಅಂತ." ಅಂದ. "ಸರಿ, ನೀನು ಬರೆದ ಕರಡು ಪ್ರತಿ ನನಗೆ ಕೊಡು. ಓದಿ ಮುನ್ನುಡಿ ಬರೀತೀನಿ" ಅಂದೆ. " ಅದೇ ನನ್ನ ಪ್ರಾಬ್ಲಮ್ಮು ಭಾವ. ನನ್ನ ಹೆಂಡತಿ ವಿಜಯ ದಶಮಿ ದಿವಸ ಪುಸ್ತಕ ಬಿಡುಗಡೆ ಆಗಬೇಕು ಅಂತ ಮೊಂಡು ಹಿಡಿದಿದ್ದಾಳೆ. ಆದರೆ ನಾನು ಐವತ್ತು ಪುಟಗಳಷ್ಟು ಇನ್ನೂ ಬರೆಯೋದು ಇದೆ. ನೀನು ನನಗೆ ಕಾಯಬೇಡ ಭಾವ. ನಿನಗೆ ಏನು ತೋಚುತ್ತೋ ಹಾಗೆ ಮುನ್ನುಡಿ ಬರೆದು ಕೊಟ್ಬಿಡು. ನನ್ನ ಹೆಂಡತಿಗೆ ಮುನ್ನುಡಿ ಇರೋದು ಮುಖ್ಯ. ನನ್ನ ಕಾದಂಬರಿ ಭಾಗಾನೇ ಯಾರೂ ಓದಲ್ಲ, ಇನ್ನು ನಿನ್ನ ಮುನ್ನುಡೀನ ಯಾರು ಓದುತ್ತಾರೆ ಭಾವಾ?" ಅಂತ ಹೇಳಿದ. ನಾನು ತಬ್ಬಿಬ್ಬಾದೆ, "ಹೋಗಲಿ, ಎಷ್ಟು ಪುಟಗಳಿರುತ್ತೆ ನಿನ್ನ ಪುಸ್ತಕದಲ್ಲಿ?" ಅಂತ ಕೇಳಿದೆ. "ಸುಮಾರು ನೂರಿಪ್ಪತ್ತರಿಂದ ನೂರೈವತ್ತು ಪುಟಗಳಿರಬಹುದು ಭಾವ. ಹೇಗೋ ಮಾಡಿ ನಿನ್ನ ಮುನ್ನುಡಿ ಅರ್ಜೆಂಟ್ ಆಗಿ ಬರೆದುಬಿಡು ಪ್ಲೀಸ್. ನಾನು ಕಾದಂಬರಿಯನ್ನ ಮುಗಿಸೋದಕ್ಕೆ ಕಾಯಬೇಡ. ಪ್ಲೀಸ್!" ಅಂತ ಗೋಗರೆದ. "ಆಗ್ಲಪ್ಪ" ಅಂತ ಆಶ್ವಾಸನೆ ಕೊಟ್ಟು ನನ್ನ ಯೋಚನೆಗೆ ಇಳಿದೆ.

ನಾಲ್ಕೈದು ದಿನಗಳು ನಿದ್ದೆ ಕೆಟ್ಟು, ಎಕ್ಸ್ಟ್ರಾ ಕಾಫಿ ಕುಡಿದು, ನನ್ನ ಹೆಂಡತಿ ಜೊತೇನೂ ಮಾತು ನಿಲ್ಲಿಸಿ, ಕೊನೇಗೂ ನನ್ನ ಮುನ್ನುಡಿ ರೆಡಿ ಮಾಡಿದೆ. ಅದು ಹೀಗಿತ್ತು:

"ನಾನಿನ್ನೂ ಒಬ್ಬ ಮಂಗ–ಇದು ಶ್ರೀ ಗೊಟ್ಟಿಗೆರೆ ಕೋದಂಡರಾಮ ರಾವ್

ಅವರ ಚೊಚ್ಚಲ ಕಾದಂಬರಿ. ಹಾಗೂ ನನ್ನ ಚೊಚ್ಚಲ ಮುನ್ನುಡಿ. ಓದುಗರು ಇದರಿಂದ ಗಾಬರಿ ಆಗುವುದಿಲ್ಲವೆಂದು ನನ್ನ ನಂಬಿಕೆ. ಇದರಲ್ಲಿನ ಕತೆ : ನಾವೆಲ್ಲರೂ, ಅಂದರೆ ನೀವೂ ಸೇರಿ, ಇನ್ನೂ ಮಂಗಗಳಾಗೇ ಇದೀವಿ, ಪೂರ್ಣವಾಗಿ ಮನುಷ್ಯರಾಗಿಲ್ಲ ಅಂತ. ಕೋದಂಡ ರಾಮ ರಾವ್ ಅವರು ಚಿಕ್ಕ ವಯಸ್ಸಿನಿಂದ ಗೊಟ್ಟಿಗೆರೆಯಲ್ಲಿ ಮಂಗಗಳ ಜೊತೆ ಆಟವಾಡುತ್ತಿದ್ದು ಅವುಗಳ ಬಗ್ಗೆ ಅವರು ಅಪಾರ ಜ್ಞಾನ ಪಡೆದಿರುವುದಲ್ಲದೆ, ಅವರು ಖುದ್ದಾಗಿ ಮನುಷ್ಯರೇ ಆಗಿರುವುದರಿಂದ, ಮಂಗಗಳಿಗೂ ಅವರಿಗೂ ಇರುವ ವ್ಯತ್ಯಾಸವನ್ನು ಬಹು ಸುಲಭವಾಗಿ ಅರಿತು, ಮುಚ್ಚುಮರೆಯಿಲ್ಲದೇ  ಮಾನವನ ವಿಕಸನ ಮಟ್ಟವನ್ನುಆಳವಾಗಿ ವಿಶ್ಲೇಷಣೆ ಮಾಡಿದ್ದಾರೆ. ಇದು ಖಂಡಿತವಾಗಿ ಎಲ್ಲಾ ಮಂಗಗಳೂ ಮನುಷ್ಯರೂ ಓದಲೇ ಬೇಕಾದ ಪುಸ್ತಕ.  ಇನ್ನು ಪುಸ್ತಕದ ಬಗ್ಗೆ ಒಂದೆರಡು ಮಾತುಗಳನ್ನು ನಾನು ಹೇಳಲೇ ಬೇಕು. ಪುಸ್ತಕ 1/8 ಡೆಮಿ ಸೈಜ್‌ನಲ್ಲಿದೆ. ಪುಸ್ತಕದಲ್ಲಿ 150 ಪುಟಗಳಿವೆ. ಪುಸ್ತಕದ ಎತ್ತರ 21 ಸೆಂಟಿಮೀಟರ್ ಗಳಿದ್ದು, ಅಗಲ 14 ಸೆಂಟಿಮೀಟರ್‌ಗಳಷ್ಟಿವೆ. ಪುಸ್ತಕದ ದಪ್ಪ 1 ಸೆಂಟಿಮೀಟರ್ ಅಷ್ಟಿದೆ. ಮುಖ ಪುಟ. ಹಿಂದಿನ ಪುಟ, ಒಳಗಿನ ಪುಟಗಳೆಲ್ಲಾ ಸೇರಿ ಪುಸ್ತಕದ ತೂಕ 200 ಗ್ರಾಮ್‌ಗಳಿದೆ. ಹಾಗಾಗಿ ಓದಿದ ನಂತರ, ಪುಸ್ತಕಕ್ಕೆ ರದ್ದಿಗೆ ಹೋಗುವ ಮೌಲ್ಯವೂ ಇದೆ ಅಂತ ಹೇಳಬಹುದು. ಪುಸ್ತಕವನ್ನು ಕೈಲಿನಲ್ಲಿ ಹಿಡಿದುಕೊಂಡು ಓದಬಹುದು. ಅನೇಕ ಪುಟಗಳಲ್ಲಿ ಅನೇಕ ಮುದ್ರಣ ದೋಷಗಳೂ ವ್ಯಾಕರಣ ದೋಷಗಳೂ ಕಾಣಬಹುದು. ಆದರೆ ಇದಕ್ಕೆ ಪ್ರಕಾಶಕರ ಸಮ್ಮತಿ ಇದೆ ಎಂಬುದು ಗಮನಾರ್ಹ ವಿಷಯ. ಲೇಖಕರ ಹೆಂಡತಿಯವರೇ ಪ್ರಕಾಶಕರಾಗಿದ್ದು, ದೋಷಗಳು ಮುಖ್ಯವಲ್ಲ, ಆದರೆ ಇಂತಹ ಪುಸ್ತಕ ಕನ್ನಡ ಸಾಹಿತ್ಯಕ್ಕೆ ಒಂದು ಹೆಮ್ಮೆಯ ಕೊಡುಗೆ ಎಂದು ಭಾವಿಸಬಹುದು ಎಂಬ ಆಶಾ ಭಾವನೆಯಿಂದ ಹೊರತಂದಿದ್ದಾರೆ.

ಪುಸ್ತಕದ ಮುಖ ಪುಟದಲ್ಲಿ ಒಂದು ಮಂಗದ ಚಿತ್ರವಿದೆ ಮತ್ತು ಹಿಂಬದಿ ಪುಟದಲ್ಲಿ ಲೇಖಕರ ಚಿತ್ರವಿದೆ. ಚಿತ್ರಗಳು ಆಕರ್ಷಕವಾಗಿದ್ದು ಯಾವುದು ಯಾರ ಚಿತ್ರ ಎಂದು ಸಂದೇಹವೇ ಬರದ ಹಾಗೆ ಸುಂದರವಾಗಿ ಮುದ್ರಣವಾಗಿವೆ. ಪ್ರಕಾಶಕರ ಕನ್ನಡ ಸೇವೆಗೆ ಮತ್ತೊಂದು ಉದಾಹರಣೆಯೆಂದರೆ, ಪುಸ್ತಕದ ಬೆಲೆ ರೂ.150/– ಎಂದು ನಿಗದಿ ಪಡಿಸಿ, ಒಂದು  ಪುಸ್ತಕ ಕೊಂಡುಕೊಂಡರೆ ಎರಡು ಪುಸ್ತಕದ ಪ್ರತಿಗಳು ಉಚಿತ ಎಂದು ಘೋಷಿಸಿರುವುದು. ಇದರಿಂದಾಗಿ ಕೇವಲ ಹತ್ತು ಪುಸ್ತಕಗಳು ಮಾರಾಟವಾದರೂ, ಓದುಗರ ಕೈಗಳಲ್ಲಿ ಮೂವತ್ತು ಪ್ರತಿಗಳನ್ನು ಕಾಣಬಹುದು ಎಂಬುದು ಪ್ರಕಾಶಕರ ಆಸೆ. ಈ ಆಸೆ ನೆರವೇರಲಿ! ಪುಸ್ತಕವನ್ನು ಪೂರ್ಣವಾಗಿ ಬರಿಯುವುದಕ್ಕೆ ಮುಂಚೆಯೇ, ನನ್ನನ್ನು ಬಹು ಪ್ರೀತಿಯಿಂದ ಈ ಮುನ್ನುಡಿಯನ್ನು ಬಹು ಮುಂಗಡವಾಗಿಯೇ (ಅಂದರೆ ಓದದೆಯೇ) ಬರೆಯಲು ಅವಕಾಶ ಮಾಡಿಕೊಟ್ಟು, ಕನ್ನಡ ಸಾಹಿತ್ಯಕ್ಕೆ ನನ್ನದೂ ಒಂದು ಅಳಿಲು ಸೇವೆಗೆ ಅವಕಾಶ ಮಾಡಿಕೊಟ್ಟ ಲೇಖಕರಿಗೆ ನನ್ನ ಧನ್ಯವಾದಗಳು. ಮಂಗಗಳಾಯಿತು, ಹೀಗೆಯೇ ಅವರ ಲೇಖನಿಯಿಂದ ಇನ್ನಷ್ಟು ಪ್ರಾಣಿ ಆಧಾರಿತ

ಕಾದಂಬರಿಗಳು (ಎಮ್ಮೆ, ಹಸು ಹೀಗೆ) ಹೊರಬರಲಿ, ಕನ್ನಡ ಸಾಹಿತ್ಯ ಸಿರಿವಂತವಾಗಲಿ!"

ಪುಸ್ತಕವನ್ನು ಕೋದಂಡು ಹೆಂಡತಿ ವಿಜಯ ದಶಮಿಯ ದಿನ ಬಿಡುಗಡೆ ಮಾಡಿಸಿಯೇ ಬಿಟ್ಟಳು–ಅವಳ ತಂದೆಯವರ ಕೈಗಳಿಂದ. ಬಿಡುಗಡೆ ಸಂಭ್ರಮಕ್ಕೆ ಹಾಕಿಸಿದ ಶಾಮಿಯಾನಾದಲ್ಲಿ ನಾವು ಇದ್ದಿದ್ದು ಹತ್ತು ಜನರೇ. ನಾನು, ನನ್ನ ಹೆಂಡತಿ, ಕೋದಂಡು, ಅವನ ಹೆಂಡತಿ ಮತ್ತು ಮಾವನವರು, ಪ್ರಿಂಟರ್, ಮನೆ ಕೆಲಸದವಳು, ಕ್ಯಾಟರರ್ ಮತ್ತು ಶ್ಯಾಮಿಯಾನ ಓನರ್.

ಸರಿ, ಕೋದಂಡು ಹೆಂಡತಿ ನಾವಿದ್ದ ಹತ್ತು ಜನರಿಗೇ ಒಂದೊಂದು ಕಾಪಿಯನ್ನು ಅಲ್ಲೇ ಮಾರಿ ಬಿಟ್ಲು. ಎರಡು ಉಚಿತ ಕಾಪಿಗಳನ್ನೂ ಎಲ್ಲರಿಗೂ ಕೊಟ್ಲು. ಹಾಗಾಗಿ ಈ ಪುಸ್ತಕ ಮೂವತ್ತು ಕನ್ನಡಿಗರ ಕೈಗಳನ್ನು ಸೇರುತ್ತವೆ ಎಂಬ ಅವಳ ಆಸೆ ಆಗಲೇ ಫಲಿಸಿತು. "ಜೈ, ಕನ್ನಡಾಂಬೆ! ಬನ್ನಿ. ಎಲ್ಲರೂ ಕಾಫಿ ತಿಂಡಿ ಸೇವಿಸೋಣ!"" ಅಂತ ಕೋದಂಡು ನಮ್ಮನ್ನೆಲ್ಲಾ ಒಳಗೆ ಕರೆದುಕೊಂಡು ಹೋದ.

## ಮದುವೆ ಮಾತು–ಕಥೆ

**(ಸಂಗ್ರಹ ) ಸುಕೇಶವ**

1. **ಆಗೋದು ಆಗಿಯೇ ಆಗುತ್ತೆ ಅನ್ನೋ ನಿಯಮದಲ್ಲಿ ನಂಬಿಕೆ ಇಟ್ಟಿದ್ದೆ. ಅದರಂತೆ ನನಗೆ ಮದುವೆಯಾಯಿತು**
2. **ಹೆಚ್ಚು ದಿನ ಸುಖವಾಗಿ ಬದುಕಿರುವ ಅವಕಾಶ ನಿನ್ನ ಜಾತಕದಲ್ಲಿಲ್ಲ ಅಂತ ಹೇಳಿದ ಜೋಯಿಸರೇ ಹುಡುಗಿ ಹುಡುಕಿ ಕೊಟ್ಟು ಮದುವೆ ಮಾಡಿಸಿದರು.**
3. **ನನಗೆ ಅಡಿಗೆ ಮಾಡಲು ಬರುತ್ತಿರಲಿಲ್ಲ. ಮದುವೆಯಾದ ಮೇಲೆ ಕಲಿತುಕೊಂಡೆ. ಇದು ಹೆಣ್ಣಿನ ಮಾತಲ್ಲ, ಗಂಡಿನದು.**
4. **ತಂದಿಟ್ಟು ತಮಾಷೆ ನೋಡೋದು ಅನ್ನೋ ಗಾದೆ ಮಾತು ನಿಜ ಮಾಡಲೋ ಎಂಬಂತೆ ನನಗೆ ಮದುವೆ ಮಾಡಿದರು**
5. **ಮದುವೆಗೆ ಮೊದಲು ಕುಡಿಯುತ್ತಿದ್ದೆ, ಅವಳು ಕೈಗೆ ಸಿಗುತ್ತಿಲ್ಲವಲ್ಲ ಅಂತ. ಈಗಲೂ ಕುಡಿಯುತ್ತಿದ್ದೇನೆ, ಅವಳ ಕೈಯಿಂದ ಬಿಡಿಸಿಕೊಳ್ಳಲಾಗುತ್ತಿಲ್ಲವಲ್ಲ ಅಂತ**
6. **ನಾವು ಇನ್ನೊಬ್ಬರನ್ನು ನೋಡಿ ಕಲಿಯುವುದು ಬೇಕಾದಷ್ಟಿರುತ್ತದೆ. ನೋಡಿದರೂ ಕಲಿತರೂ ಕಲಿಯದೇ ತಪ್ಪು ಮಾಡುವುದು ಎಂದರೆ ಮದುವೆಯಾಗುವುದು**
7. **ನಾನು ವಿವಾಹ ದ್ವೇಷಿಯಲ್ಲ. ಆದರೆ ಕೆಲವರ ಮೇಲಿನ ಅನುಕಂಪ ದಿಂದಲಾದರೂ ಮದುವೆ ಮಾಡ್ಕೊಬೇಡಿ ಅಂತ ಹೇಳುತ್ತಿದ್ದೇನೆ.**
8. **ಸಂಪಾದನೆ ಮಾಡುವ ಹುಡುಗರೆಲ್ಲರೂ ಮದುವೆಯಾಗಬೇಕು. ಖರ್ಚು ಮಾಡಿಸುವ ತಾಖತ್ತಿರುವ ಎಲ್ಲ ಹೆಣ್ಣುಗಳೂ ಮದುವೆಯಾಗಬೇಕು. ಆದರೆ ಅಂಥವರಿಗೆ ಇಂಥವರೇ ಜೋಡಿಯಾಗುತ್ತಾರೆ ಅಂತ ಖಚಿತವಾಗಿ ಹೇಳಲಾಗುವುದಿಲ್ಲ.**
9. **ಗಂಡು ಸುಳ್ಳು ಹೇಳುವುದನ್ನು ಕಲಿಯಬೇಕು ಮದುವೆಯಾದ ಮೇಲೆ. ಹೆಣ್ಣು ಸುಳ್ಳನ್ನು ಅರಗಿಸಿಕೊಳ್ಳುವುದನ್ನು ಕಲಿಯಬೇಕು ಮದುವೆಯಾದ ಮೇಲೆ.**

# ಹೀಗೊಂದು ಕುಮಾರ ಸಂಭವ

**• ಗಣೇಶ ಹೆಗ್ಗಡೆ**

ಒಂದು ದಟ್ಟವಾದ ಕಾನನ. ಆ ಕಾನನದಲ್ಲೊಂದು ತುಂಬಿ ಹರಿಯುವ ನದಿ. ಆ ನದಿಯ ತಟದಲ್ಲಿ ಅನಾದಿ ಕಾಲದಿಂದಲೂ ವಾಸ ಮಾಡಿಕೊಂಡಿದ್ದ ಕಪ್ಪೆಗಳ ಗುಂಪೊಂದಿತ್ತು. ಈ ಕಪ್ಪೆಗಳು ತಮ್ಮ ಆಹಾರವನ್ನು ತಾವೆ ಸಂಪಾದಿಸಿಕೊಳ್ಳುತ್ತಾ, ಶತ್ರು ಭೀತಿಯಿಂದ ತಮ್ಮನ್ನು ತಾವೇ ಸಂರಕ್ಷಿಸಿಕೊಳ್ಳತ್ತಾ, ಹೇಗೋ ಜೀವನ ಸಾಗಿಸಿದ್ದವು. ಈ ಶಾಂತಿ ಪರ್ವ ಕಾಲದ ಮಧ್ಯೆ ಅದೇನು ದುರ್ಬುದ್ಧಿ ಆ ಕಪ್ಪೆಗಳಿಗೆ ಹುಟ್ಟಿತೊ ಏನೋ ತಮಗೊಬ್ಬ ರಾಜನಿಲ್ಲದುದರ ಕೊರತೆ ಕಾಡತೊಡಗಿ, ಅವೆಲ್ಲಾ ಒಟ್ಟಾಗಿ ನದಿ ತಟದಲ್ಲಿ ಸೇರಿ ಭಗವಂತನನ್ನು ಪ್ರಾರ್ಥಿಸಿಕೊಂಡವು. ಇವುಗಳ ವಟ...ವಟ.. ಶಬ್ದ ಭಗವಂತನಿಗೆ ಕೇಳಿಸಿ ತಡಮಾಡದ ಭಗವಂತ ನದಿಯ ತಟದಲ್ಲಿ ಪ್ರತ್ಯಕ್ಷನಾಗಿ, 'ಏನಿದು? ಅಸಹನೀಯ ಕೂಗು. ಯಾರಿಗೂ ದೇವಲೋಕದಲ್ಲಿ ನಿದ್ರೆಯೆ ಇಲ್ಲ' ಎಂದು ಗದರಿಕೊಂಡ.

ಗುಂಪಿನಲ್ಲಿ ಕೊಂಚ ಹಿರಿಯನಾದ ಕಪ್ಪೆಯು, 'ಹೇ ದೇವನ್, ಸಕಲ ಸೌಕರ್ಯಗಳನ್ನೂ ನಮ್ಮಂಥಹ ಬಡ ಜೀವಿಗಳಿಗೆ ದಯಪಾಲಿಸಿರುವ ನಿನಗೆ ಕೋಟಿ ಕೋಟಿ ವಂದನೆಗಳು. ಆದರೆ ಇತ್ತೀಚೆಗೆ ನಮ್ಮನ್ನೊಂದು ಜಿಜ್ಞಾಸೆ ಕಾಡುತ್ತಿದೆ. ಈ ಜಗತ್ತಿನಲ್ಲಿ ಇತರೆ ಮನುಕುಲ, ಪ್ರಾಣಿಗಳಿಗಿರುವಂತೆ ನಮಗೆ ರಾಜನೇ ಇಲ್ಲದಿರುವುದು ನಮಗೆ ಅರಿವಿಗೆ ಬಂದಿದೆ. ಇಷ್ಟು ದಿನ ಭಗವಂತನ ಚಿತ್ತಕ್ಕೆ ಈ ವಿಚಾರ ಯಾಕೆ ಬಾರದಾಯಿತೊ ನಮಗೆ ತಿಳಿಯದಾಗಿದೆ. ಆದ್ದರಿಂದ ನಮ್ಮ ಆಸೆ ತತ್‌ಕ್ಷಣ ಈಡೇರುವಂತೆ ಆಜ್ಞಾಪಿಸುವಂಥಹವನಾಗು' ಎಂದು ನಿವೇದಿಸಿಕೊಂಡವು.

ಆಗ ಮನ ಕರಗಿದ ಭಗವಂತ ತಥಾಸ್ತು ಎಂದು, ಎರಡು ಕಾಲಿನ ಮನುಷ್ಯನನ್ನು ಸೃಷ್ಟಿಸಿ, 'ಇವನೇ ನಿಮ್ಮ ರಾಜ' ಎಂದು ಪರಿಚಯಿಸಿ ಅಂತರ್ಧಾನನಾದ. ಆರಂಭಿಕ ದಿನಗಳಲ್ಲಿ ಸ್ಫುರದ್ರೂಪಿಯಾಗಿದ್ದ ಈ ರಾಜ, ಆ ಬಡ ಕಪ್ಪೆಗಳಿಗೆ ಮಾದರಿ ರಾಜನಂತೆ ಕಂಡರೂ, ಬರಬರುತ್ತಾ ಈ ರಾಜ ಆ ಪ್ರದೇಶದ ಆಂತರಿಕ ಸಮಸ್ಯೆಗಳತ್ತ ಗಮನಹರಿಸದೆ, ತನ್ನ ಗಡಿಯಾಚೆಗಿರುವ ಪ್ರದೇಶಗಳ ಮತ್ತು ಮನುಕುಲಗಳ ಸಮಸ್ಯೆಗಳಿಗೆ ಹೆಚ್ಚು ಆದ್ಯತೆ ಕೊಡುತ್ತಾ ಬಂದುದು, ಕಪ್ಪೆಗಳ ಆತಂಕಕ್ಕೆ ಕಾರಣವಾಯಿತು. ಈ ಬಗ್ಗೆ ಭಗವಂತನಿಗೆ ಇನ್ನೇನು ದೂರು ಕೊಡಬೇಕು ಎನ್ನುವ ಸಮಯದಲ್ಲಿ ಆ ರಾಜ ಕಾಲವಾಗಿ ಹೋದ. ಮತ್ತೆ ಆ ಕಪ್ಪೆಗಳೆಲ್ಲಾ ಒಗ್ಗಟ್ಟಾಗಿ ನದಿ ತಟದಲ್ಲಿ ಸೇರಿ ಭಗವಂತನಲ್ಲಿ ಪ್ರಾರ್ಥಿಸಲು ಈ ಸಮಸ್ಯೆಯನ್ನು ಈಗಾಗಲೇ ಊಹಿಸಿದ್ದ ಭಗವಂತ ದಿಢೀರನೆ ಕಪ್ಪೆಗಳ ಮುಂದೆ ಪ್ರತ್ಯಕ್ಷನಾದ. ಆದರೆ ಈ ಸರ್ತಿ ಆತ ಬರೀ ಕೈಯಲ್ಲಿ ಬಂದಿರಲಿಲ್ಲ. ತನ್ನ ಪಕ್ಕದಲ್ಲಿದ್ದ

ಸುಂದರ ತರುಣಿಯನ್ನು ಕಪ್ಪೆಗಳ ಗುಂಪಿಗೆ ಪರಿಚಯಿಸುತ್ತಾ, 'ಇವಳು ನಿಮ್ಮ ಮುಂದಿನ ರಾಣಿ. ನಿಮ್ಮ ಸಮಸ್ಯೆಗಳೆಲ್ಲಾ ಇಂದಿಗೆ ತೀರಿದೆಯೆಂದು ನಾನು ನಂಬಿದ್ದೇನೆ' ಎಂದು ಹೇಳಿ ಇದ್ದಕ್ಕಿದ್ದಂತೆ ಮಾಯವಾದ. ಆ ಕ್ಷಣದಲ್ಲಿ ಆ ಕಪ್ಪೆಗಳು ಭಗವಂತನ ಈ ಕಾಳಜಿಗೆ ಮನದಲ್ಲೇ ವಂದಿಸಿದರೂ ಈ ಸಂತೋಷ ಹೆಚ್ಚು ದಿನ ಉಳಿಯಲಿಲ್ಲ. ಈ ರಾಣಿ ಬರಬರುತ್ತಾ ಅತ್ಯಂತ ಕಠಿಣ ಮನಸ್ಸುಳ್ಳವಳಾಗಿ ಸರ್ವಾಧಿಕಾರಿ ಧೋರಣೆಯತ್ತ ವಾಲಿ ಹೋದುದು ಕಪ್ಪೆಗಳಿಗೆ ಉಸಿರುಗಟ್ಟುವಂತಾಯಿತು. ಒಂದು ಕರಾಳ ದಿನ ಈ ಮಹಾರಾಣಿ ಕಪ್ಪೆಗಳ ವಟಗುಟ್ಟುವಿಕೆಯನ್ನು ತತ್‌ಕ್ಷಣ ಜಾರಿಗೆ ಬರುವಂತೆ ನಿಷೇಧ ಮಾಡಿದಾಗ ಬಡಕಪ್ಪೆಗಳ ಮನಸ್ಸು ಅಲ್ಲೋಲ ಕಲ್ಲೋಲವಾಯಿತು. ಬಂಧನದ ಭಯವಿದ್ದರೂ ಆ ಕಪ್ಪೆಗಳೆಲ್ಲಾ ಒಂದು ರಾತ್ರಿ ನದೀ ತಟದಲ್ಲಿ ಗುಪ್ತವಾಗಿ ಸೇರಿ ಭಗವಂತನಲ್ಲಿ ಪ್ರಾರ್ಥಿಸಿಕೊಂಡಾಗ ಭಗವಂತ ಮತ್ತೆ ದಿಢೀರನೆ ಪ್ರತ್ಯಕ್ಷನಾಗುವುದು ಅನಿವಾರ್ಯವಾಯಿತು.

'ಹೇ ದೇವನ್, ನಿಮ್ಮಿಂದ ಒಂದು ಅಚಾತುರ್ಯವಾಗಿ ಹೋಗಿದೆ. ತಾವು ದಯಪಾಲಿಸಿದ ಈ ರಾಣಿಯಿಂದ ನಮ್ಮ ಸ್ವಾತಂತ್ರ ಹರಣವೇ ಆಗಿಹೋಗಿದೆ. ನಮಗೆ ಇನ್ನು ಮುಂದೆ ಈ ರಾಣಿಯ ಸಹವಾಸವೇ ಬೇಡ. ಬದಲಿಗೆ ನೀನು ಯಾವ ರಾಜನನ್ನೂ ಕೊಟ್ಟರೂ ತೃಪ್ತಿಯಿಂದ ಸ್ವೀಕರಿಸುವೆವು' ಎಂದು ಒಕ್ಕೊರಲಿನಿಂದ ಬೇಡಿಕೊಂಡವು. ಆಗ ಭಗವಂತನ ಮನಸ್ಸು ಕರಗಿ ಎರಡು ಕಾಲಿನ ಮತ್ತೊಬ್ಬ ರಾಜನನ್ನು ಸೃಷ್ಟಿಸಿ ಆ ಬಡ ಕಪ್ಪೆಗಳಿಗೆ ದಾನವಾಗಿ ಕೊಟ್ಟು ದಿಢೀರನೆ ಮಾಯವಾಗಿ ಹೋದ. ಹೀಗೆಯೆ ಸಮಯ ಕಳೆಯಲು, ಒಂದು ಮರಿ ಕಪ್ಪೆ ಆ ರಾಜನ ಬಳಿ ಒಂದು ದಿನ ದೈನ್ಯದಿಂದ ನಮಸ್ಕರಿಸಿದಾಗ ಆ ರಾಜನಲ್ಲಿ ಯಾವ ಪ್ರತಿಕ್ರಿಯೆಯೂ ಬರಲಿಲ್ಲ. ಅನುಮಾನಗೊಂಡ ಮರಿಕಪ್ಪೆ ಆ ರಾಜನ ಮೈ ಮೇಲೆ ಹತ್ತಿ ಹರಿದಾಡಿದರೂ ಆ ರಾಜ ಯಾವ ಭಾವನೆಯನ್ನೂ ವ್ಯಕ್ತಪಡಿಸದೇ ಇದ್ದುದು ಅನುಮಾನಕ್ಕೆ ಈಡುಮಾಡಿ, ಈ ಸುದ್ದಿ ಕಪ್ಪೆಗಳ ಗುಂಪಿಗೆ ತಲುಪಲು ಸಾಕಷ್ಟು ಸಮಯ  ಹಿಡಿಯಲಿಲ್ಲ.

ಈ ರಾಜ ಮೂಗನೆ? ಕಿವುಡನೆ? ಅಥವಾ ಕಣ್ಣಿದ್ದೂ ಕುರುಡನೆ? ಇತ್ಯಾದಿ ಪ್ರಶ್ನೆಗಳಿಗೆ ಉತ್ತರವೇ ಗೋಚರಿಸದಂತಾಗಿ ಮತ್ತೆ ನದಿ ತಟದಲ್ಲಿ ಸೇರುವ ದೌರ್ಭಾಗ್ಯ ಆ ಕಪ್ಪೆಗಳಿಗುಂಟಾಯಿತು. ಈ ಕ್ಲಿಷ್ಟಕರ ಸಮಯದಲ್ಲಿ ಅಚಾನಕ್ಕಾಗಿ ಕಪ್ಪೆಗಳ ಮುಂದೆ ಪ್ರತ್ಯಕ್ಷನಾದ ಭಗವಂತ ಅವುಗಳ ಯೋಗಕ್ಷೇಮ ವಿಚಾರಿಸಿದ. ಭಗವಂತನನ್ನು ಕಂಡ ಕಪ್ಪೆಗಳ ಹಿರಿಯ.

'ಹೇ ದೇವನ್, ನಮ್ಮ ವಟ...ವಟ...ಕೂಗು. ಈಗಲಾದರೂ ನಿನಗೆ ಕೇಳಿಸಿತಲ್ಲಾ... ನಾವೇ ಧನ್ಯರು' ಎಂಬ ನಿವೇದನೆಗೆ ಭಗವಂತನೇ ಯಾಕೋ ಬೆಚ್ಚಿಬಿದ್ದ

'ಕ್ಷಮಿಸಿ, ನನಗೆ ನಿಮ್ಮ ಯಾರ ಕೂಗೂ ಕೇಳಿಸಲಿಲ್ಲ. ಒಂದು ದುಃಖದ ಸಂಗತಿಯೆಂದರೆ ಮುಂದೆಂದೂ ನಿಮ್ಮ ಕೂಗು ಯಾರಿಗೂ ಕೇಳಿಸುವುದೇ ಇಲ್ಲ. ಯಾಕೆಂದರೆ ನಿಮ್ಮ ರಾಜನ ಮೌನವನ್ನೇ ದುರುಪಯೋಗಪಡಿಸಿಕೊಂಡ

ನಿಮ್ಮ ರಾಜ್ಯದ ಕೆಲವು ಭ್ರಷ್ಟರು ವ್ಯೋಮದಲ್ಲಿರುವ ಬಹುತೇಕ ತರಂಗಾಂತರಗಳನ್ನು ಹೆಚ್ಚಿನ ದುಡ್ಡಿಗೆ ಮಾರಿಕೊಂಡು ಬಿಟ್ಟಿದ್ದಾರೆ. ನಿಮ್ಮ ಧ್ವನಿಯ ಚಲನೆಗೆ ಈ ದುಷ್ಟರು ಯಾವ ತರಂಗಾಂತರವನ್ನು ಉಳಿಸಿಲ್ಲ. ಈ ಭ್ರಷ್ಟಾಚಾರವೆಲ್ಲಾ ಈ ರಾಜನ ಕಣ್ಣೆದುರಿಗೇ ಜರುಗಿದರೂ, ಯಾಕೋ ಇವನು ಮೂಕ ಪ್ರೇಕ್ಷಕನಾಗಿ ಬಿಟ್ಟಿದ್ದಾನೆ. ನಿಮ್ಮ ದನಿ ನನಗೆ ಕೇಳಿಸದಿದ್ದರೂ ನಿಮ್ಮನ್ನೆಲ್ಲಾ ಹಠಾತ್ತಾಗಿ ಭೇಟ್ಟಿಯಾಗಿ ಈ ವಿಚಾರವನ್ನೆಲ್ಲಾ ನಿಮ್ಮೊಂದಿಗೆ ಹಂಚಿಕೊಳ್ಳಲು ನಾನಾಗಿಯೇ ಈ ತಟಕ್ಕೆ ಬಂದುದು ಒಳ್ಳೆಯದೇ ಆಯಿತು' ಎಂದ ಭಗವಂತ.

ಆಗ ಕಪ್ಪೆಗಳ ಹಿರಿಯ ಭಗವಂತನ ಪಾದಾರವಿಂದಗಳಿಗೆರಗಿ, 'ದೇವನ್, ನಮಗೂ ಈ ಮನುಕುಲಕ್ಕೂ ಯಾಕೊ ಹೊಂದಾಣಿಕೆಯೆ ಕಾಣಬರುತ್ತಿಲ್ಲ. ಆದ್ದರಿಂದ ಈ ಬಾರಿ ನಮಗೆ ರಾಜನನ್ನು ದಯಪಾಲಿಸುವಾಗ ಕೊಂಚ ಎಚ್ಚರ ವಹಿಸು' ಎಂದು ಸವಿನಯವಾಗಿ ಬೇಡಿಕೊಂಡಾಗ ಭಗವಂತ ಎರಡು ಕಾಲಿನ ಒಂದು ಬಕವನ್ನು ಆ ಸ್ಥಳದಲ್ಲೇ ಸೃಷ್ಟಿಸಿ, 'ಇನ್ನು ಮುಂದೆ ಇವನೇ ನಿಮ್ಮ ರಾಜ, ಇನ್ನು ನಿಶ್ಚಿಂತೆಯಿಂದಿರಿ' ಎಂದು ಬಿನ್ನವಿಸಿ ಕ್ಷಣಾರ್ಧದಲ್ಲಿ ಅಂತರ್ಧಾನನಾದ. ನದಿಯ ತಟವನ್ನೇ ಅರಮನೆಯನ್ನಾಗಿ ಮಾಡಿಕೊಂಡ ಈ ರಾಜ ಬಕ ಆರಂಭಿಕ ದಿನಗಳಲ್ಲಿ ಆ ಕಪ್ಪೆಗಳಿಗೆ ಅಭಿಮಾನ ಮೂರ್ತಿಯಂತೆ ಗೋಚರಿಸಿದ. 'ನೀವೆಲ್ಲರೂ ಈ ರಾಜ್ಯದಲ್ಲಿ ಸ್ವತಂತ್ರ್ಯರು. ರಾಜಾ – ಪ್ರಜೆಯೆಂಬ ತಾರತಮ್ಯ ಇನ್ನು ಮುಂದಿಲ್ಲ ' ಬಕನ ಈ ನುಡಿಗಳು ಕಪ್ಪೆಗಳಿಗೆ ಮೊದಲು ಸಂತಸ ತಂದರೂ ಇದು ಹೆಚ್ಚು ಕಾಲ ಉಳಿಯಲಿಲ್ಲ.

ಕಪ್ಪೆಗಳಿಗೆ ಕ್ರಮೇಣ...ಕ್ರಮೇಣ ತಮ್ಮ ಜನ ಸಂಖ್ಯೆಯೆ ಕಡಿಮೆಯಾಗುತ್ತಾ ಹೋಗುತ್ತಿರುವುದು ಗಮನಕ್ಕೆ ಬರಲು ಹೆಚ್ಚು ಕಾಲಾವಕಾಶಬೇಕಿರಲಿಲ್ಲ. ಗೂಢಚರ್ಯೆಯಿಂದ ಈ ಸಮಸ್ಯೆಯ ಮೂಲ ಕಾರಣವನ್ನು ಶೋಧಿಸಿದಾಗ, ರಾಜನಾದ ಈ ಬಕನೇ ಹತ್ತಿರ ನುಸುಳುವ ನಮ್ಮವರನ್ನು ಭಕ್ಷಿಸುತ್ತಿರುವುದರ ಅರಿವಾಗಿ ಆ ಕಪ್ಪೆಗಳಿಗೆ ಜಂಘಾಬಲವೇ ಉಡುಗಿ ಹೋದಂತಾಯಿತು. ಈ ಭಕ್ಷಣೆಯಿಂದ ಅಳಿದುಳಿದವರ ಜೀವವನ್ನು ಕಾಪಾಡಿಕೊಳ್ಳುವುದೇ ಒಂದು ದೊಡ್ಡ ಸವಾಲಾಗಿ ಪರಿಣಮಿಸಿತು. ಮತ್ತೆ ಭಗವಂತನಲ್ಲಿ ಪ್ರಾರ್ಥಿಸಿಕೊಳ್ಳೋಣವೆಂದರೆ ನಮ್ಮ ಈ ಆರ್ದನೀಯ ಕೂಗು ಯಾರಿಗೂ ಕೇಳಿಸದಂತಾಗಿದೆ. ಆದರೂ ಆ ಕಪ್ಪೆಗಳ ಅದೃಷ್ಟ ಚೆನ್ನಾಗಿತ್ತು. ಯಾವುದೋ ಕೆಲಸದ ನಿಮಿತ್ತ ಭೂಲೋಕಕ್ಕೆ ಬಂದಿದ್ದ ಭಗವಂತ ಆ ನದಿ ತಟದಲ್ಲಿ ಮತ್ತೆ ಪ್ರತ್ಯಕ್ಷನಾದಾಗ ಆ ಕಪ್ಪೆಗಳಿಗಾದ ಆನಂದ ಹೇಳತೀರದು.

'ಹೇ ದೇವನ್...ನಿನ್ನಿಂದ ಎಂಥಹ ಪ್ರಮಾದವಾಗಿ ಹೋಗಿದೆ. ರಾಜನೇ ಪ್ರಜೆಯನ್ನು ಭಕ್ಷಿಸುತ್ತಿರುವ ಕಲ್ಪನೆಯೇ ನಮಗೆ ನಡುಕ ಹುಟ್ಟಿಸುವಂಥಹದು. ದಯಮಾಡಿ ಈ ಸಮಸ್ಯೆಗೊಂದು ಪರಿಹಾರ ಸೂಚಿಸು' ಎಂದು ಆ ಕಪ್ಪೆಗಳು ಒಕ್ಕೊರಲಿನಿಂದ ಪ್ರಾರ್ಥಿಸಿಕೊಂಡವು. ಆಗ ಕೊಂಚ ವಿಚಲಿತನಾದ ಭಗವಂತ, ಆ ಕಪ್ಪೆಗಳನ್ನುದ್ದೇಶಿಸಿ,

‘ಬಡ ಜೀವಿಗಳೇ, ದಯವಿಟ್ಟು ಈ ವಿಚಾರದಲ್ಲಿ ನನ್ನನ್ನು ನಖಶಿಖಾಂತ ಕ್ಷಮಿಸಿ, ನನ್ನ ಹತ್ತಿರ ಇರುವುದೇ ಇಂಥಹ ರಾಜರ ಮಾಡಲ್ಲುಗಳು! ಇನ್ನು ಮುಂದೆ ಇಂಥಹ ದುಃಸ್ಸಾಹಸಕ್ಕೆ ನಾನೆಂದೂ ಕೈ ಹಾಕುವುದಿಲ್ಲ. ಇನ್ನು ಮುಂದೆ ರಾಜನ ಆಯ್ಕೆಯ ಪ್ರಕ್ರಿಯೆಯನ್ನು ನಿಮ್ಮ ವಿವೇಚನೆಗೇ ಬಿಟ್ಟು ಬಿಟ್ಟಿದ್ದೇನೆ. ನಿಮ್ಮಲ್ಲೆ ಒಬ್ಬ ಯೋಗ್ಯನನ್ನು ಆರಿಸಿಕೊಳ್ಳಲು ನೀವೇ ಸ್ವತಂತ್ರರು’ ಎಂದು ಹೇಳಿ, ಆ ಬಕನೊಂದಿಗೆ ಇದ್ದಕ್ಕಿದ್ದಂತೆ ಭಗವಂತ ಅಂತರ್ಧಾನನಾಗಿಬಿಟ್ಟ.

ಮೇಲಿನ ಸ್ವಾರಸ್ಯಕರ ಕಥೆಯನ್ನು ನಮ್ಮ ಕಾಮನ್ ರೂಮಿನಲ್ಲಿ ಹೇಳಿದ ರಾಯರು ಪ್ರತಿಕ್ರಿಯೆಯಾಗಿ ನಮ್ಮತ್ತ ದೃಷ್ಟಿ ಬೀರಿ, ‘ಈ ಕಥೆ ನಾನು ಚಿಕ್ಕವನಾಗಿದ್ದಾಗ ನನ್ನ ಸೋದರ ಮಾವ ರಾಜಾರಾಯರು ಹೇಳಿದ ಕಥೆ’ ಎಂದರು.

‘ಮುಂದೇನಾಯ್ತು ಸಾರ್?’ ಎಂದೆವು. ಕುತೂಹಲದಿಂದ. ‘ಯಾವ ಯೋಗ್ಯ ವ್ಯಕ್ತಿಯೂ ಸಿಗದೆ ಭಗವಂತನ ಆಜ್ಞೆಯನ್ನೂ ಮೀರಲಾಗದೆ, ಆ ಕಪ್ಪೆಗಳು ಇಂದಿಗೂ ಆ ನದಿಯ ತಟದಲ್ಲಿ ವಟವಟ ಗುಟ್ಟುತ್ತಾ ಬಾಳು ಸವೆಸುತ್ತಿವೆ’ ಎಂದ ರಾಯರು ಸಭೆ ಬರಖಾಸ್ತು ಎಂದು ಕುರ್ಚಿಯಿಂದೆದ್ದರು.

ದಾರಿಯಲ್ಲಿ ‘ಸರ್ ತಾವು ಹೇಳಿದ ಆ ಕಥೆಗೂ ಪ್ರಸ್ತುತ ನಮ್ಮ ರಾಜಕಾರಣಕ್ಕೂ ತುಂಬಾ ಸಾಮ್ಯವಿದೆಯಲ್ಲಾ?’ ಎಂದೆ.

‘ಕರೆಕ್ಟ್ ಗೆಸ್ ಮೈ ಬಾಯ್’ ಎಂದ ರಾಯರು ಅಂದ್ಹಾಗೆ ‘ಟಿ.ವಿ.ಯಲ್ಲಿ ಲೇಟೆಸ್ಟ್ ನ್ಯೂಸ್ ಏನು?’ ಎಂದು ಪ್ರಶ್ನಿಸಿದರು.

‘ಈ ಸರ್ತಿಯ ಚುನಾವಣಾ ಫಲಿತಾಂಶದಲ್ಲಿ ಯಾರಿಗೂ ಬಹುಮತ ಬಂದಿಲ್ಲ, ಒಂದು ರೀತಿಯ ಅತಂತ್ರ ಸ್ಥಿತಿ, ಹೀಗಾಗ್ಬಾರ್ದಿತ್ತು ಸರ್’ ಎಂದೆ.

‘ನಮ್ಮ ಜೀವನದಂತೆ ನಮ್ಮ ಆಯ್ಕೆ. ಈಗ ಕುದುರೆಗಳಿರುವ ಬೆಲೆ ಮನುಷ್ಯರಿಗಿಲ್ಲ’ ಎಂದು ವಿಷಾದದಿಂದ ನಕ್ಕರು ರಾಯರು.

ಆಗ ನನಗೆ ನಮ್ಮ ರಾಜಕಾರಣಿಗಳೆಲ್ಲಾ ಬಕನಂತೆಯೂ, ನಾವು ವಟಗುಟ್ಟುತ್ತಿರುವ ಬಡ ಕಪ್ಪೆಗಳಂತೆಯೂ ಭಾಸವಾಯ್ತು. ತಮ್ಮ ಮನೆಯ ಹತ್ತಿರ ಬಂದಾಗ ರಾಯರು, ನಮ್ಮತ್ತ ಕೈ ಬೀಸಿ ‘ಅಂದ್ಹಾಗೆ ನಿಮಗ್ಯಾರಿಗಾದ್ರು ಪುಸ್ತಕ ಬೈಂಡ್ ಮಾಡೋರು ಗೊತ್ತೆ?’ ಎಂದು ಪ್ರಶ್ನಿಸಿದರು.

‘ಯಾಕ್ಸಾರ್?’ ಎಂದೆವು.

‘ಮಹಾಕವಿ ಕಾಳಿದಾಸ ರಚಿಸಿದ ಕುಮಾರ ಸಂಭವ ಎಂಬ ಪುಸ್ತಕವನ್ನು ಅಟ್ಟದಿಂದ ಮೊನ್ನೆ ತಾನೆ ಇಳಿಸಿದೆ. ಪೇಜುಗಳೆಲ್ಲಾ ಹರಿದುಹೋಗಿದೆ. ಚೆನ್ನಾಗಿ ಬೈಂಡ್ ಮಾಡಿಸಿ ಒಂದು ಐದು ವರ್ಷವಾದರೂ ಉಪಯೋಗಕ್ಕೆ ಬರುವಂತೆ ಮಾಡಬೇಕಲ್ಲ ಎಂದರು.

‘ವಿ ವಿಲ್ ಟ್ರೈ ಸರ್’ ಎಂದು ಮನೆಗೆ ಹಿಂತಿರುಗಿದೆವು.

TEMPLE
OF
KNOWLEDGE

DISTANCE EDUCATION

(Govt. & UGC Recognised Universities)

# BEECHI VIDYA KENDRA

## ADMISSION OPEN - APPLY NOW

## CENTER OF DISTANCE LEARNING

**MBA WITH 6 SPECIALIZATIONS,**
**MA, M.COM, MCA, MSc-BT,**
**PGDCS, BA & B.COM - AGE BASIS**

**Email : admin@beechi.in Web : www.becchi.in**
**Mob. 9035302302, 9035007003**

## PLACEMENT SERVICES FOR :

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

TEMPLE
OF
KNOWLEDGE

**Email : admin@beechi.in**
**Web : www.becchi.in**
**Mob. 9740968677**

# ಆಟೋರಾಜನ ಆಟಾಟೋಪ

**ಆರತಿ ಘಟಿಕಾರ್**

ಈ ಬಾರಿ ಬೆಂಗಳೂರಿಗೆ ಬಂದಾಗ ನವರಾತ್ರಿಯ ಗೊಂಬೆಗಳನ್ನು ನೋಡಲು ನಮ್ಮ ನೆಂಟರೊಬ್ಬರ ಮನೆಗೆ ಸಂಜೆ ನಾನು ಅಮ್ಮ ಹಾಗು ಅಕ್ಕ ಹೊರಟೆವು. ಹೊರಡುವಾಗ ಆಗಸ ಶುಭ್ರವಾಗಿದ್ದರೂ ಈ ಮೋಡಗಳು ಯಾವಾಗ (ಮನುಷ್ಯರಂತೆ) ಬಣ್ಣ ಬದಲಾಯಿಸುತ್ತವೋ ಏನೋ ಎಂದು, ನಮ್ಮ ಬಣ್ಣ ಬಣ್ಣದ ಛತ್ರಿಗಳನ್ನು ಹಿಡಿದು ನಡೆದೆವು.

ಗೊಂಬೆಗಳ ಚೆಂದದ ಅಲಂಕಾರ, ತಿಂಡಿ ತೀರ್ಥ, ಹರಟೆಯಲ್ಲಿ ಮುಳುಗಿ ಹೋದ ನಾವು ಮಾತೆಯರು ಆಗಸ ಒಮ್ಮೆಲೆ ಒಂದೆರಡು ಬಾರಿ ಜೋರಾಗಿ ಗುಡುಗಿ ವಾರ್ನಿಂಗ್ ಕೊಟ್ಟಾಗ ನಮ್ಮ ಮಾತುಗಳಿಗೆ ಬ್ರೇಕ್ ಕೊಟ್ಟು ಮಳೆ ಬರುವ ಮುನ್ಸೂಚನೆಗೆ ಲಗುಬಗನೆ ವಾಪಸ್ಹೊರಡುವ ತಯಾರಿ ನಡೆಸಿದೆವು.

ಹೊರಗೆ ಮಳೆ ಸಣ್ಣಗೆ ಶುರುವಾಗಿಯೇ ಬಿಟ್ಟಿತು. ನಾವು ಬುಕ್ ಮಾಡಿದ ಊಬರ್ ಕ್ಯಾಬ್‌ಗಾಗಿ ಕಾಯುತ್ತ ಮತ್ತೊಂದು ರೌಂಡ್ ಕಾಫಿಯೊಂದಿಗೆ ಬ್ರೇಕ್ ಕೆ ಬಾದ್ ಎನ್ನುವಂತೆ ಮುಂದುವರೆಯಿತು ನಮ್ಮ ಹರಟೆ. ಐದು ನಿಮಿಷದ ಅಂತರದಲ್ಲಿದ್ದಾನೆ ಎಂದು ನಮ್ಮ ಮೊಬೈಲು ತೋರಿಸಿದಾಗ, ಚಾಲಕನಿಗೆ ಕರೆ ಮಾಡಲು "ಮೇಡಂ! ನಾನು ತುಂಬಾ ದೂರದಲ್ಲಿದ್ದೀನಿ. ಇನ್ನು ಅರ್ಧ/ಮುಕ್ಕಾಲು ಘಂಟೆಯಾಗಬಹುದು" ಎಂದು ರೀಲು ಬಿಟ್ಟ. ಆದರೆ ಜೀಪೀಎಸ್‌ನಲ್ಲಿ ಟ್ರ್ಯಾಕ್ ಮಾಡಿ ನೋಡಲು ಅಲ್ಲೇ ಮುಂದಿನ ಬೀದಿಯಲ್ಲೇ ಇದ್ದಾನೆ ಎಂದು ತೋರಿಸುತಿತ್ತು ! ಮಳೆಗೆ ಅಲ್ಲೇ ಗಾಡಿಯನ್ನು ಸೈಡ್ಗೆ ಹಾಕಿ ಬೀಡಿ/ಸಿಗರೇಟ್ ಹೊಡೀತಿರಬಹುದು ಎಂಬ ನಮ್ಮ ಅನುಮಾನ ಬಲವಾಗಿ ಮತ್ತೊಮ್ಮೆ ಫೋನಾಯಿಸಿದಾಗ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ನಮ್ಮ ಬುಕ್ಕಿಂಗ್ ಕೂಡ ರದ್ದು ಗೊಳಿಸಿದಾಗ ಅವನನ್ನು ಮನಸಾರೆ ಶಪಿಸಿ ಊಬರ್ ಕ್ಯಾಬಿಗೆ ಗೋಲಿ ಹೊಡೆದು ರಾಜಕಾರಣಿಗಳು ಎಲೆಕ್ಷನ್ ಟೈಮಿನಲ್ಲೇ ಪಕ್ಷ ಹಾರುವ ಹಾಗೆ ಓಲಾ ಬುಕ್ ಮಾಡಿದೆವು. ಆ ಚಾಲಕ ನಮ್ರತೆಯಿಂದ ನಮ್ಮ ಲೋಕೆಶನ್ ವಿವರಗಳನ್ನೆಲ್ಲ ವಿಚಾರಿಸಿ 10 ನಿಮಿಷದಲ್ಲೇ ಬಂದೆ ಮೇಡಂ ಎಂದು ಆಶ್ವಾಸನೆ ನೀಡಿದ.

ನಂತರ ಈ ಮಹಾಶಯನಿಗೆ ನಮ್ಮ ಕಾತುರದ ಕರೆ! ಆದರೆ ಇವನೂ ನಿರುತ್ತರಕುಮಾರ! ಸ್ವಿಚ್ ಆಫ್ ಸಂದೇಶವೊಂದೇ ನಮ್ಮ ಪಾಲಿಗೆ! ಉಬರ್ ಚಾಲಕನಂತೆಯೇ ಇವನೂ ನಮ್ಮ ಬುಕಿಂಗ್ ಕ್ಯಾನ್ಸಲ್ ಮಾಡಿಕೊಂಡಾಗ ಈ ಕ್ಯಾನ್ಸಲ್ ಕುಮಾರರ ಡ್ರೈವಿಂಗ್ ಲೈಸೆನ್ಸೆ ಕ್ಯಾನ್ಸಲ್ ಮಾಡಿಸಿಬೇಕು ಎನ್ನುವಷ್ಟು ರೋಷ ಉಕ್ಕಿಬಂದಿತ್ತು! ಮುಗಿಲು ಈಗ ಜೋರಾಗಿ ಧೋಗರೆಯಲು ಶುರುವಾಗಿ ಹಾಳಾದ ಓಲಾ ಆಟೋಗಳ ಡಿಮ್ಯಾಂಡು ಕೂಡಾ ಮುಗಿಲು ಮುಟ್ಟಿತ್ತು !

ಕೈಬೆರಳ ತುದಿಯಿಂದಲೇ ಟ್ಯಾಕ್ಸಿ ಕರೆಸಿ ಮನೆಯಿಂದಲೇ ಏರಿಕೊಳ್ಳುವ ಆಸೆಯನ್ನು

ಕೈಬಿಟ್ಟು, ನಮ್ಮ ಕಾಲುಗಳು ಛತ್ರಿಯಾಸರೆಯಲ್ಲಿ ಸರ್ಕಸ್ ಮಾಡುತ್ತಾ ಸರ್ಕಲ್ ತಲುಪಿದವು. ನಾವು ಮೂವರೂ ಟ್ರಾಫಿಕ್ ಪೋಲೀಸರಂತೆ (ಸೀಟಿ ಹೊಡೆಯದೆ) ಮೂರೂ ದಿಕ್ಕಿಗೆ ಕೈ ಆಡಿಸುತ್ತ ಖಾಲಿ ಆಟೋಗಳನ್ನೆಲ್ಲ ನಿಲ್ಲಿಸಲು ಪ್ರಯತ್ನಿಸಿದಾಗ ನಮ್ಮ ಕರೆಗೆ ಕ್ಯಾರೆ ಅನ್ನದೆ ತಮ್ಮ ಮಾಮೂಲಿ ಧಿಮಾಕು ತೋರುವ ಆಟೋ ರಾಜರಿಂದ ನಮ್ಮ ಮನೆ ತಲಪುವ ಆತಂಕ ಇನ್ನು ಹೆಚ್ಚಾಯಿತು.

ಆಗ ಯಾವ ಜನ್ಮದ ಪುಣ್ಯದ ಫಲವೋ ಏನೋ ಎಂಬಂತೆ ಆಟೋ ಚಾಲಕನೊಬ್ಬ ನಮ್ಮ ಮುಂದೆ ಗಕ್ಕನೆ ನಿಂತು ನಾವು ಕರೆದಲ್ಲಿಗೆ ಯಾವ ತಕರಾರು ಇಲ್ಲದೆ ಬರಲು ಒಪ್ಪಿದಾಗ ಹೀಗೂ ಉಂಟೆ! ಎಂಬ ಖುಷಿಯ ಉದ್ಗಾರ ಬಾಯಿ ತನಕ ಬಂದರೂ ತಡೆ ಹಿಡಿದ  ನಮಗೆ ಅವ ನಿಜಕ್ಕೂ ದೇವರಂತೆಯೇ (ಸದ್ಯ ದೇವಮಾನವಂತಲ್ಲ) ತೋರಿದ !!

ಅಕ್ಕ, ಮೊದಲು ನಮ್ಮನ್ನು ಇಳಿಸಿ ಮುಂದೆ ಹತ್ತಿರದಲ್ಲೇ ಇದ್ದ ತನ್ನ ಮನೆ ಹೋಗಬೇಕಾದ್ದರಿಂದ, ಮಳೆಗಾಗಿ ಇಳಿಬಿಟ್ಟಿದ್ದ ಪರದೆಯ ಮೂಲೆಗೆ ಹೋಗಿ ಸೇರಿದಳು. ಮಧ್ಯ ಇಕ್ಕಟ್ಟಿನಲ್ಲಿ ಕೊಂಚ ತೂಕದ ಅಮ್ಮ ಹಾಗು ಈ ಕಡೆ ಕೊನೆಯಲ್ಲಿ ನಾನು ಜೋರಾಗುತ್ತಿದ್ದ ಮಳೆಗೆ ದೇಹದ ಕಾಲು ಭಾಗ ಹೊರಗುಳಿದು ಗಡ ಗಡ ನಡುಗುತ್ತಾ ಕುಳಿತೆ. ನನ್ನ ಹೊಸ ಕೆನೆ ಬಣ್ಣದ  ಚೂಡೀದಾರು ಕೆಸರಿನ ಓಕುಳಿ ಸಿಡಿಸಿಕೊಳ್ಳುತ್ತ, ನೇರವಾಗಿ ಲಾಂಡ್ರಿ ಪಯಣಕ್ಕೆ ಸಿದ್ದವಾಗಿ ಕುಳಿತಿತ್ತು!

ನಮ್ಮ ಆಟೋ ಆ ಜೋರು ಮಳೆಯಲ್ಲಿ ನಿಧಾನವಾಗಿ ರಸ್ತೆ ಗುಂಡಿಗಳು ನಡುವೆ ಹಾವಿನಂತೆ ಸಾಗಿ ಒಂದು ತಿರುವಿನಲ್ಲಿ ಚಾಲಕ  "ಅಯ್ಯೋ! ಎಡಗಡೆಗೆ ಭಾರ ಜಾಸ್ತಿಯಾಯಿತು ಮೇಡಂ.. ಅಮ್ಮ ಆ ಮೂಲೆಗೆ ಜರುಗಿ ಕೂಡಲಿ.. ಇಲ್ಲದಿದ್ರೆ ಟರ್ನ್ ಮಾಡೋವಾಗ  ಮಳೆಗೆ ಆಟೋ ಸ್ಕಿಡ್ ಆಗಿ ಬಿಡುತ್ತೆ"  ಎಂದು ಹೆದರಿಸಿದಾಗ ರೇಗುತ್ತಲೇ ಅಮ್ಮ ಹಾಗು ಅಕ್ಕ ಇಕ್ಕಟ್ಟಿನಲ್ಲೇ ಜಾಗ ಬದಲಾಯಿಸಿಕೊಳ್ಳುವಾಗ   ಮೊದಲೇ ನೋವೆಂದು ಗೋಳಾಡುತ್ತಿದ್ದ ಅಮ್ಮನ ಮಂಡಿ ತರುಚಿ ಅಕ್ಕನ ಕಾಲುಗಳ ತಿರುಚಿ ಇಬ್ಬರೂ ನೋವಿನಂದ ಕೂಗಿಕೊಂಡರು.

ಇಷ್ಟು ಸಾಲದು ಎಂಬಂತೆ ಮತ್ತೊಂದು ತಿರುವಿನಲ್ಲಿ ಮತ್ತೆ ಶುರು ಚಾಲಕನ ರಗಳೆ ಮೇಡಂ! ಬಲಕ್ಕೆ  ತೂಕ ಜಾಸ್ತಿ ಆಗೋಯ್ತು , ಆಟೋ ವಾಲ್ಕೊಂಡು ಬಿದ್ರೆ ಕಷ್ಟ  ಆತಂಕ ಹುಟ್ಟಿಸಿದ, ಜೀವ ಸಹಿತ ಮನೆ ಮುಟ್ಟುವ ಸಲುವಾಗಿ ಮತ್ತೊಮ್ಮೆ ಮಹಾ ಸ್ಥಳಾಂತರಕ್ಕೆ ಮುಂದಾಗಿ  ನಾನು ಬಾಗಿ, ಮೈ ಹಿಡಿಯಾಗಿಸಿ ಮಧ್ಯಕ್ಕೆ ಜರುಗಲೆತ್ನಿಸಿದಾಗ, ಚಾಲಕ ಬ್ರೇಕ್ ಹಾಕಿದ ರಭಸಕ್ಕೆ  ಅಕ್ಕನ ತೊಡೆಯ ಮೇಲೆಯೇ ನನ್ನ ಪೂರ್ಣ ಭಾರದೊಂದಿಗೆ ಲ್ಯಾಂಡ್ ಆಗಿಬಿಟ್ಟೆ!  ಪಾಪ! ಅಕ್ಕನ ಕಾಲುಗಳು ಅಪ್ಪಚ್ಚಿಯಾಗಿ ಕಿರ್ರೋ ಎಂದು ಅರಚಿಕೊಂಡವು.

ಘಾಬರಿಯಾಗಿ ಅಯ್ಯೋ ಸ್ಸಾರಿ ಕಣೆ.. ಹಾಳಾದ ರಸ್ತೆ ಗುಂಡಿ. ನಾನು ನನ್ನ ಕಾಲ್ಬೆರಳ ತುದಿಯಲ್ಲಿ ಯೋಗ ಭಂಗಿಯಂತೆ ಬ್ಯಾಲೆನ್ಸ್ ಮಾಡಿ ನಿಂತಾಗ, ಅಕ್ಕ ಕಾಲು ತಿಕ್ಕುತ್ತಾ. ಅಯ್ಯೋ ರೀ! ನಿಮ್ದೊಳ್ಳೆ ಕಥೆಯಾಯ್ತಲ್ಲ.. ನಾವು ಆಟೋ ಹತ್ತೊಕೂ ಮುಂಚೆ ನಮ್ಮ ತೂಕದ ಪ್ರಕಾರ ಬ್ಯಾಲೆನ್ಸ್ ಆಗಿ ಮೊದಲೇ ಕೂಡಿಸೋಕೆ ಏನ್ರೀ ಧಾಡಿಯಾಗಿತ್ತು? ಆಟೋ ಚಾಲಕನ ಮೇಲೆ ಗರಂ ಆದಳು! ನಾನೂ

ಕುಕ್ಕರ ಬಡಿದು ಘೋ! ಇದೊಳ್ಳೆ ಕರ್ಮ ಆಯಿತಪ್ಪ, ನಮಗೆ ಈ ಡಬ್ಬ ಆಟೋನೇ ಸಿಗಬೇಕಾ ಎಂದು ವಟಗುಟ್ಟಿದೆ. ನಮ್ಮ ಗೊಣಗಾಟಕ್ಕೆ ಆಟೋದವನ ಬಾಯಿ ಸುಮ್ಮನಿರಲು ಹೇಗೆ ಸಾಧ್ಯ?

ಅಯ್ಯೋ ಮೇಡಂ! ನೋಡಿ ನಿಮ್ಮಂಥ ತೂಕದವರನ್ನು ಕೂಡಿಸಿಕೊಂಡು ಈ ಮಳೆನಲ್ಲಿ ಗಾಡಿ ಓಡಿಸೋದು ಎಷ್ಟು ಕಷ್ಟ ಗೊತ್ತಾ! ನಾನಾಗೋ ಹೊತ್ತಿಗೆ ಇಷ್ಟೆಲ್ಲಾ ರಿಸ್ಕ್ ತೊಗೊತಾ ಇರೋದು. ನಮ್ಮ ಜೀವ ಉಳಿಸಿದ ಧಾಟಿಯಲ್ಲಿ ಗುಡುಗಿದ!

ಮುಂದೆ ಕೆಂಪು ಸಿಗ್ನಲ್ನಲ್ಲಿ, ರಸ್ತೆಯ ಅಂಚಿಗಿದ್ದ ಬೃಹದಾಕಾರದ ಮರದಡಿಯೆಲ್ಲೇ ನಮ್ಮ  ಗಾಡಿ ನಿಂತಾಗ ಭಯದಲ್ಲಿ ನಾನು ಅಂಗಲಾಚಿದೆ. "ರೀ ಪ್ಲೀಸ್! ಸ್ವಲ್ಪ ಗಾಡಿನಾ ಮುಂದಕ್ಕೆ ನಿಲ್ಲಿಸಿ, ಮೊನ್ನೆ ತಾನೇ ಪೇಪರನಲ್ಲಿ ಓದಿಲ್ವಾ. ಇಂಥ ಜೋರು ಮಳೆಗೆ ಮರದ  ಕೆಳಗೆ ನಿಂತ ಕಾರ್ ಮೇಲೇನೆ ಮರ ಉರಳಿ, ಪಾಪ ! ಕಾರಲ್ಲಿದ್ದವರೆಲ್ಲ ಶಿವನ ಪಾದ ಸೇರಿಕೊಂಡರಂತೆ. ಮರವನ್ನು ಯಮದೂತನಂತೆ ಕಂಡು ನಾನ ಕೊಂಚ ನಡುಗಿದಾಗ "ಹೂಂ! ನಾಳೆ  ನಿನ್ನ ಮಗನ ಬರ್ತಡೆ ಪಾರ್ಟಿ ಬೇರೆ ಅಲ್ವೇನೆ" ಅಕ್ಕ ನೆನಪಿಸಿದಳು. ನನ್ನ ಮುದ್ದು ಮಗನನ್ನು ನೆನೆಸಿಕೊಂಡು ನಾನು ಭಾವುಕಳಾದೆ. ಅಮ್ಮ ತಮಗೆ ಗೊತ್ತಿದ್ದ ವೃಕ್ಷರಾಜನ ಮಂತ್ರಗಳು ಒಂದೂ ನೆನಪಿಗೆ ಬಾರದೆ ಪೇಚಾಡಿಕೊಂಡರು. ಆಟೋದವ ಹಲ್ಕಿರಿಯುತ್ತ ಅಯ್ಯೋ! ಆಯುಷ್ಯ  ಗಟ್ಟಿ ಇದ್ದರೆ ಏನೂ ಆಗಲ್ಲ ಬಿಡ್ರಮ್ಮ, ನಾಳೆ ನಿಮ್ಮ ಮಗನ ಹುಟ್ಟಿದ ಹಬ್ಬಕ್ಕೆ ನನ್ನನ್ನೂ ಕರೀರಿ ಬರ್ತೀನಿ" ಅಂತ ತರಲೆ ಮಾಡಿದ.

ಮುಂದೆ ಸ್ವಲ್ಪ ದೂರ ಸಾಗುವಷ್ಟರಲ್ಲಿ ಆ ಜೋರು ಮಳೆಯಲ್ಲಿ ನಮ್ಮ ಆಟೋಗೆ ಸೈಡಿನಿಂದ  ಸ್ಕೂಟರ್ ಚಾಲಕನೊಬ್ಬ ಡಿಕ್ಕಿ ಹೊಡೆದ ಶಬ್ದ, ಇಬ್ಬರಿಂದಲೂ ಕೂಗಾಟ, ಬೈದಾಟಗಳು ನಡೆದು, ಕೊನೆಗೆ ನಾವೇ ಚಾಲಕನ ಪರವಾಗಿ ಕ್ಷಮೆಯಾಚಿಸಿ ಕುಡಿದು ಟೈಟಾದ ಸ್ಕೂಟರ್ ಸವಾರನನ್ನು ಸಾಗಹಾಕಿದೆವು.

ಇದೆ ಗಲಾಟೆಯಲ್ಲಿ ಕರೆಂಟು ಹೋಗಿ ಆ ಗಾಡಾಂಧಕಾರದಲ್ಲಿ ನಮ್ಮ ಚಾಲಕ ದಾರಿ ತಪ್ಪಿ ಬೇರೆ ರೂಟಿನಲ್ಲಿ ಸಾಗಿಬಿಟ್ಟಿದ್ದ.

ಆ ನಿರ್ಜನವಾದ ರಸ್ತೆ ನಮಗೆ ಕೊಂಚ ಅಪರಚಿತವೆನಿಸಿದ್ದು ಅಲ್ಲದೆ ಬಾಡಿಬಿಲ್ಡರ್‌ನಂತೆ  ದೇಹ ಬೆಳಿಸಿದ್ದ ನಮ್ಮ ಚಾಲಕನನ್ನು ಕಂಡು ನನ್ನ ಹಾಗು ಅಕ್ಕನ ಕೈಗಳು ಭಯದಲ್ಲಿ ಗಟ್ಟಿಯಾಗಿ ಬೆಸೆದುಕೊಂಡವು! ಪಕ್ಕದಲ್ಲಿದ್ದ ಅಮ್ಮ ಯಾವಾಗಲೋ ಕಣ್ಮುಚ್ಚಿ  ನಾಮಸ್ಮರಣೆಯಲ್ಲಿ ಮುಳುಗಿದ್ದರು! ಕೊಂಚ ಧೈರ್ಯ ಮಾಡಿ "ರೀ ಇದು ತುಂಬಾ ಲಾಂಗ್ ರೂಟು ಈ ಕಡೆ ಯಾಕ್ ಬಂದ್ರೀ" ಎಂದು ಆ ರಸ್ತೆಯಲ್ಲಿ ಬಹಳ ಸಲ ಓಡಾಡಿದ ಹಾಗೆ ನಾವು ಪೋಸ್ ಕೊಟ್ಟಾಗ, ಚಾಲಕ ಕರೆಂಟ್ ಹೋಗಿ ರೂಟ್ ಸ್ವಲ್ಪ ಕನ್ಫ್ಯೂಸ್ ಆಗೋಯ್ತು" ಎಂದು ಎಲ್ಲೆಲ್ಲೋ ಹೊರಳಿ ಕೊನೆಗೊ ನಮ್ಮ ಮನೆ ದಾರಿ ಹಿಡಿದಾಗಲೇ ಅಮ್ಮ ಕಣ್ಣು ತೆರೆದದ್ದು!

# RAMAIAH
## Indic Specialty Ayurveda
## RESTORATION HOSPITAL

## Ramaiah Ayurveda

- General Medicine
- Pain Clinic
- Dermatology
- Ophthalmology
- Gynaecology & Obstetrics
- Paediatrics
- Geriatrics
- Preventive Medicine (Wellness, Well - Being)
- Yoga
- Ayurvedic Para-Surgical Procedures

Proud to Announce
**NABH Accrediation**



Under the Leadership of
**Prof. Dr. G.G. Gangadharan**

## World Renowned Doctors



First Franchise
Bannerghatta




First Joint Venture
Penang, Malaysia




First Branch
Yelahanka New Town

24/7 Emergency Healthcare
Attached to Memorial Hospital
Spacious in Patient Facility

Free Telephonic Consultation
**080 22183456, 80 99 95 95 95**

New BEL Road, M S Ramaiah Nagar, Bengaluru - 560 054, www.msricaim.com

# ಭಾರತದ ಮೊಟ್ಟಮೊದಲ ಸಾರ್ವಜನಿಕ ಔಷಧ ಪ್ರಯೋಗಾಲಯ ಸಂಸ್ಥೆ



















- ನೀವು ಕುಡಿಯುವ ನೀರು ಶುದ್ಧವೇ?
- ನಿಮ್ಮ ಮಕ್ಕಳ ತಿನಿಸುಗಳಲ್ಲಿ ಹಾನಿಕಾರಕ ಅಂಶಗಳಿವೆಯೇ?
- ನಿಮ್ಮ ಮನೆಯ ಅಂಗಳದಲ್ಲಿ ಅಥವಾ ಹೊಲದ ಮಣ್ಣಿನಲ್ಲಿ ವಿಷಕಾರಿ ಅಂಶವಿದೆಯೇ?
- ನೀವು ಸೇವಿಸುವ ಗಿಡಮೂಲಿಕೆ ಔಷಧಿಗಳಲ್ಲಿ ಹಾನಿಕಾರಕ ಅಂಶವಿದೆಯೇ?
- ಹಾಳಾದ ಅಥವಾ ಕಲಬೆರಕೆ ತಿನಿಸುಗಳ ಭಯವೇ?
- ಮೂತ್ರ, ರಕ್ತದಲ್ಲಿ ವಿಷಕಾರಿ ಅಥವಾ ಖನಿಜಾಂಶಗಳ ಪರೀಕ್ಷೆ ಮಾಡಿಸಬೇಕೇ?

**ಈ ಎಲ್ಲಾ ಸಂದೇಹಗಳಿಗೆ ಶೀಘ್ರದಲ್ಲಿ ಉತ್ತರ ಪಡೆಯಲು ಹಾಗೂ ನೀವು ಆರೋಗ್ಯಕರ ಪದಾರ್ಥಗಳನ್ನು ಸೇವಿಸುವಂತಾಗಲು ನೀರು, ಆಹಾರ, ಮಣ್ಣು ಹಾಗೂ ಔಷಧಿಗಳನ್ನು ಪರೀಕ್ಷೆ ಮಾಡಿಸಿ.**

RAMAIAH

## RAMAIAH ADVANCED TESTING LAB
## RAMAIAH ADVANCED TRAINING CENTRE

**CERTIFICATE TRAINING PROGRAMS * PROJECTS * P.G. DIPLOMA ON MODERN METHODS OF ANALYSIS FOR FOOD / DRUG / ENVIRONMENT FOR GRADUATES & POST-GRADUATES IN SCIENCE, ENGG, PHARMACY, BIO-CHEMISTRY, BIO-TECHNOLOGY**

Opp. Ramaiah Hospital, 80 Ft Road, New BEL Road,Bengaluru – 560 054
Call 9844163329; 080 4091 8017,
E – mail: msrdtl@gmail.com or just drop in!

ಇನ್ನು ನಮ್ಮದು ಮೊದಲೆ ಗುಡ್ಡ ಕಡಿದು ರಸ್ತೆಗಳನ್ನು ನಿರ್ಮಿಸಿದ್ದ ಬಡಾವಣೆ! ಒಂದು ಎತ್ತರಕ್ಕೆ ಏರುವ ರಸ್ತೆಯಾದರೆ ಮತ್ತೊಂದು ಕಡೆ ಉರಳಿಕೊಂಡು ಹೋಗುವಂತ ಇಳಿಜಾರು, ಇಂಥ ಏರು ಪ್ರದೇಶದಲ್ಲಿ ಇವನ ಗಾಡಿ ಹತ್ತಲಾರದೆ ಮುಷ್ಕರ ಹೂಡಿ ನಿಂತಿತು. ಬೆಚ್ಚಗೆ ಕುಳಿತ ನನ್ನ ಕಡೆಯೆ ಚಾಲಕನ ವಕ್ರ ದೃಷ್ಟಿ ಬಿದ್ದು, ನೀವು ಸ್ವಲ್ಪ ಇಳೀರಿ ಮೇಡಂ.. ತುಂಬಾ ಅಪ್ಪು, ಗಾಡಿ ಏರಲ್ಲ ಎಂದಾಗ ಅವನ ಡಬ್ಬಾ ಗಾಡಿಯ ಜೊತೆ, ನಮ್ಮ ಬಡಾವಣೆಯ ರಸ್ತೆಗೂ ಹಿಡಿ ಶಾಪ ಹಾಕುತ್ತ ನಾನು ಕೆಳಗಿಳಿದ ತಕ್ಷಣವೆ, ಗಾಡಿ (ಹಗುರಾಗಿ) ರಭಸದಿಂದ ಭೊರ್ರೆಂದು ಮುಂದಕ್ಕೆ ಓಡಿತು. ಮಳೆಯಲ್ಲಿ ಹಿಂದಿನಿಂದ ಛತ್ರಿ ಹಿಡಿದು ಏದುಸಿರು ಬಿಡುತ್ತ ಆ ಅಪ್ಪಿನಲ್ಲಿ ಹಿಂದೋಡಿ ಬರುವ ನನ್ನ ಅವಸ್ಥೆ ಪಾಪ! ಅಪ್ಪು ಆನೆ ಬೆಟ್ಟದ ಮೇಲೆ ಅಂಬಾರಿ ಹೊತ್ತಷ್ಟೇ ಕಷ್ಟ ಅನಿಸಿತ್ತು!

ಉಸ್ಸಪ್ಪ! ಎಂದು ಮತ್ತೆ ಆಟೋದೊಳಗೆ ತೂರಿದ ನನ್ನ ಅವಸ್ಥೆಗೆ ಅಮ್ಮ ಅಕ್ಕ ಪೇಚಾಡಿಕೊಂಡರು. ಇದೆ ಛತ್ರಿಯಿಂದ ಚಾಲಕನ ತಲೆಯ ಮೇಲೆ ಮೊಟಕುವ ಕೋಪವನ್ನು ತಾಳಿದವಳು ಮನೆ ತಲುಪಲಿ ಎಂದು ನಾನೂ ತಡೆದುಕೊಂಡೆ.

ಅಂತೂ ಕೊನೆಗೆ ನಮ್ಮ ಮನೆಯ ಕ್ರಾಸು ತಲುಪಿ ನಿಟ್ಟುಸಿರು ಬಿಟ್ಟಾಗ ಮತ್ತೊಮ್ಮೆ ಚಾಲಕನ ಪಿಟೀಲು. "ಅಯ್ಯೋ ಮೇಡಂ! ನಿಮ್ಮ ಮನೆ ರಸ್ತೆ ಸಕ್ಕತ್ತ್ ಡೌನು ,,,.ಓಡಿಸೋದು ತುಂಬಾ ರಿಸ್ಕು ..ನೀವು ಹೋಗು ಅಂದ್ರೆ ಹೋಗ್ತೀನಿ ಬೇಕಾದ್ರೆ" ಅಂತ ಭಯದ ಹಾವನ್ನು ನಮ್ಮ ಮೇಲೆ (ಮತ್ತೆ) ಬಿಟ್ಟಾಗ, ನಾನು ಅಮ್ಮ ಒಕ್ಕೊರಲಿನಿಂದ "ಅಯ್ಯೋ ಬೇಡಪ್ಪ ಮಾರಾಯ! ನಮ್ಮನ್ನು ಇಲ್ಲೇ ಇಳಿಸಿ ಬಿಡು, ಹೇಗೋ ನಡ್ಕೊಂಡು (ಜೀವ ಸಹಿತ) ಹೋಗ್ತೀವಿ ಎಂದು ಗೋಗರೆದೆವು!

ಇನ್ನು ಅಕ್ಕ ಇಂಥಹ ದಿವ್ಯವಾದ ಆಟೋ ಸೇವೆಯನ್ನು ತನ್ನ ಮನೆಯ ತನಕ ಮುಂದುವರೆಸಲು ಹೆದರಿ ಅಲ್ಲೇ ಚಂಗನೆ ಇಳಿದುಕೊಂಡಳು ಅಂತೂಇಷ್ಟು ಕಷ್ಟ ಪ(ಕೊ)ಟ್ಟು ಗಾಡಿ ಓಡಿಸಿ ದಣಿದ ನಮ್ಮ ಚಾಲಕ ಮಹಾಶಯನ ಬೇಡಿಕೆಯಂತೆ ಮೀಟರ್ ಮೇಲೆ ದುಪ್ಪಟ್ಟು ಹಣ ತೆತ್ತು ಆಟೋ ರಾಜನಿಗೆ ವಿದಾಯ ಹೇಳುವ ಮುನ್ನ, ನೌಕರಿ ಕೊಟ್ಟ ನಂತರ ಇಂಟರ್ವ್ಯೂ ಮಾಡಿದಂತೆ ರೀ ನೀವು ಎಷ್ಟು ವರ್ಷದಿಂದ ಅಟೋ ಓಡಿಸ್ತಾ ಇದ್ದೀರಾ ಕೆಟ್ಟ ಕುತೂಹಲದಿಂದ ನಾನು ವಿಚಾರಿಸಿದೆ.

ಇದು ನಮ್ಮ ಅಣ್ಣನ ಆಟೋ ಮೇಡಂ, ನೆನ್ನೆಯಿಂದಷ್ಟೇ ಓಡಿಸೋಕೆ ಶುರು ಮಾಡಿದ್ದು ಎಂದು ಅವ ಕೂಲಾಗಿ ಹೇಳಿದಾಗ ನಾವು ಹಣೆ ಚಚ್ಚಿಕೊಂಡು ನೀನು ಮನೆ ಕಡೆ ಹುಷಾರಾಗಿ ಹೋಗಪ್ಪ ಎಂದು ಹಾರೈಸಿ, ಬೀಳ್ಕೊಟ್ಟು, ಛತ್ರಿಯಾಸರೆಯಲ್ಲಿ ಮೊಣಕಾಲು ಮಟ್ಟದ ನೀರಿನಲ್ಲಿ ಜಾರಿ ಬೀಳದ ಜಾಣೆಯರಂತೆ ಮನೆ ಸೇರಿದಾಗ, ಅಮ್ಮ "ಸದ್ಯ! ಮೊದಲು ದೇವರಿಗೆ ದೀಪ ಹಚ್ಚಮ್ಮ. ನಾವೆಲ್ಲರೂ ಸುರಕ್ಷಿತವಾಗಿ ಮನೆ ಸೇರಿಕೊಂಡರೆ ವೀರಾಂಜನೆಯನಿಗೆ ವಡೆಹಾರ ಹಾಕ್ತೀನಿ ಅಂತ ಬೇಡಿಕೊಂಡಿದ್ದೆ ಎಂದು ಕೈ ಮುಗಿದರು, ಅಲ್ಲಿನ ರುಚಿಕರವಾದ ವಡೆಗಳ ನೆನಪಾಗಿ ಅಮ್ಮ ನನ್ನ ಕಡೆಯಿಂದಲೂ ಒಂದು ವಡೆ ಹಾರದ ಸೇವೆಯಾಗಲಿ, ಜೈ ಭಜರಂಗ ಬಲಿ ಎಂದು ನಾನೂ ಭಕ್ತಿಯಿಂದ ದೇವರಿಗೆ ಅಡ್ಡ ಬಿದ್ದೆ !

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಆ**

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ✓ ಸಾಧು ಸಂತರು ಆಶ್ರಮದಿಂದ ಕೆಲಸ ಮಾಡತೊಡಗಿದರೆ ಆಗ ಅದು ವರ್ಕ್ ಫ್ರಂ ಓಂ ಆಗುತ್ತದೆ.
- ✓ ನೀನು ಹೇಗಾದರೂ ಡ್ರೆಸ್ ಮಾಡಿಕೊ. ಆದರೆ ನಿನ್ನ ಆತ್ಮ ಮಾತ್ರ ಓರಣವಾಗಿರಬೇಕು.
- ✓ ಹಿಂದಿನ ಕಾಲದಲ್ಲಿ ಮನೆಗೆ ಬಂದವರಿಗೆ ಮೊತ್ತಮೊದಲನೆಯದಾಗಿ ನೀರು ಕೊಡುತ್ತಿದ್ದವು. ಈಗ? ಚಾರ್ಜಿಂಗ್ ಪಾಯಿಂಟ್ ತೋರಿಸುತ್ತೇವೆ ಅಥವಾ ಚಾರ್ಜರ್ ನೀಡುತ್ತೇವೆ. ವೈಫೈ ಪಾಸ್ ವರ್ಡ್ ಕೊಡುತ್ತೇವೆ.
- ✓ ಐ ಆಲ್ವೇಸ್ ಬಿಲೀವ್ ಇನ್ ದಿ ಬೆಸ್ಟ್ ಆಫ್ ಎವೆರಿಬಾಡಿ. ಇಟ್ ಸೇವ್ಸ್ ಸೊ ಮಚ್ ಆಫ್ ಟ್ರಬಲ್.
- ✓ ಮಕ್ಕಳಿಗೆ ನಾವು ರಜೆಯಲ್ಲಿ ಕಲಿಸಬಹುದ್ದೆಂದರೆ: ಅವರು ಇಷ್ಟ ಪಡುವುದನ್ನು ನಾವು ಮಾಡುವುದು ಬಿಟ್ಟು ನಾವು ಮಾಡಿದ್ದನ್ನು ಮಕ್ಕಳು ಇಷ್ಟಪಟ್ಟು ತಿನ್ನುವುದು ಕಲಿಸುವುದು.
- ✓ ಬಿಕಿನಿ ಉಡುಪಿಗೆ ಉದ್ರೇಕಿಸುವ ಶಕ್ತಿ ಇನ್ನೂ ಇರಬಹುದು ಆದರೆ ಅದರಿಂದ ಯಾರಿಗೂ ಶಾಕ್ ಅಂತೂ ಈಗ ಆಗದು.
- ✓ ಗೆಲುವು ಆಗುವವರೆಗೂ ಅದು ಗೆಲುವು ಎನಿಸಿಕೊಳ್ಳುವುದಿಲ್ಲ.
- ✓ ಕಂಟೆಪ್ಟ್ ಈಸ್ ಹಿಡನ್ ಆ್ಯಂಗರ್.
- ✓ ಫೇಸ್ ಬುಕ್: ಯಾರು ಯಾರನ್ನೋ ಆಪ್ತರನ್ನಾಗಿಸಿ ಹತ್ತಿರ ಇರುವವರನ್ನು ಅಪರಿಚಿತರನ್ನಾಗಿಸುವ ಇಂದ್ರಜಾಲದ ಮಂತ್ರದಂಡ.
- ✓ ಮಾತು ಬೇಸರ. ಮೌನ ಬಂಗಾರ. ಮೊಬೈಲೇ ಹತ್ತಿರ.
- ✓ ಇಫ್ ಯು ವಾಂಟ್ ಟು ಲಿವ್ ಅ ಲೈಫ್ ಯು ನೆವರ್ ಲಿವ್ಡ್ ಯು ಹ್ಯಾವ್ ಟು ಡೂ ಥಿಂಗ್ಸ್ ಯು ಹ್ಯಾವ್ ನೆವರ್ ಡನ್.
- ✓ ಬದುಕಿನ ಆಸೆಗಳನ್ನು ಅಗತ್ಯಗಳಂತೆ ಪೂರೈಸಬೇಕೇ ಹೊರತು ದುರಾಸೆಗಳಂತಲ್ಲ.
- ✓ ಯು ನೆವರ್ ನೊ ವಾಟ್ ಈಸ್ ಎನಫ್ ಅನ್‌ಲೆಸ್ ಯು ನೊ ವಾಟ್ ಈಸ್ ಮೋರ್ ದ್ಯಾನ್ ಎನಫ್.

# ನೀವು ಯಾರು?

**ಪಾಲಹಳ್ಳಿ ವಿಶ್ವನಾಥ್**

ಕಳೆದ ರಾತ್ರಿ ಭೋಜನಕ್ಕೆಂದು ಕ್ಲಬ್ಬಿನ ಗೆಳತಿಯರೆಲ್ಲಾ ಒಟ್ಟಿಗೆ ಲಕ್ಷ್ಮಿಬಾಯಿಯವರ ಮನೆಯಲ್ಲಿ ಸೇರಿದ್ದರು. ಅನ್ನಪೂರ್ಣಮ್ಮನವರಿಗೆ ಲಕ್ಷ್ಮಿಯವರ ಪರಿಚಯ ಹೆಚ್ಚೇನೂ ಇರಲಿಲ್ಲ. ಕ್ಲಬ್ಬಿನ ಅತಿ ಶ್ರೀಮಂತ ಮಹಿಳೆ ಎಂದು ಮಾತ್ರ ತಿಳಿದಿತ್ತು. ಭಾರೀ ಭೋಜನದ ನಂತರ ಲಕ್ಷ್ಮಿಯವರ ವಿಶಾಲವಾದ ಮನೆಯಲ್ಲಿ ಗೆಳತಿಯರೆಲ್ಲಾ ತಂಗಿದ್ದರು. ಆದರೆ ಅನ್ನಪೂರ್ಣಮ್ಮನವರಿಗೆ ನಿದ್ರೆ ಬರಲಿಲ್ಲ. ಗಂಟೆ ಒಂದಾಯಿತು, ಎರಡಾಯಿತು, ಇಲ್ಲ, ನಿದ್ದೆ ಬರಲಿಲ್ಲ. ಪಕ್ಕದಲ್ಲಿ ಮಲಗಿ ಗೊರಕೆ ಹೊಡೆಯುತ್ತಿದ್ದ ಗೆಳತಿ ಪದ್ಮಾವತಿಯನ್ನು ಒಮ್ಮೆ ಅಸೂಯೆಯಿಂದ ನೋಡಿ ಹಾಸಿಗೆಯಿಂದ ಎದ್ದು ನಿಧಾನವಾಗಿ ಕೋಣೆಯಿಂದ ಹೊರ ಬಂದು ಕೆಳಗೆ ಇದ್ದ ಅಡಿಗೆ ಮನೆಗೆ ಹೋದರು.

ಅವರಿಗೆ ಹಸಿವಾಗಿತ್ತೇ ಎಂದು ನೀವು ಕೇಳಿದರೆ ಒಂದು ಪುಟ್ಟ ವರದಿಯನ್ನು ಕೊಟ್ಟು ಹೌದು ಎಂದು ಹೇಳಬೇಕಾಗುತ್ತದೆ. ರಾತ್ರಿಯ ಭೋಜನದಲ್ಲಿ ಎಲ್ಲರೂ ಚೆನ್ನಾಗಿಯೇ ತಿಂದಿದ್ದರು. ಭೋಜನವಿರುವುದೇ ಅದಕ್ಕೆ ಅಲ್ಲವೆ ? ಅದೂ ಶ್ರೀಮಂತರ ಮನೆಯ ಭೋಜನ! ಆದರೆ ಅನ್ನಪೂರ್ಣಮ್ಮನವರು 'ನಾನು ಏನೂ ತಿನ್ನುವುದಿಲ್ಲ' ಎಂದು ಹೇಳಿಬಿಟ್ಟಿದ್ದರು. ಅದಕ್ಕೆ ಕಾರಣವೂ ಇದ್ದಿತು. ಒಂದು ಕಾಲದಲ್ಲಿ ಅವರು ತಮ್ಮ ಹೆಸರಿಗೆ ಅನುಗುಣವಾಗಿ ಪೂರ್ಣ ಭೋಜನವನ್ನು ಮಾಡುತ್ತಿದ್ದ ಮಹಿಳೆ. ಆದರಿಂದಲೋ ಏನೋ ಆ ಸಮಯದಿಂದ ತೆಳು ಮೈಕಟ್ಟಿದ್ದ ಈ ವ್ಯಕ್ತಿಗೆ ನಿಧಾನವಾಗಿ ಮೈ ಬಂದು ಅವರನ್ನು ಚಿಂತೆಗೂ ಈಡು ಮಾಡಿಟ್ಟಿತ್ತು. ಇದರಿಂದಾಗಿ ಒಮ್ಮೊಮ್ಮೆ ಅವರು ತಮ್ಮ ಹೆಸರನ್ನೂ ಬದಲಾಯಿಸುವ ಯೋಚನೆಯನ್ನು ಮಾಡಿದ್ದರು. ಆದರೆ ಅವರ ವೈದ್ಯರು 'ಅದೆಲ್ಲಾ ಬೇಕಿಲ್ಲ. ಸ್ವಲ್ಪ ಡಯಟ್ ಮಾಡಿ' ಎಂದು ಸಲಹೆ ಕೊಟ್ಟಿದ್ದು ಅನ್ನಪೂರ್ಣಮ್ಮನವರು ಆ ಸಲಹೆಯನ್ನು ಪೂರಾ ಸ್ವೀಕರಿಸಿದ್ದರು. ಅಂದರೆ ಹಸಿವಿನ ಜೊತೆ ಬದುಕಲೂ ಕಲಿತಿದ್ದರು. ಬಹಳ ಕಷ್ಟವಾದಾಗ ಮಧ್ಯ ರಾತ್ರಿ ಅಡಿಗೆ ಮನೆಗೆ ಬಂದು ಅಲ್ಪ ಸ್ವಲ್ಪ ಏನಾದರೂ ತಿಂದು ವಾಪಸ್ಸು ಬಂದು ಮಲಗುತ್ತಿದ್ದರು. ಈ ರಾತ್ರಿಯೂ ಅವರು ಅದೇ ಸ್ಥಿತಿಯಲ್ಲಿದ್ದರು. ಎಲ್ಲರೂ ಚೆನ್ನಾಗಿ ತಿನ್ನುತ್ತಿದ್ದನ್ನು ನೋಡಿದಾಗ ಅವರ ಹಸಿವು ಇನ್ನೂ ಜಾಸ್ತಿಯಾಗಿತ್ತು. ಬಹಳ ಹೇಳಿಸಿಕೊಂಡ ಮೇಲೆ ಸ್ವಲ್ಪ ಜೂಸು ಕುಡಿದಿದ್ದರು. ಆದರೆ ಅದು ಸಾಕಾಗಿರಲಿಲ್ಲ.

ಅವರು ಕೆಳಗಿನ ಅಡಿಗೆ ಮನೆಯ ಒಳಗೆ ಬಂದ ತಕ್ಷಣ ಕೇಳಿಸಿದ್ದು ನೀವು ಯಾರು – ಎಂಬ ಒಂದು ಪ್ರಶ್ನೆ. . ಅಮಿತಾಬ್ ಬಚ್ಚನ್ ಧ್ವನಿ ಇದ್ದಿತು. ಒಂದು ಕ್ಷಣ ಆ ಮಹಾನಟನೇ ಇರಬಹುದೇನೋ ಎನ್ನಿಸಿದರೂ ಅವನೆ ಆಗಿದ್ದರೆ ಆ ಪ್ರಶ್ನೆ ಹಿಂದಿಯಲ್ಲಿ ಇರುತ್ತಿತ್ತಲ್ಲವೆ ಎಂದುಕೊಂಡರು. ಆದರೂ ಈ ಧ್ವನಿ ಕೇಳಿಸಿದಾಗ ಅನ್ನಪೂರ್ಣಮ್ಮನವರಿಗೆ ಯೋಚನೆ ಶುರುವಾಯಿತು. ರಾತ್ರೋ ರಾತ್ರಿ ! ಅಪರಿಚಿತರ ಮನೆ! ಅದೂ ಅಡಿಗೆ ಮನೆ! ಯಾರಾದರೂ ಕೇಳಿದರೆ ನಾಚಬೇಕೋ ಹೆದರಬೇಕೋ ಗೊತಿತಿಲ್ಲ. ಈ ಪ್ರಶ್ನೆ ಕೇಳುತ್ತಿರುವವರು ಯಾರು? ಈ ಕತ್ತಲಲ್ಲೂ ನಾನು ಇರುವುದು ಅವರಿಗೆ ಗೊತ್ತಾಗಿದೆಯಲ್ಲ, ಮನೆಯ ಕಾವಲುಗಾರನಿರಬಹುದು. ಹೇಳಿ ಬಿಡುವುದು ಒಳ್ಳೆಯದು .

ನಾನು ಅನ್ನಪೂರ್ಣ! ಲಕ್ಷ್ಮಿ ಮೇಡಮ್ ಸ್ನೇಹಿತೆ

ಉತ್ತರ ಕೊಡುತ್ತಿದ್ದ ಹಾಗೆಯೇ ಅವರ ಮೆದುಳು ಹೆಚ್ಚು ಕೆಲಸ ಮಾಡಲು ಶುರುಮಾಡಿತು. ಈ ಪ್ರಶ್ನೆ ಕೇಳುತ್ತಿರುವವರು ಯಾರು ? ಕಳ್ಳನೇಕಿರಬಾರದು. ಇದೋ ಶ್ರೀಮಂತರ ಮನೆ . ಇಲ್ಲಿರುವ ಆಸ್ತಿಯ ಬಗ್ಗೆ ಗೊತ್ತಿರಬೇಕು. ದೋಚಲೇ ಬಂದಿದ್ದಾನೆ. ಹಾಗಿದ್ದಲ್ಲಿ ನನ್ನನ್ನು ಕೊಲ್ಲಲೂ ಯೋಚಿಸುವುದಿಲ್ಲ. ಅನ್ನಪೂರ್ಣಮ್ಮನವರ ಕಣ್ಣುಗಳ ಮುಂದೆ ನಾಳೆಯ ಪತ್ರಿಕೆಯ ಮುಖಪುಟ ಕಾಣಿಸಿಕೊಂಡಿತು. ದೊಡ್ಡ ದೊಡ್ಡ ಅಕ್ಷರಗಳಲ್ಲಿ! ರಾತ್ರೋ ರಾತ್ರಿ ಗೃಹಿಣಿಯ ಕೊಲೆ ! ತಲೆ ಮತ್ತು ದೇಹ ಬೇರೆ ಬೇರೆಯಾಗಿತ್ತು. ಈ ಲಕ್ಷ್ಮಿ ಮನೇಗೆ ಬರಲೇ ಬಾರದಿತ್ತು ಎಂದುಕೊಂಡರು. ಹಾಗೂ ಧೈರ್ಯ ಮಾಡಿ ಅನ್ನಪೂರ್ಣಮ್ಮ ತಮ್ಮದೇ ಪ್ರಶ್ನೆಯನ್ನು ಕೇಳಿದರು

'ನೀವು ಯಾರು? ತಟಕ್ಕನೆ ಉತ್ತರ ಬಂದಿತು. ನೀವು ಯಾರು?

ಓ ಹೆಚ್ಚು ಪರಿಚಯ ಬೇಕೆ? 'ಸರಿ ನನ್ನ ಪತಿಯ ಹೆಸರು ಪದ್ಮನಾಭ್'

ಅವರ ಈ ದನಿಯನ್ನು ಕೇಳಿದ್ದರೆ ಪದ್ಮನಾಭ್ ಅದನ್ನು ಗುರುತಿಸುತ್ತಿರಲಿಲ್ಲ. ಏಕೆಂದರೆ ತಮ್ಮ ಪತ್ನಿ ಯಾವತ್ತೂ ಆ ದನಿಯನ್ನು ಬಳಸಿಯೇ ಇರಲಿಲ್ಲ. ಹುಟ್ಟಿದಾಗಿನಿಂದ ಜೋರಾಗಿಯೇ ಮಾತನಾಡುವುದು ಅವರ ಅಭ್ಯಾಸವಾಗಿತ್ತು. ಅವರ ಪತಿಯೇನು, ಸ್ವತ: ಅನ್ನಪೂರ್ಣಮ್ಮನವರೇ ತಮ್ಮ ದನಿಯನ್ನು ಗುರುತಿಸಲಿಲ್ಲ.

ಮತ್ತೆ ಪ್ರಶ್ನೆ ಬಂದಿತು – ನೀವು ಯಾರು ?

ಮತ್ತೂ ಪರಿಚಯ ಬೇಕೋ ಏನೋ?

ಅವರ ಕೆಲಸ ಕೇಳ್ತಾ ಇದೀರ ?? ಇಂಜನಿಯರು. ಕರ್ನಾಟಕ ಎಲ್ಲ ತಿರುಗಾಡಿದೀವಿ . ಈಗ ಜೆ.ಪಿನಗರದಲ್ಲಿ ಇದ್ದೀವಿ. ಮಕ್ಕಳು ಎಷ್ಟು ಎಂದು ಕೇಳಿದಿರಾ? ಇಬ್ಬರು. ಇಬ್ಬರೂ ಅಮೆರಿಕದಲ್ಲಿ.

ಮತ್ತೆ ನೀವು ಯಾರು ? ಅದೇ ಅಮಿತಾಬ್ ಬಚ್ಚನ್ ಧ್ವನಿ.

ಅನ್ನಪೂರ್ಣಮ್ಮನವರಿಗೆ ಕೋಪ ಬರುತ್ತಿತ್ತು. ಎಷ್ಟು ಉತ್ತರ ಹೇಳೋದು ? ಇನ್ನೇನು ಬೇಕಂತೆ ಇವರಿಗೆ? ಮೊಬೈಲ್ ನಂಬರ್ ಬೇಕಾ? ಆಧಾರ ಸಂಖ್ಯೆ ಬೇಕಾ?

ಇನ್ನೇನು ಉತ್ತರ ಕೊಡಲಿ ಎಂದು ಅನ್ನಪೂರ್ಣಮ್ಮ ಸ್ವಲ್ಪ ಜೋರಾಗಿಯೇ ಕೇಳಿದರು

'ಸ್ವಲ್ಪ ಕಡಲೆ ಬೀಜ ಕೊಡಿ'

ಇಷ್ಟು ಹೊತ್ತಿಗೆ ಅವರಿಗೆ ದೀಪದ ಸ್ವಿಚ್ ಕಾಣಿಸಿ ದೀಪ ಹಾಕಿದರು. ಅವರಿಗೆ ಕಾಣಿಸಿದ್ದು ಅಲ್ಲಿಯೇ ಪಂಜರದೊಳಗಿದ್ದ ಒಂದು ಗಿಣಿ. ಹೋಗಿ ಹೋಗಿ ಗಿಣಿಯ ಜೊತೆ ಸಂವಾದ ನಡೆಸಿತಿದ್ದೀನಲ್ಲ, ಈ ಶ್ರೀಮಂತರ ಖಯಾಲಿಗಳೆ ಹೀಗೆ ಎಂದುಕೊಂಡು. ಅನ್ನಪೂರ್ಣಮ್ಮ ಕೋಪದಿಂದ ಪಂಜರದತ್ತ ಹೋಗಿ ಹೊಡೆಯಲು ಕೈ ಎತ್ತಿದರು. ಮತ್ತೆ ಪ್ರಶ್ನೆ ಕೇಳಿಸಿತು. ನೀವು ಯಾರು?

(ಪಿ.ಜಿ.ವುಡ್ ಹೌಸರ ಕಾದಂಬರಿಯೊಂದರಲ್ಲಿನ ಸನ್ನಿವೇಶ)

# ನಗುತ್ತಾ, ನಗಿಸುತ್ತಾ ಬಾಳಿದ ಡಾ. ಪ್ರಭುಶಂಕರ

**ಪ್ರೊ.ಎಂ. ಕೃಷ್ಣೇಗೌಡ**

**ಹುಸಿನಗುತ ಬಂದೇವ**
**ನಸುನಗುತ ಬಾಳೋಣ**
**ತುಸು ನಗುತ ತೆರಳೋಣ**

**ಬಡ ನೂರು ವರುಷಾನ**
**ಹರುಷಾದಿ ಕಳೆಯೋಣ**
**ಯಾಕಾರೆ ಕೆರಳೋಣ**

ಹಾಗೆಂದು ಹಾಡಿದವರು ವರಕವಿ ಬೇಂದ್ರೆ. ಹಾಗೇ ಬದುಕಿದವರು ನನ್ನ ಗುರುಗಳು ಡಾ. ಪ್ರಭುಶಂಕರ.

''ಕೃಷ್ಣೇಗೌಡ್ರೆ, ನನ್ನ ಇದುವರೆಗಿನ ಬದುಕನ್ನ ಬಹಳ ಆನಂದವಾಗಿ ಕಳೆದು ಬಿಟ್ಟಿದ್ದೀನಪ್ಪ. ಅತ್ಯಂತ ಸಂತೋಷವಾಗಿ ಬದುಕಿದವನು ನಾನು. ಈ ಸಂತೋಷಕ್ಕೆ ಏನು ಕಾರಣ ಗೊತ್ತಾ?''

ಅಂತ ಒಂದು ಸಣ್ಣ ವಿರಾಮ ಕೊಟ್ಟರು. ''ಹೇಳಿ ಸಾರ್'' ಅಂದೆ ನಾನು. ಅವರು ತಮ್ಮ ಎರಡೂ ತೋಳುಗಳನ್ನ ಮೇಲಕ್ಕೆ ಚಾಚಿ ದೊಡ್ಡ ದನಿಯಲ್ಲಿ ''ನನ್ನ ಸಂತೋಷದ ಬದುಕಿಗೆ ಏನು ಕಾರಣ ಅಂದರೆ, ನನ್ ಹತ್ರ ಯಾವಾಗಲೂ ದುಡ್ಡೇ ಇರತಾ ಇರಲಿಲ್ಲ!''

ಹಾಗಂತ ಅಂತಲೇ ಜೋರಾಗಿ ನಗುತ್ತಿದ್ದರು. ಅವರನ್ನು ಚೆನ್ನಾಗಿ ಬಲ್ಲವನಾಗಿದ್ದ ನನಗೆ ಅವರು ಸುಳ್ಳುಸುಳ್ಳೇ ಹಾಗನ್ನುತ್ತಿದ್ದಾರೆಂದುಕೊಳ್ಳುವುದು ಸಾಧ್ಯವಿರಲಿಲ್ಲ, ನಾನು ಬೆರಗಾದವನಂತೆ ಅವರನ್ನೇ, ಅವರ ಸ್ವಚ್ಛ ನಗೆಯನ್ನೇ ಕಣ್ಣರಳಿಸಿ ನೋಡುತ್ತಿದ್ದೆ. ಯಾಕೆಂದರೆ ನಾನು ಆವರೆಗೆ ಅಂಥದೊಂದು ಮಾತನ್ನು ಯಾರಿಂದಲೂ ಕೇಳಿಯೇ ಇರಲಿಲ್ಲ. ''ಮನುಷ್ಯ ಕೈ ನಡಿಯೂವಾಗ ಒಂದಿಷ್ಟು ದುಡ್ಡು ದುಡಿದಿಟ್ಟಿದ್ದರೆ ಒಳ್ಳೆಯದು. ಅಪತ್ಕಾಲದಲ್ಲಿ ಅದೇ ಆಗೋದು. ಯಾರ್‍ಯಾರ ಮುಂದೆಯೋ ಕೈ ಚಾಚಿಕೊಂಡು ಬದುಕೋದು ಭಾರೀ ಕಷ್ಟ. ಏನೋ ಒಳ್ಳೆ ಕೆಲಸ, ಕೈ ತುಂಬಾ ಸಂಬಳ ಇದ್ದದ್ದರಿಂದ ನಾನೂ ಒಂದಿಷ್ಟು ನೆಮ್ಮದಿಯಾಗಿದ್ದೆ...'' ಈ ಬಗೆಯ ಮಾತುಗಳನ್ನು ತುಂಬಾ ಕೇಳಿದ್ದೀನಿ ನಾನು. ನೀವೂ ಕೇಳಿರುತ್ತೀರಿ. ಆದರೆ ನನ್ನ ಹತ್ರ ಯಾವಾಗಲೂ ದುಡ್ಡೇ ಇರತಾ ಇರಲಿಲ್ಲ ಅಂತ ಅಷ್ಟು ನಿಸ್ಸಂಕೋಚವಾಗಿ, ಅಷ್ಟು ದೊಡ್ಡ ದನಿಯಲ್ಲಿ, ಅಷ್ಟು ನಗುವಿನ ಜೊತೆಯಲ್ಲಿ ಹೇಳಿದವರನ್ನು ನಾನಂತೂ ಕೇಳಿರಲಿಲ್ಲ, ನಾನು ಮೇಷ್ಟ್ರನ್ನ ಕೇಳಿದೆ,

''ಅಲ್ಲಾ ಸಾರ್, ದುಡ್ಡಿಲ್ಲದೇ ಬದುಕೋದು ಕಷ್ಟ ಅಲ್ವಾ ಸಾರ್, ನೀವು ಸಂಸಾರ, ಮನೆ, ಮಕ್ಕಳು ಅಂತ ಇದ್ದೋರು. ಇದ್ದಕ್ಕಿದ್ದಂತೆ ಯಾತಕ್ಕೋ ದುಡ್ಡು ಬೇಕಾದರೆ ಏನು ಮಾಡುತಿದ್ರೀ ಸಾರ್?''

ಮೇಷ್ಟ್ರು ಥಟ್ಟನೆ ಉತ್ತರಿಸಿದರು – ''ಸಾಲ!''

ನಾನು ಕೇಳಿದೆ –

''ಇದೇನ್ ಸಾರ್ ಹೀಗೆ ಹೇಳುತೀರಿ!? ಆಗಾಗ ಸಾಲ ಕೇಳೋದಕ್ಕೆ ಯಾರಿಗಾದರೂ ನಾಚಿಕೆ, ಸಂಕೋಚ ಅಂತ ಆಗಲ್ವಾ ಸಾರ್?''

ಮೇಷ್ಟ್ರ ಮುಖದ ಮೇಲಿನ ''ನಗೀನವಿಲು'' ಮತ್ತಷ್ಟು ರೆಕ್ಕೆ ಬಿಚ್ಚಿಕೊಂಡಿತು. ನಗುನಗುತ್ತಲೇ ಮೇಷ್ಟು ಹೇಳಿದರು–

''ಅಲ್ಲಪಾ, ನಾಚಿಕೆ, ಸಂಕೋಚ ಅದೆಲ್ಲಾ ಯಾಕೆ ಆಗಬೇಕು? ನಮ್ಮ ದೇಶದಲ್ಲಿ ಜನಗಳಿಗೆ ಲಂಚ ಕೇಳೋಕೆ ನಾಚಿಕೆ, ಸಂಕೋಚ ಏನೂ ಆಗಲ್ಲ, ಇನ್ನು ನಮಗೆ ಸಾಲ ಕೇಳೋಕೆ ಅದೆಲ್ಲ ಯಾಕಾಗಬೇಕು? ನನ್ನ ಹತ್ರ ದುಡ್ಡಿಲ್ಲ ಅನ್ನೋದಕ್ಕೆ ಯಾರಿಗಾದ್ರೂ ನಾಚಿಕೆ ಯಾಕಾಗಬೇಕು ಅಂತೀನಿ..''

ಹಾಗಂದು ಮೇಷ್ಟ್ರು ನನ್ನ ಮತ್ತೊಂದು ಮಾತಿಗೆ ಅವಕಾಶವನ್ನೇ ಕೊಡದೆ ಮುಂದುವರಿದರು ''ಅಷ್ಟೇ ಅಲ್ಲಪ್ಪ, ನಾನು ಸಾಲ ಮಾಡುವುದರಲ್ಲಿ ಅದೆಂಥಾ ಪ್ರತಿಭಾವಂತ, ಅನುಭವಿ ಅಂದರೇ.. ಬ್ಯಾಂಕಿಗೆ ಹೋಗಿ ಮ್ಯಾನೇಜರ್ ಮುಂದೆ ಸಾಲಕ್ಕೆ ಅಂತ ನಾನು ಕೂತರೆ ನನ್ನ ಮುಖ ಭಾವವನ್ನು ನೋಡಿಯೇ ಅವರು ''ಆಹಾ, ಈತ ಅತ್ಯಂತ ಪ್ರಾಮಾಣಿಕ, ನಿಯತ್ತಿನ ಮನುಷ್ಯ'' ಅಂತ ತಿಳ್ಕೊಂಬಿಡಬೇಕು ಹಾಗೆ ಕೂತ್ಕೋತಾ ಇದ್ದೆ. ನನ್ನ ದನಿಯನ್ನು ಕೂಡಾ ಎಷ್ಟು ಅಗತ್ಯವಿದೆಯೋ ಅಷ್ಟು ತಗ್ಗಿಸಿ, ನನ್ನ ಮುಖದ ಮೇಲೆ ಎಷ್ಟು ದೈನ್ಯಭಾವವಿರಬೇಕೋ ಅಷ್ಟನ್ನೂ ಇಟ್ಟುಕೊಂಡು ಸಾಲ ಕೇಳುತ್ತಿದ್ದೆ. ಅವರೂ ಸಾಲ ಕೊಟ್ಟು ಬಿಡೋರು. ಆ ಮೇಲೆ ಕೊಟ್ಟ ಸಾಲವನ್ನು ನಾನು ತುಂಬಾ ನಿಯತ್ತಿನಿಂದ ಕಂತುಕಂತಾಗಿ ತಿಂಗಳು ತಿಂಗಳು ತೀರಿಸಿಬಿಡ್ತಾ ಇದ್ದೆ. ನಾನು ಅಷ್ಟು ಪ್ರಾಮಾಣಿಕ ಅಂತ ಅಲ್ಲ, ಮುಂದೆ ಮತ್ತೆ ಸಾಲ ಮಾಡಬೇಕಾಗುತ್ತಲ್ಲ!! ಹಾಗೆಂದು ಹೇಳಿ ಮತ್ತೆ ''ಕಹಳೆಯ ಪಾಂಗಿನವೋಲ್'' ಕಹಕಹಕಹ ನಕ್ಕರು.

ಪ್ರಭುಶಂಕರ್ ಕನ್ನಡದ ದೊಡ್ಡ ವಿದ್ವಾಂಸರು. ಒಳ್ಳೆಯ ಮೇಷ್ಟರು, ಲೇಖಕರು, ವಾಗ್ಮಿ, ನಗೆಗಾರರು ಎಲ್ಲಕ್ಕಿಂತ ಮಿಗಿಲಾಗಿ ಅಪರೂಪದ ಸ್ವಚ್ಛ ಶೀಲ ವ್ಯಕ್ತಿ, ಇಲ್ಲಿ ಶೀಲ ಎಂಬುದು ಅವರ ಮಾತು, ವಿದ್ವತ್ತು, ಬದುಕು, ನಡೆವಳಿಕೆ, ನಗೆ ಎಲ್ಲಕ್ಕೂ ಅನ್ವಯವಾಗುವಂಥದು, ಅವರಿಗೆ ಕುವೆಂಪು ಅವರನ್ನು ಮೊದಲ್ಗೊಂಡು ಕನ್ನಡದ ಹಲವಾರು ಹಿರಿಯ ಕವಿ ಸಾಹಿತಿಗಳೊಂದಿಗೆ ಅತ್ಯಾಪ್ತ ಸಂಬಂಧವಿತ್ತು, ಕುವೆಂಪು ಅವರ 'ಮಾನಸಪುತ್ರ' ರೆಂದೇ ಮೈಸೂರಿನ ಸಾಹಿತ್ಯ ವಲಯ ಅವರನ್ನು ಗುರುತಿಸುತ್ತಿತ್ತು. ಜೊತೆಗೆ ಅವರ ವ್ಯಕ್ತಿತ್ವದ ಮತ್ತೊಂದು ನೆಲೆ ಅಂದರೆ ಶ್ರೀ ರಾಮಕೃಷ್ಣ ಆಶ್ರಮ. ಅವರ ಹರೆಯದಲ್ಲಿ ಆರಂಭವಾದ ಆಶ್ರಮದ ಸಂಬಂಧ ಅವರ ಸಾವಿನತನಕವೂ ಅತ್ಯಂತ ಗಾಢವಾಗಿತ್ತು.

ಪ್ರಭುಶಂಕರ್ ಅವರ ವ್ಯಕ್ತಿತ್ವಕ್ಕೆ ಹಾಸ್ಯವೇ ಸ್ಥಾಯಿ, ಅವರಿಗೆ ಎಲ್ಲವನ್ನೂ, ಎಲ್ಲರನ್ನೂ ನಗೆಗಣ್ಣಿನಿಂದಲೇ ನೋಡುವುದು ಸಾಧ್ಯವಿತ್ತು. ಯಾರನ್ನಾದರೂ ಛೇಡಿಸುವುದೆಂದರೆ ಅವರಿಗೆ ಎಲ್ಲಿಲ್ಲದ ಉತ್ಸಾಹ. ಹೀಗೆ ಅವರ ಛೇಡಿಕೆ, ಚುಡಾಯಿಸುವಿಕೆಗೆ ಗುರಿಯಾದವರು ಕೇವಲ ಸಮವಯಸ್ಕರು, ಸಣ್ಣಪುಟ್ಟವರಲ್ಲ, ಕುವೆಂಪು, ಪುತಿನ, ಮೂರ್ತಿರಾಯರು, ಗೊರೂರರಂಥ ಹಿರಿಯರನ್ನೂ ಅವರು ಬಿಟ್ಟಿಲ್ಲ. ರಾಮಕೃಷ್ಣ ಆಶ್ರಮದ ಸ್ವಾಮಿಗಳನ್ನಂತೂ ಅವರಷ್ಟು ಛೇಡಿಸಿ ಗೋಳುಹುಯ್ದುಕೊಂಡವರು ಬಹುಶಃ ಯಾರೂ ಇಲ್ಲ. ಅವರಿಂದ ಅಂತಂಥವರೊಂದಿಗೆಲ್ಲಾ ಅಷ್ಟೊಂದು ಸಲಿಗೆ ಸಾಧ್ಯವಾದುದು ಅವರಿಗಿದ್ದ

ಶುದ್ಧಾಂತಃಕರಣದಿಂದ ಮಾತ್ರ. ಈ ಲೇಖನಕ್ಕೆ, ಈ ಪತ್ರಿಕೆಗೆ ಅವರ ಹಾಸ್ಯದ ಮುಖವನ್ನಷ್ಟೇ ಒಂದಿಷ್ಟು ಪರಿಚಯಿಸಿ ಕೈಬಿಡುತ್ತೇನೆ.

ಕುವೆಂಪು ಅವರದು ಶ್ರೀಮದ್ಗಾಂಭೀರ್ಯದ ಸ್ವಭಾವ. ಅವರ ಬರವಣಿಗೆಯಲ್ಲಿ ಬೇಕಾದಷ್ಟು ಹಾಸ್ಯವಿದೆಯಾದರೂ ಅವರೊಂದಿಗೆ ನಗೆಯಾಡುತ್ತಾ ಹರಟುವುದು ಬಹುಶಃ ಯಾರಿಗೂ ಸಾಧ್ಯವಿರಲಿಲ್ಲವೇನೋ. ಆದರೆ ಪ್ರಭುಶಂಕರ್ ಅವರಿಗೆ ಮಾತ್ರ ಕುವೆಂಪು ಅವರೊಂದಿಗೆ ಅಂಥದೊಂದು ಸಲಿಗೆಯಿತ್ತು. ಒಂದು ಸಲ ಪ್ರಭುಶಂಕರ್ ಅವರು ಕುವೆಂಪು ಅವರ ಎದುರಿಗೇ ಹೇಳಿದರಂತೆ–

''ನಿಮಗೆ ಜ್ಞಾನಪೀಠ ಪ್ರಶಸ್ತಿ ಬಂದಾಗ ಈ ಪ್ರಶಸ್ತಿಯು ಸಲ್ಲಬೇಕಾದುದು ನನಗಲ್ಲ ಸರ್ವಭಾಷಾಮಯಿಯಾದ ಸರಸ್ವತಿಗೆ ಅಂತ ಹೇಳಿ ಆ ಪ್ರಶಸ್ತಿ ಫಲಕ, ಸ್ಮರಣಿಕೆ, ಮತ್ತಿತರ ಸಕಲ ಸನ್ಮಾನ ವಸ್ತುಗಳನ್ನೂ ಸರಸ್ವತಿಯ ಪದತಲದಲ್ಲಿಟ್ಟು ದೀರ್ಘದಂಡ ನಮಸ್ಕಾರ ಮಾಡಿದಿರಿ.''

ಕುವೆಂಪು – ''ಹೌದು, ಹೌದು, ಅದು ಸಲ್ಲಬೇಕಾದ್ದು ಸರ್ವಭಾಷಾಮಯಿಯಾದ ಸರಸ್ವತಿಗೇನೇ''

ಪ್ರಭುಶಂಕರ್– ''ಅದು ಸರಿ, ಆದರೆ ಅದನ್ನೆಲ್ಲಾ ಸರಸ್ವತಿಗೆ ಕೊಟ್ಟು ದುಡ್ಡನ್ನ ಮಾತ್ರ ಬ್ಯಾಂಕಿಗೆ ಹಾಕ್ಕೊಂಡ್ರಲ್ಲ, ಅದು ಸರಿಯೋ?'' ಪ್ರಭುಶಂಕರ್ ಅವರು ಹೀಗೆ ಕಾಲೆಳೆದರೆ ಕುವೆಂಪು ಅವರು ಹೊಟ್ಟೆ ಹಿಡಿದುಕೊಂಡು ನಕ್ಕರಂತೆ. ಅಷ್ಟು ಮಾತ್ರವಲ್ಲದೆ ಮನೆಗೆ ನೆಂಟರಿಷ್ಟರು ಬಂದಾಗ ''ಪ್ರಭುಶಂಕರ್, ಇವರಿಗೆಲ್ಲಾ ಆ ಜ್ಞಾನಪೀಠದ ತಮಾಷೆ ಹೇಳಿ'' ಅಂತ ಮತ್ತೆ ಮತ್ತೆ ಹೇಳಿಸಿ ಮತ್ತೆ ಮತ್ತೆ ನಗುತ್ತಿದ್ದರಂತೆ.

ಅದು ಎ.ಎನ್. ಮೂರ್ತಿರಾಯರ ತೊಂಬತ್ತೇಳನೆಯದೋ, ಎಂಟನೆಯದೋ ಹುಟ್ಟು ಹಬ್ಬ, ಅದಕ್ಕಾಗಿ ಒಂದು ಪುಟ್ಟ ಸಮಾರಂಭ, ಪ್ರಭುಶಂಕರ್ ಆ ಸಂದರ್ಭದಲ್ಲಿ ಮಾತಾಡುತ್ತಾ

''ನೋಡಿ ನಮ್ಮ ಕನ್ನಡದ ಎಷ್ಟೋ ಕವಿ ಸಾಹಿತಿಗಳು ಯಾವಾಗ ಹುಟ್ಟಿದರು, ಯಾವಾಗ ಸತ್ತರು ಅನ್ನೋದೇ ಗೊತ್ತಿರೋಲ್ಲ. ಆದ್ದರಿಂದ ನಮ್ಮ ಎಷ್ಟೋ ಜನ ಸಂಶೋಧಕರಿಗೆ ಅದೇ ಕೆಲಸ ಯಾರು ಯಾವಾಗ ಹುಟ್ಟಿದರು? ಯಾವಾಗ ಸತ್ತರು ಅಂತ ಸಂಶೋಧನೆ ಮಾಡೋದು. ಆದರೆ ನಮ್ಮ ಮೂರ್ತಿರಾಯರು ಹುಟ್ಟಿದ ವರ್ಷ ಯಾರಿಗೂ ಮರೆಯಲ್ಲ, ಯಾಕೆ ಅಂದರೆ, ಅವರು ಹುಟ್ಟಿದ್ದು 1900 ರಲ್ಲಿ ಆದ್ದರಿಂದ ನಮ್ಮ ಸಂಶೋಧಕರಿಗೆ ನೆನಪಿಟ್ಟುಕೊಳ್ಳುವುದು ಸುಲಭ. ಅವರು ಸುಲಭವಾಗಿ ನೆನಪಿಟ್ಟುಕೊಳ್ಳುವ ದೃಷ್ಟಿಯಿಂದ ಮೂರ್ತಿರಾಯರು 2000ನೇ ಇಸವಿಗೆ ''ಮನಸ್ಸು ಮಾಡಬೇಕು'' ಅಂದರಂತೆ. ಮೂರ್ತಿರಾಯರೂ ವಿನೋದಪ್ರಿಯರೇ ಅವರು ಎದ್ದು ''ನಿಮ್ಮ ಸಂಶೋಧಕರು ಸಾಯಲಿ, ನಾನು ಮಾತ್ರ ಬದುಕುತ್ತೇನೆ'' ಅಂದರಂತೆ.

ಇನ್ನೊಂದು ಬಾರಿ ಎ.ಎಸ್. ಮೂರ್ತಿರಾಯರನ್ನ ಪ್ರಭುಶಂಕರ್ ಅವರೇ ಕಿಚಾಯಿಸಿದ್ದು ಹೀಗೆ.

''ನೋಡಿ ನಮ್ಮ ಮೂರ್ತಿರಾಯರಿಗೆ ಆಗಲೇ ನೂರೊಂದು ವರುಷ. ಆದರೂ ಈಗಲೂ ಆರು ಕಿಲೋಮೀಟರ್ ವಾಕಿಂಗ್ ಹೋಗ್ತಾರೆ. ಮನುಷ್ಯನಿಗೆ ಇಷ್ಟು ದುರಾಸೆ ಯಾಕಿರಬೇಕು ಹೇಳಿ'' ಅದಕ್ಕೆ ಮೂರ್ತಿರಾಯರು ಎಂಥಾ ತಮಾಷೆ ಉತ್ತರ ಕೊಟ್ಟರು ಗೊತ್ತೆ?

''ಈ ಪ್ರಭುಶಂಕರ್ ಬರೀ ಸುಳ್ಳು ಹೇಳ್ತಾರೆ. ಅವರ ಮಾತನ್ನು ನಂಬಬೇಡಿ, ಈ ವಯಸ್ಸಲ್ಲಿ ನನಗೆ ಆರು ಕಿಲೋಮೀಟರ್ ವಾಕಿಂಗ್ ಹೋಗೋಕೆ ಆಗುತ್ತ್ಯೇ? ನಾನು ಹೋಗೋದು ಮೂರೇ ಕಿಲೋಮೀಟರು. ವಾಪಸ್ ಬಂದುಬಿಡ್ತೀನಷ್ಟೆ!''

ಪ್ರಭುಶಂಕರ್ ಮತ್ತು ಪ್ರೊ.ಅ.ರಾ.ಮಿತ್ರ ಪರಮಾಪ್ತರು. ಮಿತ್ರ ಅವರು ಪ್ರಭುಶಂಕರ್ ಅವರ ವಿದ್ಯಾರ್ಥಿಯೂ ಹೌದು. ಅವರಿಬ್ಬರೂ ಸೇರಿಬಿಟ್ಟರೆ ಮುಗಿಯಿತು ಮನೆ ಚಾವಣಿ ಹಾರಿ ಹೋಗದಿದ್ದರೆ ಅದೇ ಪುಣ್ಯ. ಅಷ್ಟು ನಗುತ್ತಾರೆ, ನಗಿಸುತ್ತಾರೆ.

ಮಿತ್ರ ಅವರಿಗೆ ಯಾವುದೇ ಊಟದಲ್ಲೂ ಸ್ವಲ್ಪ ಉಪ್ಪು ಮುಂದಾಗಿರಬೇಕು. ಆದ್ದರಿಂದ ಮಿತ್ರ ಅವರಿಗೆ ಯಾವುದೇ ಸಾರು, ಹುಳಿ, ಮೊಸರು ಏನು ಬಡಿಸಿದರೂ ಅದಕ್ಕೆ ತಾವಿನ್ನೊಂದಿಷ್ಟು ಉಪ್ಪು ಹಾಕಿಕೊಳ್ಳುತ್ತಾರೆ. ಅದಕ್ಕೆ ಪ್ರಭುಶಂಕರ್ ಅವರು ಹಾರಿಸುವ ಜೋಕು – ''ಈ ಮಿತ್ರ ಎಲ್ಲದಕ್ಕೂ ಉಪ್ಪು ಹಾಕ್ಕೊಂಡೇ ತಿನ್ತಾನೆ. ಆಯ್ತು ತಿನ್ನಪ್ಪಾ ಅಂತ ಒಂದು ಬಟ್ಟಲು ಉಪ್ಪನ್ನೇ ಅವನ ಮುಂದೆ ಇಟ್ಟರೂ ಅದಕ್ಕೂ ಒಂದಿಷ್ಟು ಉಪ್ಪು ಹಾಕ್ಕೊಂಡೇ ತಿನ್ತಾನೆ.''

ಒಮ್ಮೆ ಪ್ರಭುಶಂಕರ್ ಯಾಕೋ ಸ್ನೇಹಿತರ ಮನೆಗೆ ಹೋಗಿದ್ದರಂತೆ ಅವರ ಮನೆ ವರಾಂಡದಲ್ಲಿ ಹತ್ತಾರು ಜೊತೆ ಚಪ್ಪಲಿಗಳಿದ್ದವಂತೆ. ವಾಸ್ತವವಾಗಿ ಅವೆಲ್ಲವೂ ಆ ಮನೆಯ ಮಂದಿಯವೇ, ಆದರೆ ಪ್ರಭುಶಂಕರ್ ಹೇಳಿದ್ದೇ ಬೇರೆ ''ಅಲ್ಲಪ್ಪಾ, ಮನೆ ಹತ್ರ ರಾಘವೇಂದ್ರಸ್ವಾಮಿ ದೇವಸ್ಥಾನ ಆಗಿ ಇನ್ನೂ ಮೂರು ತಿಂಗಳಾಗಿಲ್ಲ, ಆಗಲೇ ನಿಮ್ಮ ಮನೇಲಿ ಇಷ್ಟೊಂದು ಜೊತೆ ಚಪ್ಪಲಿ ಸೇರಿಸಿಬಿಟ್ಟಿದ್ದೀರಲ್ಲಾ!?'

ಪ್ರಭುಶಂಕರ್ ಅವರ 'ಮಂದಹಾಸ ಮೀಮಾಂಸೆ, ಅನ್ನುವ ಒಂದು ಲಲಿತ ಪ್ರಬಂಧಗಳ ಸಂಕಲನವಿದೆ. ಅದರಲ್ಲಿ ಸ್ವಾಮಿ ವಿವೇಕಾನಂದರ ಒಂದು ಮಾತನ್ನು ಉದ್ಧರಿಸುತ್ತಾರೆ ಪ್ರಭುಶಂಕರ್.

''ಈ ಜಗತ್ತಿನಲ್ಲಿ ದುಃಖ ಇದೆ; ಬೇಕಾದಷ್ಟಿದೆ, ಅದು ನೀನು ಬರುವ ಮೊದಲೂ ಇತ್ತು, ನೀನು ಬಂದ ಮೇಲೂ ಇದೆ. ನೀನು ಬಂದದ್ದರಿಂದಲೂ ಇರಬಹುದು, ಆದರೆ ಅದನ್ನು ಹೆಚ್ಚು ಮಾಡುವ ಹಕ್ಕು ನಿನಗಿಲ್ಲ, ಸಾಧ್ಯವಾದರೆ ಕಡಿಮೆ ಮಾಡು''

ಈ ಮಾತನ್ನು ನೆತ್ತಿಯಲ್ಲಿ ಹೊತ್ತವರಂತೆ 89 ವರ್ಷ ಘನವಾಗಿ ಬಾಳಿದ ಡಾ. ಪ್ರಭುಶಂಕರ್ ನಮ್ಮೆದುರು ಒಂದು ಒಳ್ಳೆಯ ಬದುಕಿನ ಮಾದರಿಯನ್ನಿಟ್ಟು ಹೋಗಿದ್ದಾರೆ. ನನ್ನಂಥ ಎಷ್ಟೋ ಶಿಷ್ಯರ ಮನಸ್ಸಿನಲ್ಲಿ ಅವರು ಬಹುಕಾಲ ಇರುತ್ತಾರೆ.

## ಇಷ್ಟ ಕಷ್ಟ

ಮದುವೆಯಾದ ಹೊಸದರಲ್ಲಿ
ನನಗೆ ನೀನಿಷ್ಟ ನೀನಿಷ್ಟ
ಕೆಲವು ವರ್ಷಗಳ ನಂತರ
ನನಗೆ ನೀ ಕಷ್ಟ ನೀ ಕಷ್ಟ

# ಕಾಯಿಲೆಗಿಂತ ಕಷಾಯ ಕಹಿ

**– ನ. ರತ್ನ**

ನಾನು ಸಣ್ಣವನಿದ್ದಾಗ ಆಗಾಗ ಮಲಬದ್ಧತೆ ಆಗುತ್ತಿತ್ತು. ಎಪ್ಪತ್ತೈದು ವರ್ಷಗಳ ಹಿಂದೆ ನಾನಿದ್ದ ಎಡೆಯಲ್ಲಿ ಅದಕ್ಕೆ ದೊರಕುತ್ತಿದ್ದ ಪರಿಹಾರ ಒಂದೇ, ಹರಳೆಣ್ಣೆ ಕುಡಿಯುವುದು. ಅದೋ ಘನಘೋರ ಕಹಿ. ಆ ಕಹಿಗಿಂತ ಮಲಬದ್ಧತೆಯೇ ಸಹನೀಯ. ಹಾಗೆಯೇ, ಆಗ ನನ್ನ ಹುಡುಗುತನದಲ್ಲಿ ತರಚಿಕೊಳ್ಳುವುದೂ, ಗಾಯಗಳಾಗುವುದೂ ಸಾಮಾನ್ಯ. ಆ ಗಾಯಗಳ ಮೇಲೆ ಟಿಂಕ್ಚರ್ ಐಯೋಡೀನ್ ಸುರಿಯುತ್ತಿದ್ದರು. ಆಗುತ್ತಿದ್ದ ಉರಿಗಿಂತ ಗಾಯವೇ ವಾಸಿ ಅನ್ನಿಸುತ್ತಿತ್ತು.

**ಈಗ ಕಾಯಿಲೆಗಳ ಶುಶ್ರೂಷೆಗಳ ಕಷ್ಟ ರೂಪ ಬದಲಾಯಿಸಿದೆ.**

ಹಾಗೆಯೇ ನೆಗಡಿ, ಕೆಮ್ಮು ಮತ್ತಿತರ ಸಣ್ಣ ಪುಟ್ಟ ಕಾಯಿಲೆಗಳಿಗೆ ಅಜ್ಜಿ ಕೊಡುತ್ತಿದ್ದ ಕಷಾಯವೂ ಅತಿ ಕಹಿ!

ಈಗ ಕಾಯಿಲೆಗಳ ಶುಶ್ರೂಷೆಗಳ ಕಷ್ಟ ರೂಪ ಬದಲಾಯಿಸಿದೆ. ಅಷ್ಟೇ!

ಒಂದು ದಿನ ಕನ್ನಡಕ ಹಾಕಿಕೊಂಡು ಪೇಪರ್ ಓದಲು ಕೂತಾಗ ಇದ್ದಕ್ಕಿದ್ದಂತೆ ನನ್ನ ಕಣ್ಣು ಮಂಜುಮಂಜಾದವು. ಅದನ್ನು ನಾನು ಮಗಳಿಗೆ ಹೇಳಿದೆ. ಅವಳು ಅಳಿಯನಿಗೆ ತಿಳಿಸಿದಳು. ಅವರಿಬ್ಬರೂ ಬಹಳ ಬೇಗ ಗಾಬರಿಯಾಗುತ್ತಾರೆ. ಜೊತೆಗೆ ನಮ್ಮ ಮೇಲಿನ ಪ್ರೀತಿ ಮತ್ತು ತಮ್ಮ ಜವಾಬ್ದಾರಿಯ ಅರಿವು.

ನಮ್ಮ ಅಳಿಯ ತಕ್ಷಣ ಕಾರು ತೆಗೆದು ಸಮೀಪದಲ್ಲಿನ ದೊಡ್ಡ ಆಸ್ಪತ್ರೆಯ ತುರ್ತು ಚಿಕಿತ್ಸಾ ಘಟಕಕ್ಕೆ (ಎಮರ್ಜೆನ್ಸಿ) ಕರೆದುಕೊಂಡು ಹೋದರು. ಒಳ್ಳೆಯ ಆಸ್ಪತ್ರೆ.

ನಾವು ಹೋಗುತ್ತಿದ್ದಂತೆ ತಕ್ಷಣ ನರ್ಸ್ ಮತ್ತು ಇತರ ಸಹಾಯಕರು ಬಂದು, ನನ್ನನ್ನು ಒಂದು ಮೇಜಿನ ಮೇಲೆ ಕೂರಿಸಿ ನನ್ನ ರಕ್ತದ ಒತ್ತಡ ಮತ್ತು ಮೂತ್ರದಲ್ಲಿನ ಸಕ್ಕರೆ ಪರೀಕ್ಷೆ ಮಾಡಿದರು. ನಂತರ ಹೆಸರು, ವಯಸ್ಸು, ವಿಳಾಸ ಮತ್ತು ಇತರ ಮಾಹಿತಿಗಳನ್ನು ಪಡೆದರು.

ಅಷ್ಟರಲ್ಲಿ ಕಿರಿಯ ವೈದ್ಯರೊಬ್ಬರು ಬಂದು ನನ್ನ ತೊಂದರೆ ಏನು ಅಂತ ಕೇಳಿದರು. ನಾನು ಉತ್ತರಿಸುವ ಮುಂಚೆ ನಮ್ಮ ಅಳಿಯನೇ 'ಅವರಿಗೆ ಕಣ್ಣುಗಳು ಮಂಜು ಮಂಜಾಗಿದೆ' ಎಂದರು.

ಸರಿ, ವೈದ್ಯರು ಒಂದು ಟಾರ್ಚ್ ಹಿಡಿದು ನನ್ನ ಕಣ್ಣುಗಳ ತಪಾಸಣೆ ಮಾಡಿದರು. ಮತ್ತೊಬ್ಬ ವೈದ್ಯರು ಬಂದು ಮೆದುಳಿನಲ್ಲಿ ತೊಂದರೆ ಇರಬಹುದು ಎಂದರು. ಅವರು ನನ್ನ ಅಂಗಾಲುಗಳನ್ನು ಕೆರೆದರು. ಕೂರಿಸಿ ಮಂಡಿಯ ಮೇಲೆ, ಮೊಳ ಕೈ ಮೇಲೆ ಒಂದು ಸುತ್ತಿಗೆ (ಸಣ್ಣದೇ) ಯಿಂದ ಹೊಡೆದರು. ತನ್ನ ಬೆರಳತ್ತ ನೋಡಿ ಎಂದು ಆ ಬೆರಳನ್ನು ಆಕಡೆ, ಈಕಡೆ, ಮೇಲೆ ಕೆಳಗೆ ತೋರಿಸಿದರು. ನನ್ನ

ಕೈ ಚಾಚಿ ಹಿಡಿದು ಅಲ್ಲಿಂದ ನನ್ನ ಬೆರಳಿನಿಂದ ಮೂಗನ್ನು (ನನ್ನ) ಮುಟ್ಟು ಎಂದರು. ಈ ಮಧ್ಯೆ ಮತ್ತೊಬ್ಬ ಸಹಾಯಕ ಬಂದು, ನನ್ನ ಅಂಗಿ ಬಿಚ್ಚಿಸಿ ನನ್ನ ಹೃದಯ ಪರೀಕ್ಷೆ ಮಾಡಲು ಇ.ಸಿ.ಜಿ. ತೆಗೆದರು. ಮತ್ತೊಬ್ಬರು ನನ್ನ ಆಹಾರ ಪದ್ಧತಿ, ಮಲಮೂತ್ರ ವಿಸರ್ಜನೆ, ನಿದ್ದೆ, ಅಭ್ಯಾಸಗಳು ಎಲ್ಲ ವಿಷಯ ವಿಚಾರಿಸಿ ಬರೆದುಕೊಂಡರು.

ಒಬ್ಬ ಹಿರಿಯ ವೈದ್ಯರು ಬಂದು ವಿವರಗಳನ್ನೆಲ್ಲಾ ನೋಡಿ, ಅವರೂ ಎಲ್ಲ ಮತ್ತೆ ಪರೀಕ್ಷೆ ಮಾಡಿ, ಜೊತೆಗೆ ಕೈಕಾಲು ಮಡಚಿ, ಅದನ್ನು ಗಟ್ಟಿಯಾಗಿ ಹಿಡಿದು ಮತ್ತೆ ನೇರಮಾಡಲು ಹೇಳಿದರು. ಅವರ ಬೆರಳುಗಳನ್ನು ಗಟ್ಟಿಯಾಗಿ ಹಿಡಿಯಲು ಹೇಳಿ ತಮ್ಮ ಬೆರಳುಗಳನ್ನು ಎಳೆದು ಬಿಡಿಸಿಕೊಳ್ಳಲು ಪ್ರಯತ್ನಿಸಿದರು. ಒಂದು ಕ್ಷಣ ಯೋಚಿಸಿ, ಕಿರಿಯ ವೈದ್ಯರುಗಳೊಡನೆ ಸಮಾಲೋಚಿಸಿ, ನನ್ನನ್ನು ತಕ್ಷಣ ಐಸಿಯು ವಾರ್ಡ್‌ನಲ್ಲಿ ಸೇರಿಸಬೇಕೆಂದರು. "ನಾಳೆ ಒಂದು ಸಿ.ಟಿ. ಸ್ಕ್ಯಾನ್, ಎಂ.ಆರ್.ಐ ಮತ್ತು ಎಕೋಕಾರ್ಡಿಯೋ ಗ್ರಾಂ ಮಾಡಿಸಿ ಬಿಡೋಣ" ಈ ಟೆಸ್ಟ್‌ಗಳು ಯಾಕೆ ಎಂದು ಪೂರ್ತಿ ಅರ್ಥವಾಗದ ನಾವು ಗಾಭರಿಗೊಂಡೆವು. ವೈದ್ಯರು ದೇವರ ಸಮಾನವಲ್ಲವೆ! ಅವರಂದಂತೆ ಮಾಡಲು ಒಪ್ಪಿದೆವು. ನನ್ನ ಮಗಳು ನನ್ನ ನೊಂದಾವಣೆ ಜವಾಬ್ದಾರಿ ಹೊತ್ತಳು. ಅಳಿಯ ಮನೆಗೆ ಹೋಗಿ ನನಗೆ ಬೇಕಾಗಬಹುದಾದ ಬಟ್ಟೆ ಬರೆ, ಷೇವಿಂಗ್ ಕಿಟ್, ಸೋಪು ಬಾಚಣಿಗೆ ಇತ್ಯಾದಿ ತರಲು ಹೊರಟರು.

ಮಗಳು ಅತ್ತಿದ್ದಿಂತ್ತ ಓಡಾಡಿ, ನನ್ನನ್ನು ನೊಂದಾಯಿಸಿ, ಐಸಿಯು ತಲುಪಿಸಿದ್ದಂತೆ ಅಳಿಯನೂ ಹಿಂದಿರುಗಿ ಸಹಾಯ ಮಾಡಿದರು. ನರ್ಸ್‌ಗಳು 'ನಾವೆಲ್ಲ ನೋಡಿಕೊಳ್ಳುತ್ತೇವೆ. ನೀವು ಯಾರೂ ಇಲ್ಲಿರಬೇಕಿಲ್ಲ, ಕೂಡದು' ಎಂದು ಹೇಳಿ ಮಕ್ಕಳನ್ನು ಕಳುಹಿಸಿಬಿಟ್ಟರು.

ನಾನು ಹಾಸಿಗೆಯ ಬಳಿ ಹೋಗುತ್ತಿದ್ದಂತೆಯೇ ನನಗೊಂದು ಆಸ್ಪತ್ರೆಯದೇ ಷರಾಯಿ ಮತ್ತು ಷರ್ಟ್ ಹಾಕಿಕೊಳ್ಳಲು ಕೊಟ್ಟರು. ನಾನು ಬಟ್ಟೆ ಬದಲಾಯಿಸಿ ಮಲಗುತ್ತಿದ್ದಂತೆಯೇ, ಒಬ್ಬ ಸಿಬ್ಬಂದಿ ಮತ್ತೆ ನನ್ನ ಬಳಿ ಬಂದು ನನ್ನ ರಕ್ತದೊತ್ತಡವನ್ನು ಪರೀಕ್ಷಿಸಿದರು. ಒಬ್ಬ ತಂಗಿ ನನ್ನ ಕೈ ಹಿಡಿದು ಜಗ್ಗಿ, ಒಂದು ಪಟ್ಟಿಯನ್ನು ಗಟ್ಟಿಯಾಗಿ ಕಟ್ಟಿ, ಮುಷ್ಟಿ ಭದ್ರವಾಗಿ ಹಿಡಿಯಲು ಹೇಳಿ ಸೂಜಿಯಿಂದ ಚುಚ್ಚಿದರು. ಅವರು ನನ್ನ



ಧಮನಿಯಲ್ಲಿ ಚುಚ್ಚಲು ರಕ್ತನಾಳಕ್ಕಾಗಿ ಅತ್ತ ಇತ್ತ ಹುಡುಕಾಡಿ ಸೋತರು. ಪುನಃ ಸೂಜಿ ಹೊರ ತೆಗೆದು ಮತ್ತೊಂದೆಡೆ ಚುಚ್ಚಿ, ಕೈಯ ಮೇಲೆ ನಾಲ್ಕು ತಟ್ಟಿ, ತಡಕಾಡಿ ಕೊನೆಗೂ ಒಂದು ರಕ್ತನಾಳವನ್ನು ಕಂಡುಹಿಡಿದು ಚುಚ್ಚೇ ಬಿಟ್ಟರು. ನಂತರ ನನ್ನ ಕೈಯಲ್ಲಿ ಒಂದು ಪುಟ್ಟ ನಳಿಗೆ ಇಟ್ಟು, ಆ ನಳಿಕೆಯ ಮೂಲಕ ಅದ್ಯಾವುದೋ ಒಂದು ಔಷಧಿಯನ್ನು ಚುಚ್ಚಿ, ನಂತರ ಒಂದು ಬಾಟ್ಲ್ ಪಕ್ಕದಲ್ಲಿ ತೂಗುಹಾಕಿ, ಅದರಿಂದ ಹೊರಟು ಬಂದ ವೈರನ್ನು ಅವರು ಇಟ್ಟಿದ್ದ ನಳಿಕೆಯಲ್ಲಿ ತೂರಿದರು, ಅದು ಎಡಗೈ, ಇತ್ತ ಬಲಗೈಯಲ್ಲಿ ಮತ್ತೊಂದು ರಕ್ತದೊತ್ತಡಕ್ಕೆ ಬೇರೊಂದು ತೋಳುಪಟ್ಟಿಯನ್ನು ಕಟ್ಟಿ ಕೈಕಾಲುಗಳ ಮೇಲೆ ಅಲ್ಲಲ್ಲಿ ಸೇರುವ ಹಾಗೆ ಒಂದು ತಂತಿಯಂತಹುದನ್ನು ಸೇರಿಸಿ ಎಲ್ಲವನ್ನೂ ಒಂದು ಯಂತ್ರಕ್ಕೆ (ಮಾನೀಟರ್‌ಗೆ) ಸೇರಿಸಿ ಬಿಟ್ಟರು. ನಾನೋ ಎರಡೂ ಕೈಗಳನ್ನು ಕಟ್ಟುಹಾಕಿಸಿಕೊಂಡು ಅಂಗಾತನಾಗಿ ಮಲಗಿದೆ.

ಸ್ವಲ್ಪದರಲ್ಲೇ ಒಂದು ವೈದ್ಯರ ತಂಡ ಮತ್ತೆ ಬಂದು ಮತ್ತೆ ಅದೇ ಪ್ರಶ್ನೆಗಳನ್ನು ಕೇಳಿದರು.

"ಏನಾಯಿತು?"

"ಕಣ್ಣು ಮಂಜಾಯಿತು."

"ಯಾಕೆ?"

"ನನಗೇನು ಗೊತ್ತು?"

"ಪರವಾಗಿಲ್ಲ ನಾಳೆ ಸ್ಕ್ಯಾನ್ ಮತ್ತು ಎಂ.ಆರ್.ಐ. ಮಾಡಿದಾಗ ಗೊತ್ತಾಗುತ್ತೆ."

"ತಲೆ ಏನಾದರೂ ಸುತ್ತುತ್ತಿದೆಯೇ ಅಥವಾ ಬೀಳುವ ಹಾಗಾಗುತ್ತದೆಯೇ?"

"ಇಲ್ಲ."

"ಯಾವುದಕ್ಕೂ ನೋಡೋಣ." ಮತ್ತೆ ನನ್ನ ಅಂಗಾಲು ನೋಡಿ. ಮೊಣಕಾಲು ಮೇಲೆ ಹೊಡೆದು, ಕೈ ಚಾಚಿ ಮತ್ತೆ ಮೂಗು, ಹೀಗೆ ಪರೀಕ್ಷೆ ಮಾಡುತ್ತಾ ಪ್ರಶ್ನೆಗಳನ್ನು ಕೇಳುತ್ತಾ ಇದ್ದರು.

"ಸಕ್ಕರೆ ಖಾಯಿಲೆ ಇದೆಯಾ?"

"ಇದೆ. ಆದರೆ ಕ್ರಮವಾಗಿ ಔಷಧಿಯನ್ನು ತೆಗೆದುಕೊಳ್ಳುತ್ತಾ, ಊಟವನ್ನು ಸರಿಯಾಗಿ ಮಾಡುತ್ತಾ ಇರುವುದರಿಂದ ಹತೋಟಿಯಲ್ಲಿದೆ!" ಎಂದು ಹೆಮ್ಮೆಯಿಂದ ಹೇಳಿದೆ.

"ಬಿ.ಪಿ. ರಕ್ತದೊತ್ತಡ ಇದೆಯಾ?"

"ಇದೆ. ಅದನ್ನೂ ಹಲವು ವರ್ಷಗಳಿಂದ ಹತೋಟಿಯಲ್ಲಿಟ್ಟು ಕೊಂಡಿದ್ದೇನೆ."

"ಸಿಗರೇಟು ಸೇದುತ್ತೀರಾ?"

"ಸೇದುತ್ತಿದ್ದೆ. ಈಗ ಬಿಟ್ಟಿದ್ದೀನಿ."

"ಎಷ್ಟು ವರ್ಷಗಳಿಂದ"

"ಹತ್ತು ವರ್ಷದಿಂದ"

"ಕುಡೀತೀರಾ?"

"ಅಂದರೆ"

"ಅದೇ, ರಂ, ವಿಸ್ಕಿ, ಹೆಂಡ ಇತ್ಯಾದಿ"

"ಆಗ ಈಗ ಸ್ವಲ್ಪ ಕುಡೀತೀನಿ, ಹಾಲು ನಿತ್ಯ".

ಇನ್ನೂ ಪ್ರಶ್ನೆಗಳೂ, ಉತ್ತರಗಳೂ ನಡೆದುವು. ನಿದ್ದೆ, ಮಲಮೂತ್ರ ವಿಸರ್ಜನೆ, ಪಥ್ಯದ ಆಹಾರ, ದಿನಚರಿ ವ್ಯಾಯಾಮ ಹೀಗೆ!

ಕಡೆಗೆ ಹಾಳೆಯ ಮೇಲೆ ಏನೋ ಬರೆದು "ನಾಳೆ ದೊಡ್ಡ ಡಾಕ್ಟರ್ ಬರುತ್ತಾರೆ, ಅವರು ನೋಡಲಿ" ಅಂದರು.

ನನಗೆ ಸ್ವಲ್ಪ ಗಾಭರಿಯೇ ಆಯಿತು. ಮತ್ತೆ ಈ ಪ್ರಶ್ನೆಗಳಿಗೆ ಉತ್ತರಿಸಬೇಕೆ? ದೊಡ್ಡ ಡಾಕ್ಟರ್ ಬರುವವರೆಗೂ ಯಾಕೆ ಕಾಯಬೇಕು? ನನಗೇನಾದರೂ ಆಗಬಾರದ್ದು ಆಗಿದೆಯೇ? ಅಂತೆಲ್ಲಾ ಆತಂಕ. ಅವರು ಹೋದಮೇಲೆ ನಾನು ಸ್ವಲ್ಪ ತೂಕಡಿಸಿದೆ. ಸಂಜೆ ಏಳೂಕಾಲು ಘಂಟೆ ಸಿಬ್ಬಂದಿ ಗೆಳೆಯ ಊಟ ತಂದಿಟ್ಟ. ಆಸ್ಪತ್ರೆಗಳಲ್ಲಿ ಊಟ ಬೇಗನೆ ಮುಗಿಸಬೇಕಂತೆ. ನಂತರ ಎಲ್ಲರಿಗೂ ಕೆಲಸ ಹೆಚ್ಚಂತೆ.

ಸರಿ. ನನ್ನ ಎರಡೂ ಕೈ ಕಟ್ಟಿದ್ದರಿಂದ, ಹಾಗೆಯೇ ಹಾಸಿಗೆ ಮೇಲೆ ಕೂತು, ಕೈ ತೊಳೆಯಲು ಅವಕಾಶವಿಲ್ಲದ್ದರಿಂದ ಚಮಚೆಯಲ್ಲೇ ಊಟದ ಶಾಸ್ತ್ರ ಮುಗಿಸಿದೆ.

ಸ್ವಲ್ಪ ಹೊತ್ತಿನಲ್ಲಿ ಜೊಂಪು ಹತ್ತಿತ್ತು. ಅಷ್ಟರಲ್ಲಿ ಮತ್ತೆ ನನ್ನ ಹೃದಯ ಪರೀಕ್ಷೆಗೆ ಇ.ಸಿ.ಜಿ.ಗೆ ಬಂದರು. ಅದೂ ಮುಗಿದು ನಿದ್ರೆಗೆ ಜಾರಿದೆ. ಅಷ್ಟರಲ್ಲೇ "ಸಾರ್ ನಿಮ್ಮ ಔಷಧಿ" ಎಂದು ನರ್ಸ್ ಬಂದು ಎಬ್ಬಿಸಿದರು. ಅದೇಕೋ ಆಸ್ಪತ್ರೆಯಲ್ಲಿ ಸರಿಯಾಗಿ ನಿದ್ರೆಮಾಡಲೂ ಬಿಡುವುದಿಲ್ಲ. ಎಬ್ಬಿಸಿ, ಔಷಧಿ, ಚುಚ್ಚು ಪರೀಕ್ಷೆಂತ ಮಾಡುತ್ತಲೇ ಇರುತ್ತಾರೆ. ಈ ಮಧ್ಯೆ ಅಕ್ಕಪಕ್ಕದ ರೋಗಿಗಳ ಕೆಮ್ಮು, ನರಳುವಿಕೆ, ಸಿಬ್ಬಂದಿಯನ್ನು ಕರೆಯುತ್ತಿರುವುದು, ಹೊಸ ರೋಗಿಗಳ ಬರುವಿಕೆ, ಟ್ರಾಲಿಗಳ ಕಟಕಟ ಶಬ್ದ, ಹೀಗಾಗಿ ವಿಶ್ರಾಂತಿ ಪಡೆಯುವ ಉದ್ದೇಶ ಸಫಲವಾಗದು.

ನನಗೋ ಮಧ್ಯರಾತ್ರಿ ಎಚ್ಚರವಾಗಿ ಸಿದ್ದಪ್ಪನನ್ನು ಕೂಗಿದೆ.

"ಏನು ಸಾರ್"

"ಸಿದ್ದಪ್ಪ ಸ್ವಲ್ಪ ಮೂತ್ರಿ"

"ಏಯ್, ಅನಂತ ಮೂರ್ತಿ ಪೇಶೆಂಟ್ ಕರೀತಾರೆ ನೋಡೋ!"

"ಯಾವುದೇ ಮೂರ್ತಿ ಬೇಡ, ಮೂತ್ರ, ಮೂತ್ರಿ ಅದೇ, ಯೂರಿನಲ್."

"ಹಾಗೆ ಅರ್ಥವಾಗೋ ಭಾಷೆಯಲ್ಲಿ ಹೇಳಿ" ಎಂದವನೇ ತಂದು ಕೊಟ್ಟ. ಮುಗಿಸಿ ಪುನಃ ನಿದ್ದೆಗೆ ಜಾರಿದೆ.

"ಚಾಯ್" ಮತ್ತೆ ಗದ್ದಲ, ನೋಡಿದರೆ ಬೆಳಿಗ್ಗೆ 4–45, ಐದರ ಸಮಯ. ಸರಿ ಎದ್ದು ಸಿದ್ದಪ್ಪ ಒದಗಿಸಿದ ಬೇಸಿನಲ್ಲಿ ಹಲ್ಲುಜ್ಜಿ, ಮುಖ ತೊಳೆದು 'ಚಾಯ್' ಕುಡಿಯುವುದರಲ್ಲಿ ಅದು ತಣ್ಣಗಾಗಿ ಕೂತಿತ್ತು. ಮತ್ತೆ ಮಲಗುವ ಪ್ರಶ್ನೆಯೇ ಇಲ್ಲ.

ರೋಗಿಗಳ ಓಡಾಟ, ನರ್ಸ್‌ಗಳು ಔಷಧಿ ಹಂಚಿ ಬೆಡ್‌ಶೀಟ್, ದಿಂಬಿನ ಚೀಲ ಬದಲಾಯಿಸುತ್ತಾ ಓಡಾಡುತ್ತಿದ್ದರು ಪಾಪ, ಅವರಿಗೂ ಕೆಲಸ.

ತಿಂಡಿ ಬಂತು. ಎಂಟು ಗಂಟೆ ಸುಮಾರಿಗೆ ಮಗ, ಮೊಮ್ಮಗಳು ನೋಡಲು ಬಂದರು. ಕುಶಲೋಪರಿ ಎಲ್ಲಾ ಆದ ಮೇಲೆ, ನಿದ್ದೆ ಬಂತೇ? ಬಂದು ಮಗ ಕೇಳಿದಾಗ ನನಗೆ ಹೊಟ್ಟೆ ತಳಮಳಿಸಿತು.

ಸ್ವಲ್ಪ ಹೊತ್ತಾದ ಮೇಲೆ, ಮೊಮ್ಮಗಳು "ತಾತ ನಿಮ್ಮ ಕನ್ನಡಕ ಮನೇಲೆ ಹಾಸಿಗೆ ಹಿಂದೆ ಬಿದ್ದಿತ್ತು" ಎಂದಳು. ನಾನು "ಇಲ್ಲವಲ್ಲಾ, ಇಲ್ಲಿ ನನ್ನ ಕನ್ನಡಕ ಇದೆಯಲ್ಲಾ". "ಅಯ್ಯೋ ಅದು ಅಮ್ಮಮ್ಮನ ಕನ್ನಡಕ. ಅವರು ಮನೇಲಿ ಹುಡುಕುತ್ತಿದ್ದರು". "ಹೌದಾ" ಎಂದು ನನ್ನ ದಿಂಬಿನಡಿಯಲ್ಲಿ ಇದ್ದ ಕನ್ನಡಕವನ್ನು ಹಾಕಿಕೊಂಡು ನೋಡಿದರೆ...... ಕಣ್ಣು ಮಂಜು ಮಂಜು. ಮೊಮ್ಮಗಳು ಕೈಯಲ್ಲಿ ಕನ್ನಡಕ ಮತ್ತು ಪೇಪರ್ ಕೊಟ್ಟಳು. ಅದನ್ನು ಹಾಕಿಕೊಂಡು ನೋಡಿದರೆ ಎಲ್ಲಾ ನಿಚ್ಚಳವಾಗಿ ಕಾಣುತ್ತೆ! "ಆಯ್ಯೊ, ತಪ್ಪು ಕನ್ನಡಕಾಂದ್ರೆ, ಕನ್ನಡಕ್ಕೂ ಆಗೋಲ್ಲ". ಖುಷಿಯಿಂದ ನಿಟ್ಟುಸಿರು ಬಿಟ್ಟೆ.

ಸಧ್ಯ, ಎಲ್ಲಾ ಸರಿಯಿದೆಯಲ್ಲಾ. ಅದೇ ಬಹಳ ಸಂತೋಷ. ಇನ್ನು ಈ ಆಸ್ಪತ್ರೆಯಿಂದ ಮನೆಗೆ ಹೋಗೋಣ ಎಂದು ಹೊರಡಲು ಅಣಿಯಾಗಲು ಪ್ರಾರಂಭಿಸಿದೆ. ಏನಾಗುತ್ತಿದೆಯೆಂದು ಎಂದು ಕೇಳಿದ ನರ್ಸ್‌ಗಳಿಗೆ "ನಾವು ಆಸ್ಪತ್ರೆ ಬಿಟ್ಟು ಮನೆಗೆ ಹೋಗುತ್ತೇವೆ. ನನ್ನ ಕಣ್ಣು ಸರಿಯಾಗಿದೆ" ಅಂದೆವು. ಅದಕ್ಕವರು ಅವರು "ಸ್ವಲ್ಪ ತಾಳಿ, ವೈದ್ಯರ ತಂಡ ಬರಲಿ" ಎಂದಳು.

ನಾವು ಅವರ ದಾರಿ ಕಾಯುತ್ತಿದ್ದೆವು. ತಂಡ ಬಂತು. ನಾವು ಮನೆಗೆ ಹೊರಟೆವೆಂದು ಹೇಳಿದೆವು ಅವರಿಗೆ, "ಹಾಗೆಲ್ಲಾ ಹೋಗೋಕೆ ಹೇಗಾಗುತ್ತೆ? ನಿಮಗೆ ಇನ್ನೂ ಪರೀಕ್ಷೆಗಳಾಗಬೇಕು".

"ಇಲ್ಲಾ, ಅದೆಲ್ಲಾ ಏನೂ ಬೇಡ, ನಾವು ಹೋಗುತ್ತೇವೆ".

"ಅದು ಹೇಗೆ ತಕ್ಷಣ ಹೋಗೋಕಾಗುತ್ತೆ? ನಿಮ್ಮನ್ನು ಹೋಗಲು ಬಿಟ್ಟರೆ ನಮ್ಮದು ತಪ್ಪಾಗುತ್ತೆ, ಅಪರಾಧವೇ ಆಗುತ್ತೆ. ನೀವೇನೇ ಕೋರ್ಟಿಗೆ ಹೋಗಬಹುದು."

"ಅಯ್ಯೋ ನೀವು ನಮ್ಮನ್ನು ಕಳುಹಿಸಲಿಲ್ಲವಲ್ಲ. ನಾವೇ ಹೋರಟಿದ್ದಲ್ವಾ?" "ಹಾಗಾದರೆ, – ನಿಮ್ಮ ಸ್ವಯಿಚ್ಚೆಯಿಂದ, ವೈದ್ಯರ ಅನುಮತಿಯಿಲ್ಲದೆ ಹೋಗುತ್ತಿದ್ದೇವೆ" – ಅಂತ ಒಂದು ಮುಚ್ಚಳಿಕೆ ಬರೆದುಕೊಡಿ, ನಂತರ ಬೇಕಾದರೆ ನಿಮ್ಮ ಇಷ್ಟದಂತೆ ಹೋಗಬಹುದು ಅದಕ್ಕೇನಂತೆ", ಎಂದರು ಕಾಗದದ ಮೇಲೆ ಬರೆದುಕೊಟ್ಟು ಹೊರಡಲು ಅಣಿಯಾದೆವು. "ಸ್ವಲ್ಪ ತಾಳಿ ನಿಮ್ಮ ಬಿಲ್ ತಯಾರಿಸುತ್ತಾರೆ. ಅದನ್ನು ಪಾವತಿಸಿದ ಮೇಲೆ ನಿಮಗೆ ಅನುಮತಿ". ಕಾದೆವು. ಸ್ವಲ್ಪ ಸಮಯದ ನಂತರ ಬಿಲ್ ಬಂತು. ಬಿಲ್‌ನೋಡಿ, ಕಣ್ಣಲ್ಲಿ ನೀರು ಬಂದು ಪುನಃ ಕಣ್ಣು ಮಂಜು ಮಂಜಾಯಿತು. ಆದರೆ ಹೇಳಿದರೆ ಎಲ್ಲಿ ಪುನಃ ಈ ಶುಶ್ರೂಷೆಯ ಕಹಿ ಅನುಭವಿಸಬೇಕೋಂತ ಹೆದರಿ ಹಣವನ್ನು ತೆತ್ತು, ಮನೆ ಕಡೆ ಓಟಕಿತ್ತೆವು.

# ನಾಟಕವೂ........ ಮಳೆಯೂ........

**–ಗುಂಡುರಾವ್ ದೇಸಾಯಿ**

ನಮ್ಮ ಕಾರ್ಯಕ್ರಮಕ್ಕೂ ಮಳೆಗೂ ಅವಿನಾಭಾವ ಸಂಬಂಧ. ಯಾವುದೆ ಭಲೋ ಕಾರ್ಯಕ್ರಮ ಹಮ್ಮಿಕೊಂಡಿವಿಲ್ಲೊ ಅಲ್ಲಿಗೆ ವರುಣನ ಆಗಮನ ಆಗಿರತಾದ. ಅದರಾಗ ನಾಟಕ ಸಂಘಟಿಸಿದ್ವಿ ಅಂದ್ರ ಬಿಡದೆ ಬರೋದು. ಬಾಲ್ಯದಾಗೂ ನಮ್ಮೂರ ಕೇಂದ್ರ ಶಾಲೆಯಲ್ಲಿ ವೈಭವದ ಗಣೇಶೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳತಾ ಇದ್ರೂ. ಇಡಿ ಊರೇ ಪಾಲ್ಗೊಳ್ಳತಾ ಇತ್ತು. ಮೂರುದಿನ ಊರ ಹಬ್ಬವಾಗಿಯೇ ಆಚರಿಸಲ್ಪಡತಾ ಇತ್ತೂ. ಆ ಮಧ್ಯ ಒಂದು ದಿನದ ಸಾಂಸ್ಕೃತಿಕ ಕಾರ್ಯಕ್ರಮ. ಅದರಲ್ಲಿ ನೃತ್ಯ, ನಾಟಕ ಎಲ್ಲವೂ ಇರತಿತ್ತು. ಗುರುಗಳಾದ ದೇವೆಂದ್ರಪ್ಪ ಮೇಷ್ಟ್ರು 'ದೈವ ಬಲ' ಅನ್ನೋ ನಾಟಕ ಕಲಿಸಿದ್ರು. ಅದಕ್ಕ ಎಲ್ಲಾ ತಯಾರಿ ಭರ್ತಿಯಾಗಿ ಆಗಿತ್ತು. ಅದರಲ್ಲಿ ನನ್ನ ಸ್ನೇಹಿತ ಗುರುರಾಜನಿಗೆ ಸ್ಟೇಜ ಫೀಯರ್. ಪೇಪರ್ ಓದುತ್ತಾ ಮಾತಾಡಬೇಕಾದ ಸನ್ನಿವೇಶ. ಅವನ ಆ ನಡುಕ, ಎಂಟ್ರಿ ಪಾತ್ರಕ್ಕ ತಕ್ಕಂಗ ಒಪ್ಪಿತ್ತು. ಇಷ್ಟೆಲ್ಲ ಕಷ್ಟಪಟ್ಟು ಹಗಲು ರಾತ್ರಿ ರಿಹರ್ಸಲ್ ಮಾಡಿ ಸಿದ್ಧರಾಗಿದ್ದ ನಮಗೆ ಆ ಸಂಭ್ರಮದ ದಿನ ಬಂದೆ ಬಿಟ್ಟಿತು. ಇನ್ನೇನು ಸಿದ್ಧರಾಗಿ ರಂಗದಮೇಲೆ ಇಳಿಬೇಕು ಅನ್ನುವಷ್ಟರಲ್ಲಿ. 'ಧೋ..' ಎಂದು ಧಾರಾಕಾರವಾಗಿ ಮಳೆ ಉದುರಿತು. ನಮಗಾದ ನಿರಾಸೆ ಅಷ್ಟಿಷ್ಟಲ್ಲ. ಮೇಷ್ಟ್ರೆಲ್ಲಾ ಇಷ್ಟು ವರ್ಷ ಕಾರ್ಯಕ್ರಮ ಮಾಡಿವಿ ಒಮ್ಮೆಯೂ ಮಳಿ ಬರತಿರಲಿಲ್ಲ ಆದರ ಈ ವರ್ಷ ಬಂತು ಅಂತ ಪೇಚಾಡಿದ್ರು. ಆದರ ಮಿತ್ರ ಗುರುರಾಜ ಸಂಭ್ರಮದಲ್ಲಿದ್ದ. "ಅಲ್ಲಲೆ ನಾವೆಲ್ಲ ಒದ್ದಾಡತಿದ್ದಿವಿ. ನೀನಗ್ಯಾಖಲೆ ಖುಷಿ" ಅಂದ್ರೆ "ಸೇರಿದ ಜನಾನ ನೋಡಿ, ದೋಸ್ತಾ ನಾಟಕದ ಡೈಲಾಗೆಲ್ಲ ಮರತ ಬಿಟ್ಟಿದ್ದೆ. ದೇವರು ಪುಣ್ಯಾ ಕಟ್ಟಿಕೊಂಡಾ. ನನ್ನ ಮನವಿನ ಪುರಸ್ಕರಿಸಿದ" ಎನ್ನಬೇಕೆ? ಅವನಿಗೆ ಲಗಾಸದಷ್ಟ ಬಾಕಿ ಉಳದಿತ್ತು.

> **ಡೈಲಾಗ್ ಮರೆತವನಿಗೆ ನಾಟಕದ ದಿನ ಮಳೆ ಬಂದಿದ್ದು ಖುಷಿ ತಂದಿತು..!**

ನವರಾತ್ರಿ ಟೈಮಿನಲ್ಲಿ ನಮ್ಮೂರ ವೆಂಕಟೇಶ ದೇವಸ್ಥಾನದಾಗ ನಿರಂತರವಾಗಿ ಸಾಂಸ್ಕೃತಿಕ ಕಾರ್ಯಕ್ರಮ ನಡಿತಾ ಇದ್ವು. ಹಿರಿಯರಾದ ಛಾಯಶ್ವರಾವ್ ಅವರು ದೇವಸ್ಥಾನದ ಅಧ್ಯಕ್ಷರು, ಸಾಂಸ್ಕೃತಿಕ ವ್ಯಕ್ತಿ. ಸ್ವಾರಸ್ಯಕರವಾಗಿ ಮಾತನಾಡೋರು. ತಬಲಾ. ಹಾರ್ಮೋನಿಯಂ, ಹಾಡು ಎಲ್ಲಾದರಲ್ಲಿ ಅವರ ಮುಂದು. ಎಂತಹ ಪ್ರಗತಿಪರ ಜೀವ ಅಂದ್ರೆ ಪ್ರತಿ ವಾರವೂ ಮನೆಯಲ್ಲಿ ರಾಯರ ಭಜನೆ ಸಂಘಟಸ್ತಿದ್ರು. ರಾಯರ ಭಜನೆ ಬ್ರಾಹ್ಮಣರಿಗೆ ಮಾತ್ರವೇ ಮೀಸಲಾಗಿರಲಿಲ್ಲ ಅಲ್ಲಿ ಎಲ್ಲಾ ಜಾತಿ ಜನಾಂಗದವರು ಬರತಾ ಇದ್ರು. ಇಸ್ಲಾಂ ಧರ್ಮದ ರಾಮದಾಸರ ಹಾಡುಗಳೆಂದರೆ ಅವರಿಗೆ ಪ್ರಾಣ. ಅವನ್ನೆ ಹಾಡುತ್ತಿದ್ದರು. ಪ್ರತಿವಾರವೂ ಎಲ್ಲರಿಗೂ ಆ ಮಾಸದ ವಿಶೇಷ ಹಣ್ಣುಗಳ ಸೀಕರಣಿ, ಚುವಡಾ ಚಾ ಇದ್ದೇ ಇರುತ್ತಿತ್ತು. ಅಂತಹ ವಿಶಾಲ ವ್ಯಕ್ತಿತ್ವದ ಛಾಯಶ್ವರಾವ್ ಅವರು ಒಳ್ಳೆ ಕಲಾವಿದರು. ನನ್ನಲ್ಲಿ ಏನು ಕಂಡರೋ ಗೊತ್ತಿಲ್ಲ. ನನ್ನ ಬಹಳ ಹಚ್ಚಿಕೊಂಡಿದ್ದರು. ನನಗೆ ನಾಟಕ ಮಾಡಲು ಪ್ರೋತ್ಸಾಹಿಸುತ್ತಿದ್ದರು. 'ಶಿಬಿ ಚಕ್ರವರ್ತಿ'ಯ ನಾಟಕವನ್ನು ಮಾಡಿಸಿದ್ದರು. ನವರಾತ್ರಿ ಸಮಯಂದ್ರ ಮಳೆಗಾಲ. ಆ ವರ್ಷ ಮಳೆಯೇ ಇರಲಿಲ್ಲ. ನಾಟಕ ಇಳಿಯಾಕ ಮಳೆ ಸುರವಾಗಕ. ಮಂದಿಯಲ್ಲ ಚಲ್ಲಾಪಿಲ್ಲಿ ಆಗಕತಿದ್ರು. ನಮ್ಮ ಗುರುಗಳು 'ಪಾಪ,

ಮಕ್ಕಳು ಭಕ್ತಿ ಶ್ರದ್ಧೆಯಿಂದ ನಾಟಕ ಅಭ್ಯಾಸ ಮಾಡಿದದಕ ಮಳೆ ಆಗಕತಾದ. ಒಳ್ಳೆ ನಾಟಕದ ನೀವು ನೋಡದೆ ಹೋಗುವಂತಿಲ್ಲ. ದೇವರ ಮ್ಯಾಲೆ ಆಣೆ ಆಗ್ಯಾದ' ಅಂತ ಹೇಳಿದ್ರ ಒಬ್ಬರೂ ಕದಲಿದ್ರ ಕೇಳಿ. ಆಗಿನ ಹಿರಿಯರ ಮಾತು ಅಷ್ಟು ನಡಿತಿತ್ತು. ಮಳೆ ತಾಸಿಮ್ಯಾಲೆ ನಿಂತು ನಾಟಕ ನೋಡಿಯೇ ಮಂದಿ ಹೋದ್ರು. ಛಾಯಶ್ವರಾವ್ ಅವರು ತಾವು ಬರೆದ ನಾಟಕವನ್ನೆಲ್ಲ ನನ್ನಿಂದ ಆಡಿಸೋರು. ಬುದ್ಧಿನ್ನಿ ಅನ್ನೊ ಧಾರ್ಮಿಕ ಸ್ಥಳಕ್ಕ ಕರಕೊಂಡು ಹೋಗಿ ಅಲ್ಲಿಯೂ ಏಕಪಾತ್ರಾಭಿನಯ ಮಾಡಿಸಿದ್ರು. ಅಲ್ಲಿಯೂ ಅವತ್ತ ಮಳಿಬಂತು.

ಇನ್ನೂ ನಮ್ಮ ಓಣಿಯಲ್ಲಿ ಗೆಳೆಯರೆಲ್ಲ ಕೂಡಿ ನಾಟಕ ಆಡೋಣ ಅಂತ ನಿರ್ಧರಿಸಿದಿವಿ. ಆಗ ಈಗಿನಂಗ ಟಿ.ವಿ, ಮೊಬೈಲ, ಕಂಪೂಟರ್‌ಗಳ ಹಾವಳಿ ಇರಲಿಲ್ಲ. ಆಟಗಳೇ ಸರ್ವಸ್ವ. ಕೆಲಸವಿಲ್ಲದಾಗ ಮಾಡುವುದಾದರೂ ಏನನ್ನ? ಫಿಲ್ಮ ರೀಲನ್ನು ತಂದು ಬಲ್ಬನ್ನು ಒಡೆದು ಅದರಲ್ಲಿ ನೀರು ಹಾಕಿ, ಅದನ್ನು ಡಬ್ಬಿಯ ಒಳಗೆ ಇರಿಸಿ. ರಟ್ಟಿನ ಡಬ್ಬಕ್ಕೆ ತೂತು ಹಾಕಿ ರೀಲನ್ನು ಅದರಲ್ಲಿರಿಸಿ ಅದರ ಮೂಲಕ ಕನ್ನಡಿಯಿಂದ ಸೂರ್ಯನ ಬೆಳಕನ್ನು ಹಾಯಿಸಿದಾಗ ಚಿತ್ರಗಳು ದೊಡ್ಡ ದೊಡ್ಡ ಕಾಣವು, ಇಂತವೆ ಅನೇಕ ಆಟಗಳು ಅದರಲ್ಲಿ ನಾಟಕ ಮಾಡ ಹುಚ್ಚು ಬೇರೆ. ಪಾಠದಲ್ಲಿ ಬರುವ ಗದ್ಯವನ್ನೆ ಆರಿಸಿಕೊಂಡು ತಾಲೀಮು ನಡೆಸಿತಿದ್ದಿವಿ. ಬ್ರಾಹ್ಮಣರ ಓಣಿಯ ದೊಡ್ಡ ಕಟ್ಟೆಯಲ್ಲಿ ಅದರ ಶೋ. ಈ ಸಾರಿ ಅಲೆಕ್ಸಾಂಡರ್–ಪೋರಸ್ ನಾಟಕ ಮಾಡಿದಿವಿ. ಅದರಲ್ಲಿ ನನ್ನದು ಅಂಬಿ ಪಾತ್ರ. ಈಗ ಅಧುನಿಕ ಪ್ರಯೋಗಳೆನವಲ್ಲ ಅದನ್ನ ಅಂದೆ ಮಾಡಿದ್ವಿ. ಕಲರ್ ಟವಲ್ನ ಹಿಂದ ಕಟ್ಟಿಕೊಂಡು ಬಳ್ಳಿಯನ್ನು ಕಿರೀಟದಂತೆ ಧರಿಸಿಕೊಂಡು, ಹರಕು ಮುರುಕ ಕಲರ್ ಅಂಗಿ ಹಾಕಿಕೊಂಡು ಯಾವುದೋ ಬಡಿಗೆಗೆ ಈಟಿ ಹಾಂಗ ರಟ್ಟನ್ನು ಚುಚ್ಚಿ. ಹಿಂಗ ಮಾಡೋದು. ಸ್ಕ್ರೀನ್ ಬೇಕಲ್ಲ. ದೊಡ್ಡ ಚಾದಾರವೇ ಸೀನ್ರಿ, ರಾಮಸಿಂಗ್ ಮೇಷ್ಟ್ರ ಮನೆಯ ಮುಂದಿನ ಲೈಟೆ ಬೆಳಕು, ಕಟ್ಟೆಯ ವೇದಿಕೆ. ನಮ್ಮ ನಾಟಕಕ್ಕ ಪ್ರೇಕ್ಷಕರ ಕೊರತೆ ಇರಲಿಲ್ಲ. ಐವತ್ತು ಅವರತ್ತು ಮಂದಿ ಕಾಯಂ. ಅದರಗ ವೆಂಕಟರಾವ್ ಮೇಷ್ಟ್ರು ಅಂತ. ಅವರಿಗೆ ಹುಡುಗರನ್ನ ಕಂಡ್ರ ಆಗತಿರಲಿಲ್ಲ. ಅವರು ಓಣ್ಯಾಗ ಬರುವಾಗ ಹೋಗಾಗ ಸೈಲೆಂಟಾಗಿರಬೇಕು. ಅವರ ಇಲ್ಲದ ದಿನದಾಗ ಮಾಡಿ ಸೈ ಅನಿಸಿಕೊಂಡಂವಿ. ಅವರ ಮಗನೂ ಅದರಾಗ ಪಾತ್ರಧಾರಿ. ಸುದ್ದಿಗೊತ್ತಾಗಿ ನಾಟಕ ಮಾಡ್ತಿರಾಪ ಮಾಡ್ರಿ ಮಾಡ್ರಿ ನಾನು ನೋಡ್ತಿನಿ ಅಂತ ಸಿದ್ಧತೆ ಮಾಡಾಕ ತಿಳಿಸಿದ್ರು. ಮೊದಲ ಅವರನ್ನ ಕಂಡ್ರ ನಡುಕ. ಇನ್ನೂ ಅವರ ಮುಂದ ಡೈಲಾಗ ಹೊಡಿಯೋದಾ! ಸಾಧ್ಯನ ಇರಲಿಲ್ಲ. ಅದರಾಗ ಅವರ ಉದ್ದೇಶ ನಾಟಕ ನೋಡಿ ಪ್ರಶಂಸೆ ಮಾಡದಕೊ ಅಥವಾ ಹೊಡಿಯೋದು ಅದೂ ಗೊತ್ತಿರಲಿಲ್ಲ. ಮಗ ಕ್ಲೂ ಕೊಟ್ಟಿದ್ದ. ಮಾನ್ಯಾಗ ಜಗಳಾಗ್ಯಾದ ಸಿಟ್ಟಿನ್ಯಾಗಿದರ ನಮಗೇನು ಕಾದಿದೆಯೋ ಎಂದ. ಮೊದಲೆ ಒತ್ತಾಯದ ಒಲ್ಲದ ನಾಟಕ. ಖಂಡಿತವಾಗಿ ಅವರಿಗೆ ಹಿಡಿಸುತ್ತಿರಲಿಲ್ಲ. ಆದರೂ ದೇವರ ಮ್ಯಾಲಿ ಭಾರ ಹಾಕಿ ಸುರು ಹಚ್ಚಿಕೊಳ್ಳಬೇಕೆನ್ನುವಷ್ಟರಲ್ಲಿ ವರುಣದೇವ ಕಣ್ಣು ತೆರೆದ ಮಳೆ ಭೋರ್ಗರೆಯಾಗಿ ಸುರಿತು. ನಾಟಕ ನಿಂತಿತು ನಾವು ಬಚಾವ್ ಆದ್ವಿ.

ಮುಂದೆ ಕಾಲೇಜಿಗೆ ಬಂದ ಮೇಲು ಊರಾಗ ಬಂದಾಗ ಹಳ್ಳಿ ಮೇಷ್ಟ್ರು, ರಿಹರ್ಸಲ್ ಗಡಿಬಿಡಿ ನಾಟಕ ಮಾಡಿದ್ವಿ ಮಾಡಿಸಿದ್ವಿ, ಬಳ್ಳಾರಿಯಲ್ಲಿದ್ದಾಗ ಯುನಿವರ್ಸಿಟಿಗಾಗಿ ರಂಗೋತ್ಸವಕ್ಕಾಗಿ ನಾಟಕದ ತಾಲೀಮು ನಡೆಸಿದ್ರು. ಅದರಲ್ಲಿ ಭಾಗವಹಿಸುವ ಅವಕಾಶ ಸ್ವಲ್ಪದ್ರಾಗ ಮಿಸ್ ಆಯ್ತು. ಆಮೇಲೆ ಬರವಣಿಗೆಯತ್ತ ಒಲವು ಇದ್ದರೂ ನಾಟಕದ ಒಲವು ಮಾತ್ರ ಹೋಗಲಿಲ್ಲ.



ಉದ್ಯೋಗದಲ್ಲಿ ತೊಡಗಿದ ಮೇಲು ಮಕ್ಕಳಿಗಾಗಿ ಏನಾದ್ರೂ ಮಾಡಬೇಕೆಂಬ ತುಡಿತದಲ್ಲಿ ನಾಟಕ ಸಂಘಟಿಸಿದ್ವಿ, ಕಮ್ಮಟ ಮಾಡಿದ್ವಿ. ರಂಜಾನಸಾಬ ಎನ್ನುವ ನಿರ್ದೇಶಕರ ನೆರವಿನಿಂದ ನಮ್ಮೂರಿನ ಹಿರಿಯ ಸಾಹಿತಿಗಳಾದ ಮಹಾಂತೇಶ ಮಸ್ಕಿ , ವೀರೇಶ ಸೌದ್ರಿ ಮೊದಲಾದವರೆಲ್ಲ ಸೇರಿಕೊಂಡು 25 ದಿನಗಳ ಮಕ್ಕಳ ಕಮ್ಮಟ ಮಾಡಿದ್ವಿ. ಅದರ ಮೇನ್ ಥೀಮ್ ನಾಟಕ ಕಲಿಸುವದಾಗಿದ್ದರೂ ಸಂಪನ್ಮೂಲ ಶಿಕ್ಷಕ ಬಳಗದಿಂದ ಸಂಗೀತ, ಚಿತ್ರಕಲೆ, ಕ್ಲೇ ಮಾಡಲಿಂಗ್, ಕ್ರಾಫ್ಟ್, ಮ್ಯಾಜಿಕ್ ಸೈನ್ಸ್, ಮ್ಯಾಥ್ಸ್, ಸ್ಪೋಕನ್ ಇಂಗ್ಲೀಷ್ ಹೀಗೆ ಒಂದೆ ವೇದಿಕೆಯಡಿ ಹಲವು ಕಾರ್ಯಕ್ರಮಗಳು. ಅದಕ್ಕೆ ಫೀ ಕೇವಲ ಐವತ್ತು ರೂಪಾಯಿ ದಿನಕ್ಕೆ ನೂರಾರು ರೂಪಾಯಿ ಖರ್ಚಿತ್ತು. ಆರಂಭಕ್ಕೆ ಆತಂಕದಿಂದ ಇದ್ದ ನಮಗೆ ನಾಲ್ಕೈದು ದಿನವಾಗುವಷ್ಟರಲ್ಲಿ ಸಂಖ್ಯೆ ಐವತ್ತೇರಿತು. ಇನ್ನೇರಡು ದಿನಗಳಿಗೆ ನೂರಕ್ಕೆ ಸಮೀಪಿಸಿತ್ತು. ಎರಡು ನಾಟಕಗಳ ಗುರಿ ಇಟ್ಟುಕೊಂಡಿದ್ದರಿಂದ ಅದರತ್ತ ಲಕ್ಷ ಇದ್ದರೆ ಇತ್ತ ಮಕ್ಕಳನ್ನು ದಬ್ಬುವ ಸಂಖ್ಯೆ ಜಾಸ್ತಿ ಆತು. ದೇವಿಗುಡ್ಯಾಗ ನಾಟಕ ಕಲ್ಸತಾರ ಅಂದು ಬಿಟ್ಟು ಚಿಕ್ಕ ಮಕ್ಕಳನ್ನು ಬಿಟ್ಟು ಹೋಗಾಕ ಹತ್ತಿದ್ರು. ಆದರ ನಾವು ಆಕ್ಷೇಪಣ ಮಾಡಿದದಕ 'ಅಲ್ರೀ ನಿಮ್ಮ ಫೀಸು ಐವತ್ತು ರೂ. ತೋಗರಿ ಬೇಕಾದ್ರ ನೂರ ತೋಗೋರಿ, ಮನ್ಯಾಗ ಇವರದು ಕಿರಿಕಿರಿ ಬಾಳ ಆಗ್ಯಾದ ಇಲ್ಲೆರ ನೀವು ನೋಡತಿರತಿರಿ' ಎನ್ನುವ ಅಭಿಪ್ರಯಾಕ್ಕ ಬರಬೇಕೆ? ಪುಗಸಟ್ಟೆ ಮಾಡಿದದ ಇಷ್ಟೆಲ್ಲ ಅನುಭವಿಸಬೇಕಾತ! ಇವೆಲ್ಲಗಳ ಮಧ್ಯ ತ.ರಾ.ಸು ಅವರ ದುರ್ಗಾಸ್ತಮಾನ ನಾಟಕವನ್ನು ರಂಗಕ್ಕಿಳಿಸುವ ಯೋಚನ ರಂಜಾನ ಸಾಬ ಅವರದು. ಅದಕ್ಕಾಗಿ ಅವರು ಪಟ್ಟ ಶ್ರಮ ಅಷ್ಟಿಷ್ಟಲ್ಲ. 80–90ಮಕ್ಕಳನ್ನು ಬಳಸಿಕೊಂಡು ಅದಕ್ಕೆ ಖಳೆ ತಂದಿದ್ದರು, ನಮ್ಮ ಶಿಕ್ಷಕಕ ಮಿತ್ರರೆಲ್ಲ ಸೇರಿ ಥರ್ಮೊಕೋಲನಿಂದ ಕೋಟೆ, ಪಲ್ಲಕ್ಕಿ, ಏನೆಲ್ಲ ರಂಗ ಪರಿಕರಗಳನ್ನು ಕಿರಿಟ, ಇನ್ನಿತರ ವಸ್ತುಗಳನ್ನು ನಿರ್ಮಿಸುವ ಕಾರ್ಯ ಭರದಿಂದ ಸಾಗಿತ್ತು. ಐದು ವೇದಿಕೆಗಳಲಿ ನಾಟಕ ನಡೆಸುವುದು. ಅದಕ್ಕಾಗಿ ಗುಲಬರ್ಗಾದಿಂದ ಹದಿನಾಲ್ಕು ಸಾವಿರ ಕೊಟ್ಟು ಸ್ಪಾಟ್ ಲೈಟು ಮೊದಲಾದವುಗಳನ್ನು ತರಿಸಲಾಗಿತ್ತು. ಅದಾ ಟೈಮಿಗೆ ಯೋಗ ಸಮಿತಿಯವರು ಸಮಾರೋಪ ಸಮಾರಂಭ ಹಮ್ಮಿಕೊಂಡಿದ್ರು. ಇನ್ನೇನು ಅದು ಮುಗಿದು ನಾಟಕ ಸ್ಟಾರ್ಟ ಆಗಬೇಕು ಅನ್ನುವಷ್ಟರಲ್ಲಿ ಎಲ್ಲಿತ್ತೊ ಎಲ್ಲಿಲ್ಲೋ ಮಳೆ 'ಧೋ.....' ಎಂದು ಸುರಿಯಾಕತಿತು. ಮೊದಲೆ ಅನೇಕ ತ್ರಾಸುಗಳ ಮಧ್ಯೆ ತಾಲೀಮು ನಡೆಸಲಾಗಿತ್ತು. ಮರಮಳೆ ಬೀಡದೇ ಕಾಡಿತ್ತಿ ಅದಕ್ಕಾಗಿ ಶ್ರಮಪಟ್ಟ ಮಕ್ಕಳ ನಮ್ಮ ಕಣ್ಣಲ್ಲಿ ಅಶ್ರು ಧಾರಾಕಾರವಾಗಿ ಸುರುವಕತ್ತಿತ್ತು. ತಾಸಾದ್ರ ಬಿಡದ ಮಳೆ, ಆಲ್ಲಿ ಇಲ್ಲಿ ರೊಕ್ಕ ಹೊಂದಿಸಿ ಪ್ರದರ್ಶನಕ್ಕ

ಅಣಿಗೊಳಿಸಿದ್ವಿ. ನೀರಾಗ ಹೋಮ ಮಾಡಿದ ಹಾಗಾಯ್ತು. ಊರಾಗ ಹಿರಿಯರೆಲ್ಲರೂ ಬಂದಿದ್ದರು. ಮಕ್ಕಳ ಅಳು ನೋಡಲಾಗದೆ ಮರುದಿನ ಆಡಸೋಣ ಅಂದ್ರು ಆದರ ಗುಲ್ಬರ್ಗಾದಿಂದ ಬಂದ ಲೈಟಿನವರು ಮರುದಿನ ಯಾವುದೆ ಕಾರ್ಯಕ್ರಮದಲ್ಲಿ ಎಂಗೇಜ ಆಗಿದ್ದರಿಂದ ಅವರು ಹೋಗಲೆಬೇಕಾಗಿತ್ತು. ಅಲ್ಲಿಂದ ಇಲ್ಲಿ ಬಂದದ್ದಕ್ಕಾಗಿ 120000ರೂಗಳನ್ನು ವಿನಾಕಾರಣ ಕೊಟ್ಟು ಕಳಿಸಲೇಬೇಕಾಯಿತು.

ಇತ್ತಿಚೀಗೆ ನಾಟಕ ಅಕಾಡೆಮಿಯಿಂದ ಗಿರಿಜನ ಯೋಜನೆ ಅಡಿಯಲ್ಲಿ ವಿದ್ಯಾರ್ಥಿಗಳಿಗೆ ಆತ್ಮೀಯ ಬಳಗದ ಸಹಕಾರದಲ್ಲಿ ರಂಗ ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿತ್ತು. ಒಂದು ದುರಂತ ಅಂದ್ರೆ ಅಕಾಡೆಮಿಗಳಲ್ಲಿ ದಲಿತ, ಗಿರಿಜನ, ಹಿಂದುಳಿದ ವರ್ಗ, ಅಲ್ಪಸಂಖ್ಯಾತ ಎಂದು ವರ್ಗಿಕರಿಸಿ ಅವರಿಗಾಗಿ ಕಾರ್ಯಕ್ರಮಗಳನ್ನು ಸಂಘಟಿಸುತ್ತಿರುವುದು. ಸಂಘಟನೆ ಮಾಡಲಿ ಪ್ರತಿಶತಃ 75ರಷ್ಟು ಅಂತಹ ವರ್ಗಕ್ಕೆ ಇರಿಸಿ 25ರಷ್ಟು ಎಲ್ಲರಿಗೂ ಇಡಬೇಡವೇ?. ಉದ್ಘಾಟನಾ ಸಮಾರಂಭದಲ್ಲಿ ಯೋಜನೆಯ ಬಗ್ಗೆ ತಿಳಿದ ಮಕ್ಕಳು ತಮ್ಮತಮ್ಮಲ್ಲೆ ಗುಸುಗುಸು ಮಾತಾಡಿಕೊಂಡು ಹಿಂದಕ್ಕ ಸರದ್ವು. ಉದ್ದೇಶ ಏನೆ ಇದ್ದರೂ ಆಸಕ್ತ ಪ್ರತಿಭೆಗಳಿಗೆ ಅವಕಾಶವಿದೆ ಎಂದು ಹೇಳಿದ್ರು ತಯಾರಾಗಲಿಲ್ಲ. ಅಮೇಚೂರ ನಾಟಕ ನೋಡಿದ ಈ ಮಕ್ಕಳಿಗೆ ಸಾಮಾಜಿಕ ನಾಟಕದಂತೆ ಇವು ಇರುತ್ತೆ ಅಂತ ತಿಳಕೊಂಡಿದ್ರೇನೋ ಸರ್ ಅಂತಹ ನಾಟಕ ಮಾಡಿದ್ರ ಮನ್ಯಾಗ ಬಯ್ಯತಾರಿ ಅಂದು ದೂರಾದ್ವು. ಆದರೆ ಹೆಣ್ಣು ಹುಡಗಿಯರು ತಮ್ಮತನ ತೋರಿಸಲು ಮುಂದ ಬಂದ್ರು. ಬಂದವರಿಗೆ ಅಪ್ಪ ಅಣ್ಣ ಅನಕೋತ ನಾಟಕದ ತಾಲೀಮು ಆರಂಭವಾತು. ವಾರಕಳದಂಗೆಲ್ಲಾ ಒಂದೊಂದ ಸೋಗು ತೆಗೆಯುವವು. ಪಾಪ ನಮ್ಮ ಗುರುರಾಜ ಹೊಸಪೇಟೆಯವರು ಅಣ್ಣೋರ, ಅಕ್ಕೋರ ಅನಕೊಂತ ಅವರಿಗೆ ನಾಷ್ಟ ಊಟಾ ಎಲ್ಲಾ ಮಾಡಿಸುತ್ತ ದಿನ ಸಾಗಹಾಕಿದ. ಪ್ರಾಜೆಕ್ಟ ಮುಗಿಯಲೇ ಬೇಕಾಗಿತ್ತಲ್ಲ. ಬರತಾ ಬರತಾ ಕೆಲ ಹುಡುಗರು ನಮ್ಮಿಂದನ ನಾಟಕ ಅನ್ನುವಷ್ಟ ಮಟ್ಟಿಗೆ ಸೊಕ್ಕಿಗೆ ಬಂದ್ವು. ಅದರಲ್ಲಿ ನಾಟಕದ ಮೇನ್ ಕ್ಯಾರೆಕ್ಟರ್ ಆಗಿದ್ದ ರಾಜ ಯವುದೋ ಕಾರಣಕ್ಕ ಸಿಟ್ಟಿಗೆದ್ದು ಗುಡ್ಡದ ಮ್ಯಾಲೆ ಹೋಗಿ ಕುಳಿತಿದ್ದ. ಅವನ ರಮಿಸಿ ಕರಕೊಂಡು ಬರಕ ಸಾಕುಬೇಕಾಯಿತು. ಅಲ್ಲದ ಮೊದಲೆ ಮೋಡ ಸೋಗ ಹಾಕತೊಡಗಿತು. ನಾವು 'ಗುರುರಾಜ ಅವರೆ ನಮಗೂ ಮಳಿಗೂ ಮಳೆಯ ನಂಟು ಬಾಳ ಚೆನ್ನಾಗೆದ. ಮಳಿ ಜೋರು ಬರಂಗ ಕಾಣುತ್ತೆ ಒಳಗೆ ಸೆಟ್ ಅಪ್ ಮಾಡಿಕೊಂಡು ಬಿಡೋಣ' ಅಂದ್ವಿ. ಗುಡ್ಡದಲ್ಲಿ ಸೆಟಗೊಂಡು ಕುಳಿತವನ ಸಮಾಧಾನಿಸಿ ಕರಕೊಂಡು ಬರೋದು ಆಯ್ತು. ನಾಟಕ ಸುರು ಹಚ್ಚೊಕ್ಕೊಳ್ಳೊದು ಆತು. ಅದುವರಗೂ ಈಗ ಆಗ ಅನ್ನುವಂತಿದ್ದ ಕರಿಮುಗಿಲು ನಾಟಕ ಸುರುವಾಗುತ್ತಿದ್ದಂತೆ ಹನಿ ಉದರಿದ್ರ ಕೇಳ್ರಿ. ನಾಟಕ ಚಲೋ ಆತು ಆದ್ರ ಎಲ್ಲರ ಬಾಯಲ್ಲಿ ಬಯಲಿಗೆ ಆಗಿದ್ರ ಇನ್ನೂ ಚೆನ್ನಾಗಿರುತ್ತಿತ್ತು ಎಂದು. ಒಬ್ಬರೂ ಹಿರಿಯರು ಬಂದು 'ದೇಸಾಯೋರ ಎಂತಾ ಕೆಲಸ ಮಾಡಿಬಿಟ್ಟಿರಿ. ಜನ ಮಳಿ ಇಲ್ಲ ಇಲ್ಲ ಅಂತ ಹಲಬಕತಾರ ನೀವು ಹಿಂಗ ಮಾಡೋದಾ?' ಅಂದ್ರು. ನನಗ ತಲೆಬುಡ ಅರ್ಥವಾಗದೆ 'ಏನ್ರೀ?' ಎಂದೆ ಪ್ರಶ್ನಾರ್ಥಕ ದೃಷ್ಟಿಯಲ್ಲಿ. ಏನ ಹೇಳೋಣರಿ ತಿಳಿದವರಾಗಿ. ರೈತರ ಕಷ್ಟ ಹ್ಯಾಂಗ ಗೊತ್ತಾಗಬೇಕು. ನೀವು ನಾಟಕ ಹೊರಗ ಮಾಡಿದ್ರ ಮಳಿ ಬರಾಬರತಿತ್ತು. ನಿಮ್ಮ ನಾಟಕ ನಿಲ್ಲತ್ತ ಅಂತ ಸಂಕಟಕ್ಕ ಒಳಗ ಮಾಡಿ ಹೊಟ್ಟಿಮ್ಯಾಲೆ ಕಲ್ಲಾಕಿ ಬಿಟ್ಟಿರಿ ಎಂದು. ನನಗ ಮಾತಾ ಬಾರದಾಗಿತ್ತು. ಈಗಲೂ ಮಳಿಬರಲಿಲ್ಲ ಅಂದ್ರ ಮಾಷ್ಟ್ರಿಗೆ ಅದೇನೋ ಹುಚ್ಚುನಾಗಿ ಮಕ್ಕಳಿಗೆ ಅದು ಮಾಡಬೇಕು ಇದು ಮಾಡಬೇಕು ಅಂತಿರತಾರಲ್ಲ ನಾಟಕ ಸುರು ಹಚ್ಚಿಕೊಳ್ಳಾಕ ಹೇಳ್ರಿ ಅನ್ನೊದನ್ನ ಮರೆಯೋದಿಲ್ಲ.